
ಸಂಪುಟ: 05 ಸಂಚಿಕೆ: 353 ಪುಟಗಳು: 08 ಶನಿವಾರ 07 ಮಾರ್ಚ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ವಿಕಾಸವೇ ಜೀವನ,
ಸಂಕೋಚವೇ ಮರಣ,
ಪ್ರೇಮವೆಲ್ಲಾ ವಿಕಾಸ,
ಸ್ವಾರ್ಥವೆಲ್ಲಾ ಸಂಕೋಚ,
ಆದುದರಿಂದ ಪ್ರೇಮವೇ
ಬದುಕಿನ ಧರ್ಮ

# ಉದಯ ವಾಹಿನಿ
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ




**ಸಿದ್ದರಾಮಯ್ಯ 17ನೇ ಬಾರಿ ಬಜೆಟ್ ಮಂಡಿಸುವ ಮೂಲಕ ತಮ್ಮದೇ ದಾಖಲೆ ಮುರಿದಿದ್ದಾರೆ. ಈ ಮೂಲಕ ಕರ್ನಾಟಕ ಇತಿಹಾಸದಲ್ಲೇ ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ ನಾಯಕನಾಗಿದ್ದಾರೆ. ಜತೆಗೆ ರಾಷ್ಟ್ರಮಟ್ಟದಲ್ಲಿ 2ನೇ ಸ್ಥಾನದಲ್ಲಿದ್ದಾರೆ. ಕೇಂದ್ರ ಸರ್ಕಾರ ಜಿಎಸ್‌ಟಿ ಕೊಡದಿದ್ದರಿಂದ ರಾಜ್ಯದ ಬೆಳವಣಿಗೆ ಕಡಿಮೆಯಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಕಿಡಿಕಾರಿದರು.**


ಬೆಲೆ ಕುಸಿತದಿಂದ ಕಂಗಾಲಾಗಿರುವ ನಮ್ಮ ಅನ್ನದಾತ ರೈತರಿಗೆ ಮಾರುಕಟ್ಟೆ ಮಧ್ಯಪ್ರವೇಶಕ್ಕೆ ಕೇವಲ 100 ಕೋಟಿ ರೂ.ನೀಡಿರುವುದು ರೈತರ ಮೂಗಿಗೆ ತುಪ್ಪ ಸವರುವ ಕೆಲಸ! ತನ್ನ ಆಡಳಿತ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಪ್ರತಿ ಬಾರಿಯಂತೆ ಕೇಂದ್ರದ ಮೇಲೆ ಗೂಬೆ ಕೂರಿಸುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹವ್ಯಾಸವಾಗಿಬಿಟ್ಟಿದೆ. ಇದು ಪ್ರಗತಿಪರ ಬಜೆಟ್ ಅಲ್ಲ, ಇದು ಕರ್ನಾಟಕದ ಪಾಲಿಗೆ ಮತ್ತೊಂದು ಟೊಳ್ಳು ಭರವಸೆಯ ಬಜೆಟ್. ಕಾಂಗ್ರೆಸ್ ಅಧಿಕಾರಕ್ಕೆ ಬಂದ 3 ವರ್ಷದಿಂದ ರಾಜ್ಯದ ಪ್ರಗತಿ ರಥಕ್ಕೆ ಹಾಕಿರುವ ಬ್ರೇಕ್ ಅನ್ನು ಈ ಬಾರಿಯೂ ತೆಗೆದಿಲ್ಲ ಅನ್ನುವುದೇ ವಾಸ್ತವ'

-ಬಿ.ವೈ. ವಿ ಬಿಜೆಪಿ ಅಧ್ಯಕ್ಷ


ಹೊಸ ಪದಪುಂಜಗಳನ್ನು ಹೊಸೆಯುವುದಕ್ಕೆ ನೀಡಿದ ಆದ್ಯತೆಯನ್ನು ಹೊಸ ಯೋಜನೆಗಳ ಸೃಷ್ಟಿಗೆ ನೀಡದೆ ಇರುವುದು ರಾಜ್ಯದ ದೌರ್ಭಾಗ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನ ಒಟ್ಟಾರೆ ಹೂರಣ 'ಬೃಹತ್ ಶೂನ್ಯ' ಈ ಬಾರಿಯ ಬಜೆಟ್ ಅನ್ನು '11 ಜಿ' ಮಾದರಿಯಲ್ಲಿ ರೂಪಿಸಲಾಗಿದೆ ಎಂದು ಸಿದ್ದರಾಮಯ್ಯನವರು ಬಜೆಟ್‌ನ ಪೀಠಿಕೆಯಲ್ಲಿ ಹೆಮ್ಮೆಯಿಂದ ಹೇಳಿದ್ದಾರೆ. ಆದರೆ, ಇಲಾಖಾವಾರು ಬಜೆಟ್ ವಿಶ್ಲೇಷಣೆ ನಡೆಸಿದಾಗ ಇದು 11 ಜಿ ಬಜೆಟ್ ಬದಲಾಗಿದೆ '11 ಲೈ' ಬಜೆಟ್.

-ಸುನಿಲ್ ಕುಮಾರ್ ಶಾಸಕ


ರಾಜ್ಯಕ್ಕೆ ಹೆಚ್ಚು ಆದಾಯ ಬರಲಿದೆ ಎಂಬ ನಾಟಕವನ್ನು ಈ ಬಾರಿ ಮಂಡಿಸಿದ ಬಜೆಟ್‌ನಲ್ಲಿ ಮಾಡಿದ್ದಾರೆ. ಸಿಎಂ ಸಿದ್ದರಾಮಯ್ಯನವರು ಅಂಕಿ-ಅಂಶಗಳಲ್ಲಿ ಆಟ ಆಡಿದ್ದಾರೆ. ಸಾಲದ ಪ್ರಮಾಣದಲ್ಲಿ ಸುಮಾರು 16 ಸಾವಿರ ಕೋಟಿ. ಏರಿಕೆಯಾಗಿದ್ದು, ಈ ಹಣದಲ್ಲಿ ಬಡ್ಡಿ ಪಾವತಿ ಮೊತ್ತ ಕಳೆದ ವರ್ಷಕ್ಕಿಂತ 7ಸಾವಿರ ಕೋಟಿ ರೂ. ಹೆಚ್ಚಾಗಲಿದೆ. ವಿತ್ತೀಯ ಶಿಸ್ತಿನ ನಿಯಮವನ್ನು ಪಾಲಿಸುತ್ತಿದ್ದೇವೆಂಬ ಕಾರಣಕ್ಕೆ ಸಿದ್ದರಾಮಯ್ಯನವರು ಅಂಕಿ-ಸಂಖ್ಯೆ ಬದಲಿಸುವ ಜಾದೂಗಾರನಂತೆ ಈ ಬಜೆಟ್ ಅನ್ನು ಮಂಡಿಸಿದ್ದಾರೆ. ಈ ಬಜೆಟ್ ಆರ್ಥಿಕ ಶಿಸ್ತಿನ ಪಾವಿತ್ರ್ಯ ಹೊಂದಿಲ್ಲ.

-ಛಲವಾದಿ ನಾರಾಯಣಸ್ವಾಮಿ
ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ


ರಾಜ್ಯ ಸರಕಾರದ್ದು 4.48 ಲಕ್ಷ ಕೋಟಿ ರೂ. ಗಾತ್ರದ ಬಜೆಟ್ ಆಗಿದ್ದು, ಈಗಿನ ಒಟ್ಟು ಸಾಲ 8.24 ಲಕ್ಷ ಕೋಟಿ ರೂ.ಆಗಿದೆ. ಸಾಲ ಕಳೆದ ವರ್ಷದಿಂದ ಈ ವರ್ಷಕ್ಕೆ 1.16 ಲಕ್ಷ ಕೋಟಿ ರೂ.ಗಳಿಂದ 1.32 ಲಕ್ಷ ಕೋಟಿ ರೂ.ಗಳಿಗೆ ಏರಿದೆ. ಮುಂದಿನ ವರ್ಷಕ್ಕೆ 9 ಲಕ್ಷ ಕೋಟಿ ರೂ. ಮೀರುವುದು ನಿಶ್ಚಿತ. ಸಾಲ ಮಾಡುತ್ತಿದ್ದೀರಿ, ಸರಿ. ಅದನ್ನು ಏಕೆ ಬಳಕೆ ಮಾಡುತ್ತಿದ್ದೀರಿ ಸಾಲಕ್ಕೆ ತಕ್ಕಂತೆ ಬಂಡವಾಳ ವೆಚ್ಚವೂ ಆಗಬೇಕಲ್ಲವೇ ದುರಂತವೆಂದರೆ, ಬಂಡವಾಳ ವೆಚ್ಚ ಎಲ್ಲಿದೆಯೋ 3 ವರ್ಷಗಳಿಂದ ಅಲ್ಲೇ ಇದೆ. ಇವರು ಸಾಲ ಮಾಡಿ ಮೋಜು ಮಾಡುತ್ತಿದ್ದಾರೆ. ಅನುತ್ಪಾದಕ ವೆಚ್ಚಕ್ಕೆ ಹಣ ಪೋಲಾಗುತ್ತಿದ್ದು ಈ ಸರಕಾರ ಕಾಂಗ್ರೆಸ್ ಕಾರ್ಯಕರ್ತರಿಗೆ ಗಂಜಿ ಕೇಂದ್ರವಾಗಿದೆ. ಸಾಲದ ದುಡ್ಡು ಅವರ ಕಿಸೆಗೆ ಹೋಗಿ ಸೇರುತ್ತಿದೆ.


-ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

# ಸಿದ್ದು ದಾಖಲೆಯ ಹೊಸ ಆಯವ್ಯಯ

## ದೇವರಾಜ್ ಅರಸು ದಾಖಲೆ ಮುರಿದ ಸಿದ್ದರಾಮಯ್ಯ

## ಬೆಂಗಳೂರಿಗೆ ಮಹತ್ವದ ಘೋಷಣೆಗಳು

## ತಮ್ಮೂರಿಗೆ ಉಡುಗೊರೆ ಕೊಟ್ಟ ಸಿದ್ದು




• ಉದಯವಾಹಿನಿ, ಬೆಂಗಳೂರು


2026-27ನೇ ಸಾಲಿನ ಬಜೆಟ್ ಮಂಡಿಸಿದ ಬಳಿಕ ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯದ 2026-27ನೇ ಸಾಲಿನ ಮುಂಗಡ ಪತ್ರ ಮಂಡಿಸಿದ್ದೇನೆ. ರಾಜ್ಯದ ಅಭಿವೃದ್ಧಿಗೆ ಪೂರಕವಾದ ಬಜೆಟ್ ಮಂಡಿಸಿದ್ದೇನೆ. ಕಳೆದ ವರ್ಷಕ್ಕಿಂತ ಈ ಬಾರಿ 38,455 ಕೋಟಿ ಹೆಚ್ಚಾಗಿದೆ ಎಂದರು. ಇನ್ನು ಮುಂದುವರಿದು ಮಾತನಾಡಿದ ಅವರು, ಕೇಂದ್ರ ಸರ್ಕಾರ ಜಿಎಸ್‌ಟಿ ಕೊಡದಿದ್ದರಿಂದ ರಾಜ್ಯದ ಬೆಳವಣಿಗೆ ಪ್ರಮಾಣ ಶೇ.4ರಷ್ಟು ಕಡಿಮೆಯಾಗಿದೆ. ಕೆಲ ರಾಜ್ಯಗಳು ಇನ್ನೂ ಚೇತರಿಕೆ ಕಂಡಿಲ್ಲ. ಆದರೂ ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ ಎಂದು ಹೇಳಿದರು. ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರುತ್ತಿದೆ. ರಾಜ್ಯಕ್ಕೆ ಬರಬೇಕಿದ್ದ ಪಾಲು 10,000 ಕೋಟಿ ರೂ ಕಡಿಮೆಯಾಗಿದೆ. ಮುಂದೆ ಇದು 15 ಸಾವಿರ ಕೋಟಿ ರೂ ಕಡಿಮೆಯಾಗುತ್ತದೆ. ಆದರೆ ನಾವು ವಿತ್ತೀಯ ಶಿಸ್ತು ಉಲ್ಲಂಘನೆ ಮಾಡಿಲ್ಲ ಎಂದು ಹೇಳಿದರು.

17ನೇ ಬಾರಿಗೆ ದಾಖಲೆಯ ಬಜೆಟ್ ಮಂಡಿಸುತ್ತಿರುವ ಸಿಎಂ ಸಿದ್ದರಾಮಯ್ಯ ರಾಜ್ಯದ ಬೆಂಗಳೂರನ್ನು ಗಮನದಲ್ಲಿಟ್ಟುಕೊಂಡು ನಿಧಿ ಹಂಚಿಕೆ ಮಾಡಿದ್ದು, ನಗರಕ್ಕೆ ಸಂಬಂಧಿಸಿದ ವಿವಿಧ ಅಂಶಗಳನ್ನು ತಮ್ಮ ಬಜೆಟ್ ನಲ್ಲಿ ಉಲ್ಲೇಖಿಸಿದ್ದಾರೆ. ವೈಟ್ ಟಾಪಿಂಗ್‌ಗೆ 3,500 ಕೋಟಿ ರೂ. ಮತ್ತು ಬೆಂಗಳೂರು ಪ್ರವಾಹ ನಿಯಂತ್ರಣಕ್ಕೆ 5,000 ಕೋಟಿ ರೂ.ಗಳನ್ನು ಸಿಎಂ ಘೋಷಿಸಿದ್ದಾರೆ. ಸಿಲಿಕಾನ್ ಸಿಟಿ ಬೆಂಗಳೂರಿನ ಮೂಲಸೌಕರ್ಯವನ್ನು ಹೆಚ್ಚಿಸಲು, ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗೆ 7,000 ಕೋಟಿ ರೂ.ಗಳನ್ನು ಹಂಚಿಕೆ ಮಾಡುವುದಾಗಿ ಘೋಷಿಸಿದರು. ಕಳೆದ ವರ್ಷವೂ ಇಷ್ಟೇ ಮೊತ್ತವನ್ನು ನೀಡಲಾಗಿತ್ತು.

ಸಿದ್ದರಾಮಯ್ಯ ಅವರ ದಾಖಲೆಯ 2026ರ ಬಜೆಟ್‌ನಲ್ಲಿ ಪ್ರಮುಖಾಂಶಗಳಲ್ಲಿ ಮೈಸೂರನ್ನು ಐಟಿ ಹಬ್ ಆಗಿ ರೂಪಿಸಲು ಯೋಜನೆಯೂ ಒಂದು. ಬೆಂಗಳೂರಿನಲ್ಲಿ ವಾಹನಗಳ ದಟ್ಟಣೆ ಕಡಿಮೆ ಮಾಡಲು ಮತ್ತು ವಿಕೇಂದ್ರೀಕೃತ ಆರ್ಥಿಕತೆಗೆ ಉತ್ತೇಜನ ನೀಡಲು ಮೈಸೂರನ್ನು ರಾಜ್ಯದ ಎರಡನೇ ಐಟಿ ಹಬ್ ಆಗಿ ರೂಪಿಸಲಾಗುವುದು ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಬೆಂಗಳೂರಿನಿಂದ ದಕ್ಷಿಣಕ್ಕೆ ಮೈಸೂರು 140 ಕಿಮೀ ದೂರದಲ್ಲಿದೆ. ಈಗಾಗಲೇ ಮೈಸೂರಿನಲ್ಲಿ ಸಾಕಷ್ಟು ಕೈಗಾರಿಕೆಗಳು ನೆಲಸಿವೆ. ಐಟಿ ಕಂಪನಿಗಳೂ ಬಹಳಷ್ಟಿವೆ.

ಕಾಗ್ನಿಜೆಂಟ್ ಟೆಕ್ನಾಲಜೀಸ್, ಇನ್ಫೋಸಿಸ್ ಇತ್ಯಾದಿ 180-200 ಟೆಕ್ ಕಂಪನಿಗಳಿದ್ದು 30,000 ಜನರು ಕೆಲಸ ಮಾಡುತ್ತಿದ್ದಾರೆ. ಈಗ ಮೈಸೂರಿಗೆ ಮತ್ತಷ್ಟು ಟೆಕ್ ಸ್ಪರ್ಶ ನೀಡಲು ವಿವಿಧ ಯೋಜನೆಗಳನ್ನು ಹಾಕಲಾಗಿದೆ. ಅರಮನೆನಗರಿಯಲ್ಲಿ ಎಐ ಲ್ಯಾಬ್‌ಗಳು, ಸ್ಟಾರ್ಟಪ್ ಸ್ಪೇಸ್‌ಗಳು ಮತ್ತಿತರೆಯನ್ನು ಘೋಷಿಸಲಾಗಿದೆ. ಈ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ತವರು ಜಿಲ್ಲೆಗೆ ಭರ್ಜರಿ ಕಾಣಿಕೆ ಕೊಟ್ಟಿದ್ದಾರೆ.

### ಮಕ್ಕಳಿಗೆ ಜಾಲತಾಣ ಬಳಕೆ ನಿಷೇಧ




ಈ ಸಾಲಿನ ಬಜೆಟ್‌ನಲ್ಲಿ ಮಕ್ಕಳ ಕಾಳಜಿಗೆ ಆದ್ಯತೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಯನ್ನು ನಿಷೇಧಿಸುವ ಘೋಷಣೆ ಮಾಡಿದ್ದಾರೆ. ಹೆಚ್ಚುತ್ತಿರುವ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಬೀರುತ್ತಿರುವ ಅಡ್ಡ ಪರಿಣಾಮಗಳನ್ನು ತಡೆಗಟ್ಟುವ ಉದ್ದೇಶದಿಂದ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲಣತಾಣದ ಬಳಕೆಯನ್ನು ನಿಷೇಧಿಸಲಾಗಿದೆ ಎಂದು ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣ ಬಳಕೆ ಮಕ್ಕಳ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಇದರಿಂದ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೂ ಅಡ್ಡಿಯಾಗಿದ್ದು, ಮಕ್ಕಳು ಸಾಮಾಜಿಕ ಜಾಲತಾಣಗಳ ವ್ಯಸನಕ್ಕೆ ಒಳಗಾಗುವುದನ್ನು ತಪ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಯನ್ನು ನಿಷೇಧಿಸುವ ಘೋಷಣೆ ಮಾಡಿದ್ದಾರೆ.ಮಕ್ಕಳಿಗೆ ಶಾಲೆಯಲ್ಲಿ ಆನ್‌ಲೈನ್ ಕ್ಲಾಸ್‌ಗಳಲ್ಲೂ ಮೊಬೈಲ್ ಕೊಡಿಸಿದರೆ ಅದನ್ನು ಸೋಷಿಯಲ್ ಮೀಡಿಯಾಗೆ ಬಳಕೆ ಮಾಡುತ್ತಿದ್ದು, ಸೋಷಿಯಲ್ ಮೀಡಿಯಾಗೆ ತಮ್ಮದೇ ಲಾಗ್‌ಇನ್ ಮಾಡಿಕೊಳ್ಳುತ್ತಿದ್ದರು. ಆದರೆ ಇದೀಗ 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣದಲ್ಲಿ ಲಾಗ್‌ಇನ್ ಮಾಡುವುದಕ್ಕೂ ಮುನ್ನ ವಯಸ್ಸಿನ ದೃಢೀಕರಣ ಮಾಡುವುದನ್ನು ಕಡ್ಡಾಯ ಮಾಡಲಾಗುತ್ತಿದೆ.

**17ನೇ ಬಜೆಟ್ ಧಮಾಕಾ**

### ವೈಟ್ ಟಾಪಿಂಗ್ ಮತ್ತು ಮಳೆ ಪ್ರವಾಹ ನಿರ್ವಹಣೆ

ಬೆಂಗಳೂರಿನಲ್ಲಿ ಮುಂದಿನ 3 ವರ್ಷಗಳಲ್ಲಿ 3,000 ಕೋಟಿ ರೂ ವೆಚ್ಚದಲ್ಲಿ 450 ಕಿ.ಮೀ ರಸ್ತೆಗಳನ್ನು ವೈಟ್-ಟಾಪ್ ಮಾಡಲಾಗುವುದು. ಇದಕ್ಕೆ 3,500 ಕೋಟಿ ರೂ.ಗಳ ಬೃಹತ್ ವೆಚ್ಚವನ್ನು ನಿಗದಿಪಡಿಸಲಾಗಿದೆ ಎಂದು ಸಿದ್ದರಾಮಯ್ಯ ಘೋಷಿಸಿದರು. ಅಂತೆಯೇ ಮೇಘ ಸ್ಫೋಟ ಮಳೆಯ ನಂತರ ನಗರ ಪ್ರವಾಹದಿಂದಾಗಿ ನಗರದ ವರ್ಚಸ್ಸು ಕುಸಿದ ನಂತರ, ಬೆಂಗಳೂರು ನಗರದಲ್ಲಿ ಪ್ರವಾಹ ನಿಯಂತ್ರಣಕ್ಕೆ 5 ವರ್ಷಗಳ ಅವಧಿಯಲ್ಲಿ 5000 ಕೋಟಿ ರೂ.ಗಳಲ್ಲಿ ವಿವಿಧ ವಿಪತ್ತು ನಿರ್ವಹಣಾ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

### ಸುರಂಗ ಯೋಜನೆ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಹತ್ವಾಕಾಂಕ್ಷೆಯ ಸುರಂಗ ರಸ್ತೆ ಯೋಜನೆ ಇನ್ನೂ ಆರಂಭವಾಗಿಲ್ಲವಾದರೂ, ಬಜೆಟ್‌ನಲ್ಲಿ ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ಸುರಂಗ ರಸ್ತೆ ಮತ್ತು ಎತ್ತರದ ಕಾರಿಡಾರ್ ನಿರ್ಮಾಣವನ್ನು 2,250 ಕೋಟಿ ರೂ.ಗಳಲ್ಲಿ ಘೋಷಿಸಲಾಗಿದೆ.



### ಜಿಬಿಎಗೆ 7 ಸಾವಿರ ಕೋಟಿ



ಬೆಂಗಳೂರು ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ನೀಡುತ್ತಿದ್ದ 7,000 ಕೋಟಿ ರೂ. ಅನುದಾನವನ್ನು ಪ್ರಸಕ್ತ ಸಾಲಿನಲ್ಲೂ ಮುಂದುವರಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿರುವ ಐದು ನಗರ ನಿಗಮಗಳು ತಮ್ಮ ಬ್ಯಾಲೆನ್ಸ್ ಶೀಟ್‌ಗಳ ಆಧಾರದ ಮೇಲೆ 'ಪುರಸಭೆ ಬಾಂಡ್‌ಗಳನ್ನು' ನೀಡುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲಗಳನ್ನು ಸಜ್ಜುಗೊಳಿಸುವಂತೆ ಕೇಳಲಾಗಿದೆ.


ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ 2026-27ರ ಬಜೆಟ್‌ನಲ್ಲಿ ಡಿಕೆ ಶಿವಕುಮಾರ್ ಅವರ 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಗೆ 7000 ಕೋಟಿ ರೂ. ಅನುದಾನ ಘೋಷಿಸಲಾಗಿದೆ. ರಸ್ತೆಗಳ ವೈಟ್ ಟಾಪಿಂಗ್, ಮೂಲಸೌಕರ್ಯ ಸುಧಾರಣೆ, ಸಂಚಾರ ದಟ್ಟಣೆ ನಿವಾರಣೆ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಹಾಗೂ ಕೆರೆಗಳ ಜೀರ್ಣೋದ್ಧಾರ ಸೇರಿದಂತೆ ರಾಜಧಾನಿಯ ಸಮಗ್ರ ಅಭಿವೃದ್ಧಿಗೆ ಬಜೆಟ್ ಬಲ ನೀಡಿದೆ.

-ಡಿಕೆ ಶಿವಕುಮಾರ್ ಉಪ ಮುಖ್ಯಮಂತ್ರಿ


ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ದಾಖಲೆಯ 17ನೇ ಬಜೆಟ್ ಸರ್ವಾಂಗೀಣ ಅಭಿವೃದ್ಧಿ ದೃಷ್ಟಿಕೋನ, ಸಾಮಾಜಿಕ ನ್ಯಾಯ ಮತ್ತು ಪ್ರಾದೇಶಿಕ ಅಸಮತೋಲನ ನಿವಾರಣೆಯ ಸಮಗ್ರ ದೃಷ್ಟಿಕೋನವನ್ನು ಪ್ರತಿಫಲಿಸುತ್ತಿದೆ. ಕಾಂಗ್ರೆಸ್ ಸರ್ಕಾರದ ಜನಪರ ಆಡಳಿತಕ್ಕೆ ಈ ಬಜೆಟ್ ಉಜ್ವಲ ಸಾಕ್ಷಿಯಾಗಿದೆ. ಸಿದ್ದರಾಮಯ್ಯ ಅವರು ಬಜೆಟ್ ಗಾತ್ರವನ್ನು 4.48 ಲಕ್ಷ ಕೋಟಿ ರೂ.ಗೆ ಏರಿಸಿರುವುದು ರಚನಾತ್ಮಕ ಕ್ರಮವಾಗಿದೆ. ಇದಕ್ಕೆ ತಕ್ಕಂತೆ ಬಂಡವಾಳ ವೆಚ್ಚವನ್ನೂ ಅವರು ಘೋಷಿಸಿದ್ದಾರೆ. ಇವೆಲ್ಲವೂ ಅಭಿವೃದ್ಧಿ ಕಾರ್ಯಗಳಿಗೆ ವೇಗವನ್ನು ತಂದುಕೊಡಲಿದ್ದು, ಅಪಾರ ಸಂಖ್ಯೆಯಲ್ಲಿ ಉದ್ಯೋಗಗಳನ್ನು ಸೃಷ್ಟಿಸಲಿವೆ.

-ಎಂ.ಬಿ ಪಾಟೀಲ್, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ


2026-27ನೇ ಬಜೆಟ್ ವಿವಿಧ ಇಲಾಖೆಗಳಲ್ಲಿನ 56 ಸಾವಿರ ಹುದ್ದೆಗಳ ನೇಮಕಾತಿ ಸೇರಿದಂತೆ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡ ಸಮಗ್ರ ಬಜೆಟ್ ಆಗಿದೆ ವಿಶೇಷವಾಗಿ ವಿವಿಧ ಹುದ್ದೆಗಳ ನೇಮಕಾತಿ ಬಗ್ಗೆ ಯುವಕರಿಗೆ ಆತಂಕವಿತ್ತು. 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ತೀರ್ಮಾನ ಮಾಡಿದ್ದಾರೆ. ರೈತ ಸಮುದಾಯಕ್ಕೆ 30 ಸಾವಿರ ಕೋಟಿ ರೂ. ಸಾಲ ನೀಡುವ ತೀರ್ಮಾನ ಮಾಡಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ 15000 ಹುದ್ದೆ ಪೊಲೀಸ್ ಇಲಾಖೆಯಲ್ಲಿ 8 ಸಾವಿರ ಹುದ್ದೆಗಳು ಹಾಗೂ ಆರೋಗ್ಯ ಇಲಾಖೆಯಲ್ಲಿ 2500 ಹುದ್ದೆಗಳ ನೇಮಕಾತಿ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಪಂಚ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸಲಾಗುವುದು.

-ಜಿ.ಪರಮೇಶ್ವರ್ ಗೃಹ ಸಚಿವ

# ನಾಯಕತ್ವ ಬದಲಾವಣೆ ಚರ್ಚೆಗೆ ಟ್ವಿಸ್ಟ್ ನೀಡಿದ ಸಿದ್ದರಾಮಯ್ಯ

## ■ ಹೈಕಮಾಂಡ್ ಹೇಳುವವರೆಗೂ ಬಜೆಟ್ ಮಂಡನೆ ಮಾಡುತ್ತಿರುತ್ತೇನೆ ಎಂದು ಉತ್ತರ

• ಉದಯವಾಹಿನಿ, ಬೆಂಗಳೂರು

ಹೈಕಮಾಂಡ್ ಹೇಳುವವರೆಗೂ ಬಜೆಟ್ ಮಂಡಿಸುತ್ತಾನೆ ಇರುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಈ ಮೂಲಕ ಬಜೆಟ್ ಅಧಿವೇಶನದ ಬಳಿಕ ನಾಯಕತ್ವ ಬದಲಾವಣೆ ಚರ್ಚೆಗೆ ಮತ್ತೊಂದು ಟ್ವಿಸ್ಟ್ ನೀಡಿದರು. ಬಜೆಟ್ ಹಿನ್ನೆಲೆಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, ನಾಯಕತ್ವ ಬದಲಾವಣೆ ಕುರಿತಾದ ಪ್ರಶ್ನೆಗೆ ಈ ರೀತಿ ಉತ್ತರಿಸಿದರು.

ಬಜೆಟ್ ಬಳಿಕ ರಾಜ್ಯ ಕಾಂಗ್ರೆಸ್ ನಾಯಕತ್ವದಲ್ಲಿ ಬದಲಾವಣೆ ಆಗಲಿದೆ ಎಂಬ ಚರ್ಚೆಗಳು ನಡೆಯುತ್ತಿವೆ. ಆದರೆ ಸಿಎಂ ಸಿದದರಾಮಯ್ಯ ಆಪ್ತರು ಐದು ವರ್ಷ ಸಿದ್ದರಾಮಯ್ಯ ಅವರೇ ಅಧಿಕಾರದಲ್ಲಿ ಇರುತ್ತಾರೆ ಎನ್ನುತ್ತಿದ್ದಾರೆ. ಮತ್ತೊಂದು ಕಡೆಯಲ್ಲಿ ಡಿಕೆ ಶಿವಕುಮಾರ್ ಬೆಂಬಲಿಗರು ಅಧಿಕಾರ ಹಸ್ತಾಂತರದ ಮಾತನ್ನು ಆಡುತ್ತಿದ್ದಾರೆ. ಈ ಎಲ್ಲಾ ಬೆಳವಣಿಗೆ ನಡುವೆ ಪತ್ರಿಕಾಗೋಷ್ಠಿಯಲ್ಲಿ ಸಿದ್ದರಾಮಯ್ಯ ಹೇಳಿರುವ ಮಾತು ಕುತೂಹಲಕ್ಕೆ ಕಾರಣವಾಗಿದೆ.

**ಪ್ರಧಾನಿ ಮೋದಿಯವರ ಅವಧಿಯಲ್ಲಿ ದೇಶದ ಸಾಲ 165 ಲಕ್ಷ ಕೋಟಿ:** ಈ ವರ್ಷ ಕೇಂದ್ರದ ವಿತ್ತೀಯ ಕೊರತೆ 4.4 ರಷ್ಟಿದ್ದು, ಕೇಂದ್ರಸರ್ಕಾರದಲ್ಲಿ 218 ಲಕ್ಷ ಕೋಟಿ ಸಾಲವಿದೆ. ಬಿಜೆಪಿಯು ನಮ್ಮ ಪ್ರಶ್ನಿಸಲು ಯಾವ ನೈತಿಕತೆ ಇದೆ. ಸಾಲ ಮಾಡದೇ ಯಾವ ದೇಶ, ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ಆದರೆ ಸಾಲದ ಮಿತಿ



ಮಾನದಂಡಗಳಲ್ಲಿ ತಿಳಿಸಿದ ಮಿತಿಯಲ್ಲಿರಬೇಕು.

2014ರ ಮೊದಲು, 53.11 ಲಕ್ಷ ಕೋಟಿಯಿದ್ದ ದೇಶದ ಸಾಲ ಈಗ ಪ್ರಧಾನಿ ಮೋದಿಯವರು ಅಧಿಕಾರಕ್ಕೆ ಬಂದ ನಂತರ 165 ಲಕ್ಷ ಕೋಟಿ ಯಾಗಿದೆ. ಪ್ರತಿಪಕ್ಷ ನಾಯಕ ಅಶೋಕರವರು ರಾಜ್ಯಸರ್ಕಾರ ಸಾಲ ಮಾಡುತ್ತಿದೆ ಎಂಬ ಟೀಕೆ ಮಾಡಲು ಯಾವುದೇ ನೈತಿಕತೆ ಇಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವಾಗ, 55,33,847 ಕೋಟಿ ಸಾಲವಿತ್ತು. ಎಲ್ಲಾ ಸರ್ಕಾರಗಳ ಅವಧಿಯಲ್ಲಿ ಸಾಲಗಳನ್ನು ಮಾಡಲಾಗಿದೆ ಎಂದರು.

### ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ

ಈ ಬಾರಿ ಬಜೆಟ್ ನಲ್ಲಿ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುದೆಂದು ತಿಳಿಸಲಾಗಿದೆ. ಕಾರಣಾಂತರಗಳಿಂದ ವಿಳಂಬಗಳಾಗಿದ್ದು, ಈ ವರ್ಷ 56432 ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಬಜೆಟ್ ನಲ್ಲಿ ಘೋಷಣೆ ಮಾಡಲಾಗಿದೆ. ವಿಳಂಬವಾಗಿದ್ದರ ಕಾರಣ, ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆಯನ್ನು ನೀಡಲಾಗಿದೆ. ರಾಜ್ಯದ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಸಮತೋಲನ ನಿವಾರಿಸಲು ಪ್ರೊ.ಎಂ.ಗೋವಿಂದರಾವ್ ಸಮಿತಿಯ ಶಿಫಾರ್ಸುಗಳನ್ನು ಸಚಿವ ಸಂಪುಟಗ ಅಂಗೀಕರಿಸಿದ್ದು, ವಿಧಾನಸಭೆಯಲ್ಲಿ ಮಂಡಿಸಲಾಗುವುದು. ಈ ಶಿಫಾರಸ್ಸುಗಳ ಹಂತ ಹಂತವಾಗಿ ಜಾರಿಗೊಳಿಸಲು ಸರ್ಕಾರ ಬದ್ಧವಾಗಿದ್ದು, ಈ ವರ್ಷ 4291 ಕೋಟಿ ಗಳನ್ನು ಮೀಸಲಿಡಲಾಗಿದೆ ಎಂದರು.

**ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ:** 2026-27 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ ಅಭಿವೃದ್ಧಿಗಾಗಿ 5000 ಕೋಟಿ ರೂ.ಗಳ ಯೋಜನೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಈ ವರ್ಷ 4000 ಕೋಟಿ ಖರ್ಚಾಗಿದ್ದು, ಉಳಿದ ಅನುದಾನವನ್ನು ಖರ್ಚು ಮಾಡಲಾಗುವುದು ಎಂದರು.

**ಕೃಷ್ಣಾ ಮೇಲ್ದಂಡೆ ಯೋಜನೆ 3 ಹಂತ:** ಕೃಷ್ಣಾ ಮೇಲ್ದಂಡೆ ಯೋಜನೆ 3 ಹಂತ ಅನುಷ್ಠಾನಗೊಳಿಸುವ ಸಂಬಂಧ, ಡ್ಯಾಂನ ಎತ್ತರವನ್ನು ಹೆಚ್ಚಿಸಿದಾಗ ಮುಳುಗಡೆಯಾಗುವ ಜಮೀನುಗಳಿಗೆ ಪರಿಹಾರ ನೀಡಲಾಗುವುದು. 1ಲಕ್ಷ ಕೋಟಿ ಎಕರೆ ಮುಳುಗಡೆಯಾಗುತ್ತಿದ್ದು, ಪರಿಹಾರ ನೀಡಲಾಗುವುದು. ಕೃಷ್ಣಾ ಮೇಲ್ದಂಡೆ ಯೋಜನೆ 3 ಹಂತ ಖುಷ್ಕಿ ಜಮೀನಿಗೆ 30 ಲಕ್ಷ , ನೀರಾವರಿ ಜಮೀನಿಗೆ 40 ಲಕ್ಷ ಪರಿಹಾರ ನೀಡಲು ನಿರ್ಣಯ ಕೈಗೊಂಡಿದ್ದು, 4 ವರ್ಷದಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ಇದಕ್ಕಾಗಿ ಪೂರಕ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ನೀಡಲಾಗುವುದು ಎಂದರು.

**ಈ ದಿನದ ದರ** ಪೆಟ್ರೋಲ್: 102.96 ₹/L | ಡೀಸೆಲ್ : 91.52 ₹/L | ಬಂಗಾರ: ₹16,113/Gram24ct ₹14,770/Gram22ct | ಬೆಳ್ಳಿ: ₹285.00/Gram

## ರೌಡಿಗಳ ಮಟ್ಟ ಹಾಕುವ ಜೊತೆಗೆ ಮಹಿಳಾ ಸುರಕ್ಷತೆಗೆ ಆದ್ಯತೆ

• ಉದಯವಾಹಿನಿ, ಬೆಂಗಳೂರು

ರೌಡಿಸಂ ಹಾಗೂ ಸಮಾಜಘಾತುಕ ಶಕ್ತಿಗಳನ್ನು ಹತ್ತಿಕ್ಕುವ ಜೊತೆಗೆ ಪ್ರಮುಖವಾಗಿ ಮಹಿಳಾ ಸುರಕ್ಷತೆಗೆ ಆದ್ಯತೆ ನೀಡಲಾಗುತ್ತದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್‌ಸಿಂಗ್ ಹೇಳಿದರು. ಮೈಸೂರು ರಸ್ತೆಯ ಸಿಎಆರ್ ಕೇಂದ್ರ ಸ್ಥಾನ ಕವಾಯತು ಮೈದಾನದಲ್ಲಿಂದು ಹಮ್ಮಿಕೊಂಡಿದ್ದ ಮಾಸಿಕ ಕವಾಯತಿನಲ್ಲಿ ವಂದನೆ ಸ್ವೀಕರಿಸಿ ಅವರು ಮಾತನಾಡಿದರು. ಸಂಚಾರ ವಿಭಾಗ, ಸೈಬರ್‌ಕ್ರೈಂ, ವಾಹನ ಚಾಲನೆ, ಕಮಾಂಡೋ ಹೀಗೆ ಎಲ್ಲಾ ವಿಭಾಗಗಳಲ್ಲೂ ಮಹಿಳಾ ಸಿಬ್ಬಂದಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಮಹಿಳಾ ಮೀಸಲಾತಿಯನ್ನು ಶೇ.33 ರಷ್ಟು ವಿಸ್ತರಿಸಿ ಹಿರಿಯ ಪೊಲೀಸ್ ಅಧಿಕಾರಿಗಳು, ಸರ್ಕಾರದ ಜೊತೆ ಚರ್ಚಿಸಲಾಗುವುದು ಎಂದು ಅವರು ಹೇಳಿದರು. ಇತ್ತೀಚಿಗೆ ಸೈಬರ್‌ಕ್ರೈಂಗಳು ಹೆಚ್ಚಾಗುತ್ತಿವೆ. ತಾಂತ್ರಿಕ ವಿಧಾನದಲ್ಲಿ ನಾವು ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚುತ್ತಿದ್ದೇವೆ, ಮಹಿಳಾ ಸಿಬ್ಬಂದಿ ಸೈಬರ್ ಕ್ರೈಂನಲ್ಲಿ ತರಬೇತಿ ಪಡೆದು ಉತ್ತಮ ಕಾರ್ಯನಿರ್ವಹಿಸುತ್ತಿದ್ದಾರೆ. ಅದೇ ರೀತಿ ರಾಣಿ ಚೆನ್ನಮ್ಮ ಪಡೆ ಉತ್ತಮ ಕಾರ್ಯನಿರ್ವಹಿಸುತ್ತಿದೆ ಎಂದರು. ಮಹಿಳಾ ಅಧಿಕಾರಿ ಮತ್ತು ಸಿಬ್ಬಂದಿ ಉತ್ತಮವಾಗಿ ಪ್ರದರ್ಶನ ನೀಡುವ ಮೂಲಕ ನಾವು ಯಾವುದಕ್ಕೂ ಕಮಿಯಿಲ್ಲ ಎಂಬುವುದನ್ನು ಸಾಬೀತು ಮಾಡಿದ್ದಾರೆಂದು ಮಹಿಳಾ ಸಿಬ್ಬಂದಿಯನ್ನು ಅಭಿನಂದಿಸಿದರು. ಮಹಿಳಾ ಸಿಬ್ಬಂದಿಗೆ ಸರ್ಕಾರದ ವತಿಯಿಂದ ಸಿಗುವಂತಹ ಸೌಲಭ್ಯಗಳನ್ನು ನಾವು ಪ್ರಮಾಣಿಕವಾಗಿ ಒದಗಿಸಿಕೊಡುತ್ತೇವೆ ಎಂದು ತಿಳಿಸಿದರು.

## ಆರೋಗ್ಯ ತಪಾಸಣಾ ಕಿಟ್ ಹಸ್ತಾಂತರ

• ಉದಯವಾಹಿನಿ, ಹೊಸಕೋಟೆ

ಗ್ರೆನ್ ವೆಲ್ ಕಂಪನಿಯ ಸಿಎಸ್‌ಆರ್ ನಿಧಿಯಡಿ ತಾಲ್ಲೂಕಿನ 12 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 1.30ಲಕ್ಷ ಮೌಲ್ಯದ ಮೊಬೈಲ್ ಲ್ಯಾಬ್ ಕಿಟ್, 25 ಲಕ್ಷ ವೆಚ್ಚದಲ್ಲಿ 90 ಸಾವಿರ ಮೌಲ್ಯದ ಎಲೆಕ್ಟ್ರಿಕ್ ಬೈಕ್ ಪ್ರತಿ ಆಸ್ಪತ್ರೆಗೆ ನೀಡಲಾಗಿದೆ. ನಗರದ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಮೊಬೈಲ್ ಟೆಸ್ಟಿಂಗ್ ಲ್ಯಾಬ್, ಎಲೆಕ್ಟ್ರಿಕಲ್ ವಾಹನವನ್ನು ಹಸ್ತಾಂತರ ಮಾಡಲಾಯಿತು. ಈ ವೇಳೆ ಮಾತನಾಡಿದ ಶಾಸಕ ಶರತ್ ಬಚ್ಚೇಗೌಡ, ಮನೆ ಬಾಗಿಲಿಗೆ ರಕ್ತ ಪರೀಕ್ಷೆ ಮಾಡಿಸಲು ಅನುವಾಗಲು ಮೊಬೈಲ್ ಟೆಸ್ಟಿಂಗ್ ಕಿಟ್ ಸೇವೆ ಆರಂಭಿಸಲಾಗಿದೆ. ಈ ಮೂಲಕ ಯಾರಿಗೆಲ್ಲಾ ಆಸ್ಪತ್ರೆಗೆ ಹೋಗಲು ಸಾಧ್ಯ ಇಲ್ಲವೋ ಅಂತಹವರ ಅವರ ಮನೆ ಬಾಗಿಲಿನಲ್ಲೇ ಆರೋಗ್ಯ ಸೇವೆ ನೀಡಲಾಗುವುದು ಎಂದು ತಿಳಿಸಿದರು. ಉಪ ಕೇಂದ್ರಗಳಿಗೆ ಮೊಬೈಲ್ ಟೆಸ್ಟಿಂಗ್ ಕಿಟ್ ವಿತರಿಸಲಾಗಿದೆ. ಇವುಗಳ ಮೂಲಕ ಪ್ರಾಥಮಿಕ ಕೇಂದ್ರಗಳು ರೋಗಿಗಳ ಮನೆ ಬಾಗಿಲಿನಲ್ಲೇ ರಕ್ತ ಪರೀಕ್ಷೆ ನಡೆಸಬಹುದು. ಈ ಮೊಬೈಲ್ ಕಿಟ್ ಮೂಲಕ ಸುಮರು 32 ರೀತಿಯ ವಿವಿಧ ಪರೀಕ್ಷೆಗಳನ್ನು ಜನರು ಮನೆ ಬಾಗಿಲಿನಲ್ಲಿ ಮಾಡಿಸಬಹುದಾಗಿದೆ ಎಂದು ತಿಳಿಸಿದರು. ಸೂಲಿಬೆಲೆ ಪ್ರಾಥಮಿಕ ಆರೋಗ್ಯ ಕೇಂದ್ರದ ಅಭಿವೃದ್ಧಿಗೆ ಸಿಎಸ್‌ಆರ್ ಅನುದಾನಕ್ಕೆ ಖಾಸಗಿ ಕಂಪನಿಗೆ ಮನವಿ ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿ ಶಾಲೆ, ಅಂಗನವಾಡಿ, ಕೆರೆಗಳ ಅಭಿವೃದ್ಧಿ ಮೂಲಕ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

## ಕುಂದುಕೊರತೆ ಆಲಿಸಿದ ಶಾಸಕ

• ಉದಯವಾಹಿನಿ, ಪೀಣ್ಯ ದಾಸರಹಳ್ಳಿ

ಬಾಗಲಗುಂಟೆ ವಾರ್ಡ್ ಸೌಂದರ್ಯ ಬಡಾವಣೆಯ ಅನೇಕ ಕುಂದು ಕೊರತೆಗಳನ್ನು ಬಗೆಹರಿಸಲು ಎಲ್ಲಾ ವಿಭಾಗದ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿದ ಶಾಸಕ ಎಸ್. ಮುನಿರಾಜು, ಅಗತ್ಯ ಪರಿಹಾರ ಕ್ರಮ ಕೈಗೊಳ್ಳಲು ಸೂಚಿಸಿದರು. ಸೌಂದರ್ಯ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ನೀಡಿದ ದೂರಿನ ಮೇರೆಗೆ ಮುನಿರಾಜು ಸಭೆ ನಡೆಸಿದರು. ಬೀದಿ ನಾಯಿ, ಕೋತಿಗಳ ಹಾವಳಿ, ಕಸದ ಸಮಸ್ಯೆ ತೀವ್ರವಾಗಿದೆ. ಮನೆ ಕಟ್ಟುವವರು ಚರಂಡಿಯಲ್ಲಿ ಮಣ್ಣು ಸುರಿಯುವುದನ್ನು ನಿಲ್ಲಿಸಬೇಕು. ವಾಹನಗಳಿಗೆ ಅಡ್ಡಿಪಡಿಸುವ ಮರದ ಕೊಂಬೆಗಳ ಕತ್ತರಿಸಬೇಕು, ಪ್ರಕೃತಿ ಬಡಾವಣೆಯಲ್ಲಿನ ಚರಂಡಿಯ ನೀರು ಸೌಂದರ್ಯ ಬಡಾವಣೆಗೆ ಬರುತ್ತಿದ್ದು, ಅದನ್ನು ನಿಲ್ಲಿಸಬೇಕು. ವೀಲಿಂಗ್ ಮಾಡುವವರಿಗೆ ಕಡಿವಾಣ ಹಾಕಬೇಕು, ಬೀದಿದೀಪದ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ನಾಗರಿಕರು ಮನವಿ ಮಾಡಿದರು. ಜಲ್ಲಿಕಲ್ಲು, ಮರಳು ತುಂಬಿದ ಲಾರಿಗಳನ್ನು ಹೆದ್ದಾರಿಯಲ್ಲಿ ತಡೆಗಟ್ಟುವುದರಿಂದ ಈ ಬಡಾವಣೆಯ ಮಾರ್ಗವಾಗಿ ಅವು ಚಲಿಸಿ ರಸ್ತೆ ಹಾಳು ಮಾಡುತ್ತಿವೆ. ಅಂತಹ ಲಾರಿಗಳಿಗೆ ಕಡಿವಾಣ ಹಾಕಬೇಕು' ಎಂಬ ನಿವಾಸಿಗಳ ಮನವಿಗೆ ಸ್ಪಂದಿಸಿದ ಮುನಿರಾಜು, ಈ ಬಗ್ಗೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

## ಕೈಬರಹದ ರಿಜಿಸ್ಟರ್ ಸ್ಥಗಿತ

• ಉದಯವಾಹಿನಿ, ಬೆಂಗಳೂರು

ಮುಂದಿನ ಹಣಕಾಸು ವರ್ಷದಿಂದ ರಿಜಿಸ್ಟರ್‌ಗಳನ್ನು ಕೈಬರಹದ ಪದ್ಧತಿಯ ಬದಲು ಆನ್‌ಲೈನ್ ವ್ಯವಸ್ಥೆಗೆ ಬದಲಾಯಿಸಿಕೊಳ್ಳಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು. ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಆರ್.ಆರ್. ನಗರ ವಲಯದ ಕಚೇರಿಗೆ ಭೇಟಿ ನೀಡಿದ ಅವರು, ಜಾಬ್ ಕೋಡ್, ತಾಂತ್ರಿಕ ಅನುಮೋದನೆಗೆ ಸಂಬಂಧಿಸಿದ ರಿಜಿಸ್ಟರ್ ಪುಸ್ತಕಗಳನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ರಿಜಿಸ್ಟರ್‌ಗಳನ್ನು ಇನ್ನೂ ಕೈಬರಹದಲ್ಲೇ ನಿರ್ವಹಿಸುತ್ತಿರುವುದನ್ನು ಗಮನಿಸಿ, ಅವುಗಳನ್ನು ಆನ್‌ಲೈನ್ ವ್ಯವಸ್ಥೆಗೆ ಕೂಡಲೇ ಬದಲಾಯಿಸುವಂತೆ ಆದೇಶಿಸಿದರು. ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪರಿಶೀಲನೆ ನಡೆಸಿದರು. ನವರಂಗ್ ಚಿತ್ರಮಂದಿರದಿಂದ ರಾಜಾಜಿನಗರ 10ನೇ ಕ್ರಾಸ್ ವರೆಗಿನ 700 ಉದ್ದದ ರಸ್ತೆಯ ಪೈಕಿ ಒಂದು ಭಾಗದ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಿ, ವಾಹನಗಳ ಸಂಚಾರಕ್ಕೆ ಅನುವು ಮಾಡಲಾಗಿದೆ. ಮತ್ತೊಂದು ಭಾಗದ ರಸ್ತೆಯನ್ನು ಮಾರ್ಚ್ 31ರೊಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಮುಖ್ಯ ಇಂಜಿನಿಯರ್ ಮಾಹಿತಿ ನೀಡಿದರು.

## ಕಸದ ಬ್ಲಾಕ್‌ಸ್ಪಾಟ್‌ಗಳ ಮುಕ್ತಕ್ಕೆ 316 ಕೋಟಿ ರೂ. ವೆಚ್ಚದಲ್ಲಿ 23 ಎಸ್‌ಟಿಎಸ್‌ಗಳ ನಿರ್ಮಾಣ

# ದ್ರವ ತ್ಯಾಜ್ಯ ಸೋರಿಕೆ, ದುರ್ವಾಸನೆ ತಡೆಗೆ ಕ್ರಮ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜಧಾನಿಯನ್ನು ಕಸದ ಬ್ಲಾಕ್‌ಸ್ಪಾಟ್‌ಗಳಿಂದ ಮುಕ್ತಗೊಳಿಸಲು ತೀರ್ಮಾನಿಸಿರುವ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತವು, 27 ವಿಧಾನಸಭಾ ಕ್ಷೇತ್ರಗಳಲ್ಲಿ ದ್ವಿತೀಯ ಹಂತದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಿಸುತ್ತಿದೆ. ಇದಕ್ಕಾಗಿ ಕೋಟ್ಯಂತರ ರೂ. ವೆಚ್ಚ ಮಾಡುತ್ತಿದೆ. ಈಗಾಗಲೇ 2020-21ನೇ ಸಾಲಿನ ರಾಜ್ಯ ಸರಕಾರದ ಮುಖ್ಯ ಬೆಂಗಳೂರು ಅನುದಾನದಲ್ಲಿ ನಗರದ ಮೂರು ಪ್ರದೇಶಗಳಲ್ಲಿ ನಿತ್ಯ ತಲಾ 150 ಮೆಟ್ರಿಕ್ ಟನ್ ಕಸವನ್ನು ಆಟೋ ಟಿಪ್ಪರ್‌ಗಳಿಂದ ಸಂಗ್ರಹಿಸಿ, ಅದನ್ನು ವೈಜ್ಞಾನಿಕವಾಗಿ ಸಂಸ್ಕರಣಾ ಘಟಕಗಳಿಗೆ ಸಾಗಣೆ ಮಾಡಲು ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್ ನಿರ್ಮಿಸಲಾಗಿದೆ.

ತಲಾ 11.10 ಕೋಟಿ ರೂ. ವೆಚ್ಚದಲ್ಲಿ ಈಜಿಪುರ, ಚಿನ್ನಿಪೇಟೆ ಮತ್ತು ಎಚ್‌ಬಿಆರ್ ಲೇಔಟ್‌ನಲ್ಲಿ ನಿರ್ಮಿಸಿರುವ ಎಸ್‌ಟಿಎಸ್‌ಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಶಿವಾಜಿನಗರದಲ್ಲಿ ಘಟಕ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಈ ಸ್ಟೇಷನ್‌ಗಳ ನಿರ್ಮಾಣ, ನಿರ್ವಹಣೆ, ಕಾರ್ಯಾಚರಣೆಯ ಗುತ್ತಿಗೆಯನ್ನು ಪರಿಶುದ್ಧ್ ವೆಂಚರ್ಸ್ ಎಂಬ ಸಂಸ್ಥೆಗೆ ನೀಡಲಾಗಿದೆ. ಇದಕ್ಕಾಗಿ ಪ್ರತಿ ಸ್ಟೇಷನ್‌ಗೆ ವಾರ್ಷಿಕ 75 ಲಕ್ಷ ರೂ. ವೆಚ್ಚ ಪಾವತಿಸಲಾಗುತ್ತಿದೆ. ಈ ಸ್ಟೇಷನ್‌ಗಳ ಯಶಸ್ವಿ ಕಾರ್ಯಾಚರಣೆ ಹಿನ್ನೆಲೆಯಲ್ಲಿ ಹೊಸದಾಗಿ 23 ಕಡೆ ಎಸ್‌ಟಿಎಸ್‌ಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ.

**316 ಕೋಟಿ ರೂ. ವೆಚ್ಚದಲ್ಲಿ 23 ಎಸ್‌ಟಿಎಸ್:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಅಭಿಯಾನದ 2.0 ನ 316 ಕೋಟಿ ರೂ. ಅನುದಾನದಲ್ಲಿ 23 ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಈ ಸಂಬಂಧ 6 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆಯಲು ನಿರ್ಧರಿಸಿದ್ದು, ಕೆಲವೊಂದು ಪ್ಯಾಕೇಜ್‌ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಮನೆ ಮನೆಯಿಂದ ಕಸ ಸಂಗ್ರಹಿಸುವ ಆಟೋ ಟಿಪ್ಪರ್‌ಗಳು ಸಿಸಿಟಿವಿ ಕ್ಯಾಮೆರಾಗಳ ನಿಗಾದಲ್ಲೇ ಎಸ್‌ಟಿಎಸ್‌ಗಳಿಗೆ ಬರಲಿವೆ. ಅವುಗಳ ಮಾರ್ಗಸಂಖ್ಯೆ, ಸಂಖ್ಯಾ ಫಲಕ, ಕಸದ ತೂಕ ಎಲ್ಲವೂ ವೆಬ್‌ಸೈಟ್‌ನಲ್ಲಿ ದಾಖಲಾಗಿದೆ. ಆಟೋ ಟಿಪ್ಪರ್‌ಗಳಿಂದ ನೇರವಾಗಿ ಇಂಧನ ಸಾಗಿಸುವ ಕಂಟೈನರ್‌ಗಳ ಮಾದರಿಯಲ್ಲಿರುವ 'ಕ್ಯಾಪ್ಸೂಲ್'ಗಳಿಗೆ ತ್ಯಾಜ್ಯವನ್ನು ರವಾನಿಸಲಾಗುತ್ತದೆ. ಕಸವನ್ನು ಕಂಪ್ರೆಸ್ ಮಾಡಿ ದ್ರವ ತ್ಯಾಜ್ಯವನ್ನು ಟ್ಯಾಂಕ್‌ಗಳಿಗೆ ಹೋಗುವಂತೆ ಮಾಡಲಾಗುತ್ತದೆ. ಆನಂತರ ಆ ದ್ರವವನ್ನು ಚಿಕ್ಕನಾಗಮಂಗಲದಲ್ಲಿರುವ ಲಿಚೆಟ್ ಸಂಸ್ಕರಣಾ ಘಟಕಕ್ಕೆ ಸಾಗಿಸಲಾಗುತ್ತದೆ. ಇದರಿಂದ ದ್ರವ ತ್ಯಾಜ್ಯವನ್ನು ರಸ್ತೆಯುದ್ದಕ್ಕೂ ಸೋರುವುದು ತಪ್ಪಲಿದೆ. ಕ್ಯಾಪ್ಸೂಲ್‌ಗಳ ತಳಭಾಗದಲ್ಲೂ ದ್ರವ ತ್ಯಾಜ್ಯ ಸಂಗ್ರಹಕ್ಕೆ ಅವಕಾಶವಿರುತ್ತದೆ. ಸದ್ಯ ಪ್ರತಿ ವಾರ್ಡ್‌ನಲ್ಲಿ ತಲಾ ಎರಡು ಕಾಂಪ್ಯಾಕ್ಟರ್‌ಗಳು, ಹಲವು ಆಟೋ ಟಿಪ್ಪರ್‌ಗಳ ಮೂಲಕ ಕಸ ಸಂಗ್ರಹ ಮಾಡಲಾಗುತ್ತಿದೆ.

ಎಸ್‌ಟಿಎಸ್‌ಗಳ ಕಾರ್ಯ ನಿರ್ವಹಣೆಯಿಂದ ಸುಮಾರು 16 ಟನ್‌ನಷ್ಟು ತ್ಯಾಜ್ಯವು ಒಂದೇ ಕ್ಯಾಪ್ಸೂಲ್‌ನಲ್ಲಿ ಸಂಸ್ಕರಣಾ ಘಟಕಗಳಿಗೆ ಸಾಗಣೆಯಾಗುತ್ತದೆ ಲಿಚೆಟ್ ಸೋರಿಕೆಯಾಗುವುದಿಲ್ಲ, ದುರ್ವಾಸನೆಯೂ ಬರುವುದಿಲ್ಲ. ಆಟೊ ಟಿಪ್ಪರ್‌ಗಳಿಂದ ಕ್ಯಾಪ್ಸೂಲ್‌ಗಳಿಗೆ ಕಸವನ್ನು ಸ್ಥಳಾಂತರಿಸುವ ಸಂದರ್ಭದಲ್ಲೂ ದುರ್ವಾಸನೆ ತಡೆಗೆ ಜೈವಿಕ ದ್ರವವನ್ನು ಸಿಂಪಡಿಸಲಾಗುತ್ತದೆ. ಒಣ, ಮಿಶ್ರ ತ್ಯಾಜ್ಯ ವಿಂಗಡಣೆಗೂ ಎಸ್‌ಟಿಎಸ್‌ನಲ್ಲಿ ಅವಕಾಶವಿರಲಿದೆ.

ನಗರದಲ್ಲಿ ಹೊಸದಾಗಿ ನಿರ್ಮಿಸುವ ಎಸ್‌ಟಿಎಸ್‌ಗಳ ನಿರ್ವಹಣೆ, ಕಾರ್ಯಾಚರಣೆಯನ್ನು ತಲಾ 100 ಎಕರೆಯಲ್ಲಿ 4 ದಿಕ್ಕುಗಳಲ್ಲಿ ಸಮಗ್ರ ಘನತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವವರಿಗೇ ವಹಿಸಲು ತೀರ್ಮಾನಿಸಲಾಗಿದೆ. ಘಟಕಗಳು ನಿರ್ಮಾಣಗೊಂಡು ಕಾರ್ಯಾಚರಣೆಗೊಳ್ಳುವವರೆಗೆ ಎಸ್‌ಟಿಎಸ್‌ಗಳನ್ನು ನಿರ್ಮಿಸುವವರೇ ನಿರ್ವಹಣೆ, ಕಾರ್ಯಾಚರಣೆಯ ಹೊಣೆ ಹೊರಲಿದ್ದಾರೆ.

**ಎಲ್ಲೆಲ್ಲಿ ಎಸ್‌ಟಿಎಸ್‌ಗಳ ನಿರ್ಮಾಣ?**

**ಹೆಬ್ಬಾಳ, ಪುಲಕೇಶಿನಗರ, ಶಾಂತಿನಗರ, ಸಿ.ವಿ.ರಾಮನ್‌ನಗರ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ, ಯಶವಂತಪುರ, ಬೆಂಗಳೂರು ದಕ್ಷಿಣ, ಕೆ.ಆರ್.ಪುರ, ಯಲಹಂಕ, ಮಹದೇವಪುರ, ದಾಸರಹಳ್ಳಿ, ಗಾಂಧಿನಗರ, ಮಲ್ಲೇಶ್ವರ, ಮಹಾಲಕ್ಷ್ಮಿ ಲೇಔಟ್, ರಾಜಾಜಿನಗರ, ಪದ್ಮನಾಭನಗರ, ಚಿಕ್ಕಪೇಟೆ, ಜಯನಗರ, ಬಸವನಗುಡಿ, ಗೋವಿಂದರಾಜನಗರ, ಗಾಂಧಿನಗರ, ಬ್ಯಾಟರಾಯನಪುರ.**

**20-25 ಸಾವಿರ ಚ.ಅಡಿ ಜಾಗ ಗುರುತು**

**ದ್ವಿತೀಯ ಹಂತದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು 20 ರಿಂದ 25 ಸಾವಿರ ಚ.ಅಡಿ ಜಾಗದಲ್ಲಿ ನಿರ್ಮಿಸಲು 23 ಕಡೆಯೂ ಸ್ಥಳ ಗುರುತಿಸಲಾಗಿದೆ. ಜಾಗಗಳನ್ನು ಹಸ್ತಾಂತರಿಸುವಂತೆ ಬಿಡಿಎ, ನಗರ ಜಿಲ್ಲಾಧಿಕಾರಿ, ನಗರ ಪಾಲಿಕೆಗಳಿಗೆ ಪತ್ರ ಬರೆಯಲಾಗಿದೆ. ಪ್ರತಿಯೊಂದು ಟ್ರಾನ್ಸ್‌ಫರ್ ಸ್ಟೇಷನ್‌ಗಳಲ್ಲಿ 260-265 ಟನ್ ಕಸವನ್ನು ಪ್ರಾಥಮಿಕ ಸಂಗ್ರಹಣೆಯ ಆಟೋ ಟಿಪ್ಪರ್‌ಗಳಿಂದ ದ್ವಿತೀಯ ಹಂತದ ಸಾಗಣೆ ವಾಹನಗಳಿಗೆ ವೈಜ್ಞಾನಿಕವಾಗಿ ಸ್ಥಳಾಂತರಿಸಲು ಉದ್ದೇಶಿಸಲಾಗಿದೆ. ಇದರಿಂದ ರಸ್ತೆ ಬದಿಗಳಲ್ಲಿ ಉಂಟಾಗುತ್ತಿದ್ದ ಸಂಚಾರ ದಟ್ಟಣೆ, ಬ್ಲಾಕ್‌ಸ್ಪಾಟ್ ನಿರ್ಮಾಣ ಹಾಗೂ ಲಿಚೆಟ್ ದ್ರವದ ಸೋರಿಕೆ ತಪ್ಪಲಿದೆ.**

## 37 ಸಾವಿರ ಕೋಟಿ ರೂ.ಗಳ ಬಾಕಿ ಬಿಲ್ ಬಿಡುಗಡೆಗೆ ಗುತ್ತಿಗೆದಾರರ ಆಗ್ರಹ

• ಉದಯವಾಹಿನಿ, ಬೆಂಗಳೂರು

ಬಾಕಿ ಇರುವ 37 ಸಾವಿರ ಕೋಟಿ ರೂ.ಗಳ ಬಿಲ್ ಬಿಡುಗಡೆಗೆ ಆಗ್ರಹಿಸಿ ಗುತ್ತಿಗೆದಾರರು ಶುಕ್ರವಾರ ನಗರದ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ 10 ಸಾವಿರಕ್ಕೂ ಹೆಚ್ಚು ಗುತ್ತಿಗೆದಾರರು ಪ್ರತಿಭಟನೆಯಲ್ಲಿ ಪಾಲ್ಗೊಂಡು ತಮ್ಮ ಶಕ್ತಿ ಪ್ರದರ್ಶನ ಮಾಡಿದರು. ರಾಜ್ಯದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದರೂ ಸರ್ಕಾರ ಕಳೆದ ಎರಡು ವರ್ಷಗಳಿಂದ ಬಾಕಿ ಹಣ ಬಿಡುಗಡೆ ಮಾಡಿಲ್ಲ. ಗುತ್ತಿಗೆದಾರರು ಸಂಕಷ್ಟ ಎದುರಿಸುತ್ತಿದರೆ.ಕರ್ನಾಟಕದಲ್ಲಿ ಸುಮಾರು 1.5 ಲಕ್ಷ ಅಧಿಕೃತ ನೋಂದಣಿ ಪಡೆದ ಸಣ್ಣ ಮತ್ತು ಮಧ್ಯಮ ವರ್ಗದ ಗುತ್ತಿಗೆದಾರರು ಇದ್ದು, ಕಳೆದ ಮೂರು ವರ್ಷಗಳಿಂದ ವಿವಿಧ ಇಲಾಖೆಗಳ ಮೂಲಕ ಕಾಮಗಾರಿಗಳನ್ನು ಪೂರ್ಣಗೊಳಿಸಿದರೂ ಬಾಕಿ ಹಣ ಬಿಡುಗಡೆ ಆಗಿಲ್ಲ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಂಜುನಾಥ್ ಆರೋಪಿಸಿದರು. 2021-22, 2022-23 ಹಾಗೂ 2023-24 ಹಣಕಾಸು ವರ್ಷಗಳಲ್ಲಿ ಪೂರ್ಣಗೊಂಡ ಕಾಮಗಾರಿಗಳ ಬಾಕಿ ಮೊತ್ತ ಡಿಸೆಂಬರ್ 2025ರ ವೇಳೆಗೆ ಸುಮಾರು 37,000 ಕೋಟಿ ಆಗಿದೆ ಎಂದು ಸಂಘದ ಅಧ್ಯಕ್ಷರು ಹೇಳಿದರು. ಇದರಿಂದ ರಾಜ್ಯಾದ್ಯಂತ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳಿಗೂ ವ್ಯತ್ಯಯ ಉಂಟಾಗಿದೆ. ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಗುತ್ತಿಗೆದಾರರಿಗೆ ಯಾವುದೇ ವಿಶೇಷ ಅನುಕೂಲವಾಗಿಲ್ಲ ಹಿಂದಿನ ಸರ್ಕಾರಕ್ಕಿಂತಲೂ ಕೆಲ ಇಲಾಖೆಗಳಲ್ಲಿನ ಕಮಿಷನ್ ಪ್ರಮಾಣ ಹೆಚ್ಚಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ಟೆಂಡರ್‌ಗಳನ್ನು ಪ್ಯಾಕೇಜ್‌ರೂಪದಲ್ಲಿ ನೀಡುವುದರಿಂದ ಸಣ್ಣ, ಮಧ್ಯಮ ವರ್ಗದ ಗುತ್ತಿಗೆದಾರರಿಗೆ ಅನಾನುಕೂಲವಾಗುತ್ತಿದೆ. ಕೆಲವು ಇಲಾಖೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ಬಲಿಷ್ಠ ಗುತ್ತಿಗೆದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತಿವೆ ಎಂದು ಆರೋಪಿಸಿದರು. ಇನ್ನೂ ಜಿಬಿಎ ವ್ಯಾಪ್ತಿಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ ಮಂಜುನಾಥ್ ಮಾತಾನಾಡಿ ಜಿಬಿಎ ವ್ಯಾಪ್ತಿಯಲ್ಲೂ ಭದ್ರತಾ ಠೇವಣಿಯಾಗಿ ಶೇ.10ರಷ್ಟು ಕತ್ತರಿಸಿದ ಹಣವನ್ನು ಐದು ವರ್ಷವಾದರೂ ಬಿಡುಗಡೆ ಮಾಡಿಲ್ಲ. ರಾಜ್ಯ ಸರ್ಕಾರ ತುರ್ತಾಗಿ ಗುತ್ತಿಗೆದಾರರೊಂದಿಗೆ ಸಭೆ ನಡೆಸಿ ಬಾಕಿ ಹಣ ಬಿಡುಗಡೆ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಗುತ್ತಿಗೆದಾರರ ಸಂಘ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದರು.


ಉದಯವಾಹಿನಿ ಚಿತ್ರ

## ಪೂಜನಹಳ್ಳಿ ಪ್ಯಾಕ್ ಹೌಸ್ ಕೊಠಡಿಗೆ ಬೀಗಮುದ್ರೆ

• ಉದಯವಾಹಿನಿ, ದೇವನಹಳ್ಳಿ

ಹಣ್ಣು, ತರಕಾರಿ ಸಂಸ್ಕರಣೆ, ರಫ್ತು ಉದ್ದೇಶಕ್ಕಾಗಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಆರಂಭಿಸಿರುವ ಪೂಜನಹಳ್ಳಿ ಪ್ಯಾಕ್ ಹೌಸ್‌ನಲ್ಲಿ ಅನುಮತಿ ಇಲ್ಲದೆ ರೆಡಿಮೇಡ್ ಬಟ್ಟೆ ಸಂಗ್ರಹಿಸಿರುವುದು ಪತ್ತೆಯಾಗಿದ್ದು, ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಘಟಕದ ಒಂದು ಹಾಲ್‌ಗೆ ಬೀಗ ಜಡಿದು ಸೀಲ್ ಹಾಕಿದ್ದಾರೆ. ಪೂಜನಹಳ್ಳಿ ತೋಟಗಾರಿಕಾ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ, ರಫ್ತು ನಿಗಮ ಸಮಗ್ರ ಶೀತಲ ಸರಪಳಿ ಘಟಕ ಸ್ಥಾಪಿಸಿದೆ. ಫಿಜಾ ಗ್ಲೋಬಲ್ ಆಗ್ರೋ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಜೂನ್ 2024ರಲ್ಲಿ ಈ ಘಟಕದ ಕಾರ್ಯಾಚರಣೆ, ನಿರ್ವಹಣೆ ವಹಿಸಲಾಗಿತ್ತು. ಆದರೆ, ಸಂಸ್ಥೆಯು ಘಟಕವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರಲಿಲ್ಲ, ಒಪ್ಪಂದದ ಪ್ರಕಾರ ಪಾವತಿಸಬೇಕಾದ ಬಾಡಿಗೆಯನ್ನೂ ಪಾವತಿಸಿಲ್ಲ ಎಂದು ಕೆಪೆಕ್ ತಿಳಿಸಿದೆ.

ಈ ಸಂಬಂಧ ಹಲವು ಬಾರಿ ನೋಟಿಸ್ ನೀಡಲಾಗಿದ್ದರೂ ಸಂಸ್ಥೆ ಸ್ಪಂದಿಸದ ಹಿನ್ನೆಲೆಯಲ್ಲಿ ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಜೊತೆಗೆ ಒಪ್ಪಂದ ಉಲ್ಲಂಘನೆಯ ಕಾರಣಕ್ಕೆ ಸಂಸ್ಥೆಗೆ ಟರ್ಮಿನೇಷನ್ ಆದೇಶ ನೀಡಲಾಗಿದೆ. ಆದರೆ ಘಟಕವನ್ನು ಕೆಪೆಕ್‌ಗೆ ಇನ್ನೂ ಹಸ್ತಾಂತರಿಸಿಲ್ಲ ಎಂದು ತಿಳಿಸಲಾಗಿದೆ. ಇದರ ಮಧ್ಯೆ ಘಟಕದ ಆವರಣದಲ್ಲಿ ಅನುಮಾನಾಸ್ಪದ ಸರಕು ವಾಹನಗಳ ಸಂಚಾರ ಕಂಡು ಬಂದ ಹಿನ್ನೆಲೆಯಲ್ಲಿ ಮಾರ್ಚ್ 2ರಂದು ಕೆಪೆಕ್ ಸಂಸ್ಥೆ ವಾಣಿಜ್ಯ ತೆರಿಗೆ ಇಲಾಖೆಗೆ ಮಾಹಿತಿ ನೀಡಿತ್ತು.

ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಬಾಳೆ ಸಂಸ್ಕರಣಾ ಘಟಕದ ಹಾಲ್‌ನಲ್ಲಿ ಯಾವುದೇ ದಾಖಲೆಗಳಿಲ್ಲದೆ ರೆಡಿಮೇಡ್ ಬಟ್ಟೆಗಳನ್ನು ಸಂಗ್ರಹಿಸಿರುವುದು ಪತ್ತೆಯಾಯಿತು. ಸದರಿ ಘಟಕದ ಆವರಣದಲ್ಲಿ ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ ಮತ್ತು ರಫ್ತು ಚಟುವಟಿಕೆಗಳಿಗೆ ಹೊರತ್ತಪಡಿಸಿ ಇನ್ನಾವುದೇ ಅನ್ಯ ಚಟುವಟಿಕೆಗಳಿಗೆ ಅಥವಾ ಬಳಕೆಗೆ ಆಸ್ಪದ ಇಲ್ಲ. ಸ್ಥಳದಲ್ಲಿದ್ದ ಮೇಲ್ವಿಚಾರಕರನ್ನು ವಿಚಾರಿಸಿದಾಗ, ಸಂಗ್ರಹಿಸಿದ್ದ ಬಟ್ಟೆಗಳಿಗೆ ಸಂಬಂಧಿಸಿದ ತೆರಿಗೆ ಬಿಲ್‌ಗಳು ಅಥವಾ ಅಗತ್ಯ ದಾಖಲೆಗಳನ್ನು ನೀಡಲು ವಿಫಲರಾದರು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಬಾಳೆ ಸಂಸ್ಕರಣಾ ಘಟಕದ ಹಾಲ್ ಅನ್ನು ಕೆಪೆಕ್ ಅಧಿಕಾರಿಗಳ ಸಮ್ಮುಖದಲ್ಲಿ ಸೀಲ್ ಮಾಡಿದ್ದಾರೆ. ಈ ಘಟಕವನ್ನು ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ, ರಫ್ತು ಕಾರ್ಯಗಳಿಗೆ ಮಾತ್ರ ಬಳಸಬೇಕಾಗಿದ್ದು. ಬೇರೆ ವಸ್ತುಗಳನ್ನು ಸಂಗ್ರಹಿಸಿರುವುದು ಒಪ್ಪಂದ ಉಲ್ಲಂಘನೆಯಾಗಿದೆ ಎಂದು ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ತಿಳಿಸಿದ್ದಾರೆ.

## ವಿಬಿ ಜಿರಾಮ್‌ಜಿ ಯೋಜನೆ ಕುರಿತ ಸಿಎಂ ಪ್ರಸ್ತಾಪಕ್ಕೆ ಪ್ರತಿಪಕ್ಷಗಳ ಆಕ್ಷೇಪ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕೇಂದ್ರ ಸರ್ಕಾರದ ಉದ್ದೇಶಿತ ವಿಬಿಜಿ ರಾಮ್‌ಜಿ ಯೋಜನೆ ತಿದ್ದುಪಡಿ ವಿಧಾನಸೌಧದಲ್ಲಿ ಪ್ರತಿಧ್ವನಿಸಿ ಪ್ರತಿಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ ಪ್ರಸಂಗ ಜರುಗಿತು. ಹಣಕಾಸು ಖಾತೆಯನ್ನು ಹೊಂದಿರುವ ಸಿಎಂ ಸಿದ್ದರಾಮಯ್ಯ ಅವರು ಮಹಾತಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕೇಂದ್ರ ಸರ್ಕಾರವು ವ್ಯವಸ್ಥಿತವಾಗಿ ದುರ್ಬಲಗೊಳಿಸಿ ಜನರ ಉದ್ಯೋಗದ ಹಕ್ಕುಗಳನ್ನು ಮೊಟಕುಗೊಳಿಸಿದೆ. ರಾಜ್ಯದ ಆರ್ಥಿಕ ಹೊರೆ ಇನ್ನಷ್ಟು ಹೆಚ್ಚಲಿದೆ. ಈ ಕಾರಣಗಳಿಂದ ರಾಜ್ಯದ ಹಿತಾಸಕ್ತಿಗಾಗಿ ಪಕ್ಷಾತೀತವಾಗಿ ಒಗ್ಗೂಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲೇಬೇಕೆಂದು ಕರೆಕೊಟ್ಟರು. ಆಗ ಪ್ರತಿಪಕ್ಷಗಳ ಸದಸ್ಯರು ಆಕ್ಷೇಪಿಸಿ ಮನೇಗ್ರಾ, ತಿದ್ದುಪಡಿಯಿಂದ ಯಾವುದೇ ರೀತಿಯ ಅನ್ಯಾಯ ಆಗುವುದಿಲ್ಲ ಎಂದು ತಿರುಗೇಟು ನೀಡಿದರು. ಈ ವೇಳೆ ಸಭಾಧ್ಯಕ್ಷರಾದ ಖಾದರ್ ಪ್ರತಿಪಕ್ಷಗಳ ಸದಸ್ಯರನ್ನು ಸಮಾಧಾನಪಡಿಸಿದರು. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಸರ್ಕಾರ ಶಕ್ತಿ ಮೀರಿ ಶ್ರಮಿಸುತ್ತಿದ್ದರೂ ಕೇಂದ್ರ ಸರ್ಕಾರವು ಒಕ್ಕೂಟ ತತ್ವದ ಸಾಂವಿಧಾನಿಕ ನಿಯಮಗಳನ್ನು ಪಾಲಿಸದೆ ರಾಜ್ಯಕ್ಕೆ ನಿರಂತರ ಅನ್ಯಾಯ ಮಾಡುತ್ತಿದೆ. ಕೇಂದ್ರ ಪುರಸ್ಕೃತ ಯೋಜನೆಗಳನ್ನು ತನ್ನ ಪಾಲಿನ ಕಡಿತ, ಕೇಂದ್ರದ ಯೋಜನೆಗಳಲ್ಲಿ ತಾರತಮ್ಯ, 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ತೆರಿಗೆ ಹಂಚಿಕೆಯಲ್ಲಿ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ತೆರಿಗೆ ಹಂಚಿಕೆಯಲ್ಲಿನ ಅನ್ಯಾಯದ ಬಗ್ಗೆ 15ನೇ ಹಣಕಾಸು ಆಯೋಗ ಮಾಡಿದ್ದ ವಿಶೇಷ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರ ಅನುಷ್ಠಾನ ಮಾಡದ ಕಾರಣ, ಉಂಟಾದ ಆರ್ಥಿಕ ನಷ್ಟ, ಜಿಎಸ್‌ಟಿ ದರಗಳನ್ನು ತರ್ಕಬದ್ಧಗೊಳಿಸುವ ನಿರ್ಧಾರದಿಂದ ರಾಜ್ಯದ ಬೊಕ್ಕಸದ ಮೇಲೆ ಹೆಚ್ಚುವರಿ ಹೊರೆ ಬಿದಿದ್ದು, ಅದರ ಒತ್ತಡವನ್ನು ನಿಭಾಯಿಸುವುದು ಸವಾಲಿನ ಕೆಲಸವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ರೂಢಿಸಿ ಅನುಷ್ಠಾನಗೊಳಿಸುವ ನಮ್ಮ ಸಂಕಲ್ಪವನ್ನು ಈ ಆಯವ್ಯಯ ದೃಢಪಡಿಸುತ್ತದೆ. ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ ಆರ್ಥಿಕ ಬೆಳವಣಿಗೆಯೊಂದಿಗೆ ವಿತ್ತೀಯ ಶಿಸ್ತು ಪಾಲಿಸಲು ಸಾಧ್ಯವಾಗಿರುವುದು ನಮ್ಮ ಆಡಳಿತ ವಿಧಾನದ ಮಾದರಿಯಾಗಿದೆ ಎಂದರು.

ಈ ಆಯವ್ಯಯವು ನಾಡಿನ ಉಜ್ವಲ ಭವಿಷ್ಯ ಕಟ್ಟುವ ದೃಷ್ಟಿಯಿಂದ ರೂಪಿಸಲಾಗಿದೆ. ರಾಜ್ಯದ ಅಭಿವೃದ್ಧಿಗಾಗಿ ಪಕ್ಷಾತೀತವಾಗಿ ಶ್ರಮಿಸುವುದು ನಮೆಲ್ಲರ ಕರ್ತವ್ಯವಾಗಿದೆ ಎಂದು ಸಿಎಂ ಸಲಹೆ ಮಾಡಿದರು.

## ಬಳ್ಳಾರಿಯ 27 ಪ್ರವಾಸಿಗರು ಬೆಂಗಳೂರಿಗೆ ವಾಪಸ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಇಸ್ರೇಲ್ ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧದಿಂದಾಗಿ ಮಧ್ಯಪ್ರಾಚ್ಯ ದೇಶಗಳಲ್ಲಿ ಉದ್ವಿಗ್ನತೆ ಉಂಟಾಗಿದೆ. ಜನರು ಆತಂಕದಲ್ಲಿದ್ದಾರೆ. ಪ್ರವಾಸಕ್ಕೆ, ಉದ್ಯೋಗಕ್ಕೆ, ಬೇರೆ ಬೇರೆ ಕಾರಣಗಳಿಂದ ದುಬೈಗೆ ತೆರಳಿರುವ ಸಾವಿರಾರು ಭಾರತೀಯರು ಅಲ್ಲಿ ಸಿಲುಕಿದ್ದಾರೆ. ದುಬೈನಲ್ಲಿ ಸಿಲುಕಿದ್ದ ಬಳ್ಳಾರಿ, ಚಿತ್ರದುರ್ಗದ ಪ್ರವಾಸಿಗರು ನಾಲ್ಕು ದಿನದ ಬಳಿಕ ಶುಕ್ರವಾರ ಬೆಳಗ್ಗೆ ಬೆಂಗಳೂರಿಗೆ ಸುರಕ್ಷಿತವಾಗಿ ವಾಪಸಾಗಿದ್ದಾರೆ.

**ಏರ್ಪೋರ್ಟ್‌ನಲ್ಲಿ ಆರೋಗ್ಯ ವಿಚಾರಿಸಿದ ಮಾಜಿ ಸಚಿವ ನಾಗೇಂದ್ರ:** ಸುರಕ್ಷತಾ ದೃಷ್ಟಿಯಿಂದ ವಿಮಾನಯಾನ ಸೇವೆ ರದ್ದಾಗಿದ್ದರಿಂದ ದುಬೈನಲ್ಲಿ ಬಳ್ಳಾರಿ ಮೂಲದ 54 ಜನ ಪ್ರವಾಸಿಗರು ಸಿಲುಕಿದ್ದರು. ಬಳಿಕ ನಿನ್ನೆ ವಿಮಾನದ ಮೂಲಕ ದುಬೈನಿಂದ ಕೊಚ್ಚಿಗೆ ಬಂದಿಳಿದ ಪ್ರಯಾಣಿಕರು, ಬಳಿಕ ಅಲ್ಲಿಂದ ಬೆಂಗಳೂರಿಗೆ ಶುಕ್ರವಾರ ಬೆಳಿಗ್ಗೆ ಬಂದಿಳಿದಿದ್ದಾರೆ. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಮಾಜಿ ಸಚಿವ, ಬಳ್ಳಾರಿ ಗ್ರಾಮೀಣ ಶಾಸಕ ನಾಗೇಂದ್ರ, ಅವರು ಹೂಗುಚ್ಛ ನೀಡಿ ಪ್ರವಾಸಿಗರನ್ನು ಸ್ವಾಗತಿಸಿ, ಆರೋಗ್ಯ ವಿಚಾರಿಸಿದರು.

**ಪ್ರವಾಸಿಗರ ಸಂತಸ:** ಬಳ್ಳಾರಿ, ಚಿತ್ರದುರ್ಗದ 54 ಜನ ಟ್ರಾವೆಲ್ ಏಜನ್ಸಿ ಮೂಲಕ ದುಬೈ ಪ್ರವಾಸ ಕೈಗೊಂಡಿದ್ದರು. ಪ್ರವಾಸಿ ಮುಗಿಸಿದ ತಂಡ ಫೆ.28 ರಂದು ದುಬೈನಿಂದ 9 ಗಂಟೆಯ ವಿಮಾನದಲ್ಲಿ ಭಾರತಕ್ಕೆ ವಾಪಸ್ಸಾಗಬೇಕಿತ್ತು. ಆದರೆ ಅಮೆರಿಕ, ಇಸ್ರೇಲ್, ಇರಾನ್ ಮಧ್ಯೆ ಯುದ್ಧ ಆರಂಭವಾಗಿದ್ದರಿಂದ ವಿಮಾನಗಳು ರದ್ದಾದವು. ಹಾಗಾಗಿ ಅವರುಗಳು ಅಲ್ಲೇ ಸಿಲುಕಿಕೊಂಡಿದ್ದರು. ಯುದ್ಧದ ಭಯ, ತೀವ್ರತೆ ಹೆಚ್ಚಾಗುತ್ತಿದ್ದಂತೆ ಈ ಕುರಿತು ಅಲ್ಲಿಂದಲೇ ವಿಡಿಯೋ ಮಾಡಿ, ನೆರವಿಗೆ ಬರುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದರು.

4 ದಿನಗಳ ಕಾಲ ಆತಂಕದಲ್ಲಿದ್ದ ಕನ್ನಡಿಗರು ಶುಕ್ರವಾರ ತಾಯ್ನಾಡಿಗೆ ವಾಪಸ್ ಆಗಮಿಸಿ, ಸಂತಸ ವ್ಯಕ್ತಪಡಿಸಿದ್ದಾರೆ. ಈ ವೇಳೆ ಶಾಸಕ ನಾಗೇಂದ್ರ, ಭರತ್ ರೆಡ್ಡಿ, ಸಂಸದ ತುಕರಾಂ ಅವರ ಸಹಾಯವನ್ನು ನೆನೆದು ಬಳ್ಳಾರಿ ಪ್ರವಾಸಿಗರು, ಧನ್ಯವಾದ ಅರ್ಪಿಸಿದ್ದಾರೆ. ಜೊತೆಗೆ ರಾಜ್ಯ ಸರ್ಕಾರಕ್ಕೂ ಕೃತಜ್ಞತೆ ಸಲ್ಲಿಸಿದ್ದಾರೆ.

**ತವರಿಗೆ 230 ಕನ್ನಡಿಗರು:** ಅಮೆರಿಕ -ಇರಾನ್ ಸಂಘರ್ಷದಿಂದ ಯುಎಇ ರಾಜಧಾನಿ ಅಬುಧಾಬಿಯಲ್ಲಿ ಸಿಲುಕಿದ್ದ ಭಾರತೀಯರನ್ನು ಹೊತ್ತ ನಾಲ್ಕು ವಿಮಾನಗಳು ಭಾರತಕ್ಕೆ ಸೋಮವಾರ ಬಂದಿಳಿದಿವೆ. 230 ಕನ್ನಡಿಗರು ಸೇರಿದಂತೆ ಒಂದು ಸಾವಿರ ಮಂದಿ ತವರಿಗೆ ಸುರಕ್ಷಿತವಾಗಿ ಮರಳಿದರು. ಅಬುಧಾಬಿ ವಿಮಾನ ನಿಲ್ದಾಣದಿಂದ ಹೊರಟ ಎತಿಹಾದ್ ಏರ್‌ವೇಸ್‌ನ ನಾಲ್ಕು ವಿಮಾನಗಳು ದಿಲ್ಲಿ, ಬೆಂಗಳೂರು, ಮುಂಬಯಿ, ಕೊಚ್ಚಿ ತಲುಪಿವೆ. ಇವೈ 216 ವಿಮಾನ ದಿಲ್ಲಿಯಲ್ಲಿ ಲ್ಯಾಂಡ್ ಆಗಿದ್ದು, ಇವೈ 204 ವಿಮಾನ ಮುಂಬಯಿನಲ್ಲಿ ಲ್ಯಾಂಡ್ ಆಗಿದೆ. ಇವೈ 334 ಕೊಚ್ಚಿಯಲ್ಲಿ ಲ್ಯಾಂಡ್ ಆದರೆ, ಇವೈ 238 ವಿಮಾನ ಬೆಂಗಳೂರಿಗೆ ಆಗಮಿಸಿದೆ. ಖಮೇನಿ ಹತ್ಯೆ ಬಳಿಕ ನೆರೆಯ ಕೊಲ್ಲಿದೇಶದ ವಿಮಾನ ನಿಲ್ದಾಣಗಳ ಮೇಲೆ ಇರಾನ್ ದಾಳಿ ನಡೆಸಿದ ಪರಿಣಾಮ ವಿಮಾನ ಸಂಚಾರ ಎರಡು ದಿನ ಸ್ಥಗಿತಗೊಂಡಿತ್ತು.

## ಮಾನಹಾನಿ ಸುದ್ದಿ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ ಶ್ರೀಲಂಕಾ ಸುಪ್ರೀಂಕೋರ್ಟ್ ನ್ಯಾಯಮೂರ್ತಿ

• ಉದಯವಾಹಿನಿ, ಬೆಂಗಳೂರು




ತಮ್ಮ ವಿರುದ್ಧದ ಎಲ್ಲಾ ಮಾನಹಾನಿ ಸುದ್ದಿ ಲೇಖನ, ಯುಆರ್‌ಎಲ್‌ಗಳನ್ನು ತೆರವುಗೊಳಿಸುವಂತೆ ಕೋರಿ ಶ್ರೀಲಂಕಾ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಎ.ಹೆಚ್.ಎಂ.ದಿಲೀಪ್ ನವಾಜ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಶ್ರೀಲಂಕಾದ ನ್ಯಾಯಮೂರ್ತಿ ನವಾಜ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ನ್ಯಾಯಪೀಠ, ಅರ್ಜಿಯಲ್ಲಿ ಪ್ರತಿವಾದಿಗಳಾಗಿರುವ ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಇಲಾಖೆ, ಗೂಗಲ್ ಇಂಡಿಯಾ, ಗೂಗಲ್ ಐಎನ್‌ಸಿ, ಕೊಲಂಬೊ ಟೆಲಿಗ್ರಾಫ್, ಲಂಕಾ ಈನ್ಯೂಸ್‌ಗೆ ನೋಟಿಸ್ ಜಾರಿಗೊಳಿಸಿದೆ.

ಅಲ್ಲದೇ, ಅರ್ಜಿದಾರರ ಪರ ವಕೀಲರು ಕೊಲಂಬೊ ಟೆಲಿಗ್ರಾಫ್, ಲಂಕಾ ಈ ನ್ಯೂಸ್‌ಗೆ ಈ-ಮೇಲ್ ಮೂಲಕ ನೋಟಿಸ್ ಕಳುಹಿಸಿಕೊಡಬೇಕು ಎಂದು ಸೂಚನೆ ನೀಡಿ, ವಿಚಾರಣೆಯನ್ನು ಮಾರ್ಚ್ 16ಕ್ಕೆ ಮುಂದೂಡಿದೆ. ಶ್ರೀಲಂಕಾದಿಂದ ಗಡಿಪಾರುಗೊಂಡಿರುವ ಇಬ್ಬರು ಪತ್ರಕರ್ತರು ನಡೆಸುತ್ತಿರುವ ಕೊಲಂಬೊ ಟೆಲಿಗ್ರಾಫ್ ಮತ್ತು ಲಂಕಾ ಈನ್ಯೂಸ್ ಸುದ್ದಿ ತಾಣಗಳು 2015 ಮತ್ತು 2020ರಲ್ಲಿ ತಮ್ಮ ವಿರುದ್ಧ ಮಾನಹಾನಿ ಸುದ್ದಿ ಪ್ರಕಟಿಸಿವೆ. ಪ್ರಕಟವಾಗಿರುವ ಎರಡು ಸುದ್ದಿ ಹಾಗೂ 2020ರಲ್ಲಿ ಲಂಕಾ ಈನ್ಯೂಸ್ ಪ್ರಕಟಿಸಿರುವ ಒಂದು ಸುದ್ದಿ ಸೇರಿ ಒಟ್ಟು ನಾಲ್ಕು ಸುದ್ದಿಗಳನ್ನು ಆನ್‌ಲೈನ್‌ನಿಂದ ತೆಗೆಯಲು ನಿರ್ದೇಶಿಸಬೇಕು. ಜೊತೆಗೆ ಅದಕ್ಕೆ ಸಂಬಂಧಿಸಿದ ಯುಆರ್‌ಎಲ್‌ಗಳ ಮೇಲೆ ಸಂಪೂರ್ಣ ನಿಷೇಧ ಹೇರಬೇಕು.

ಈ ಸಂಬಂಧ 2023ರಲ್ಲಿ ನ್ಯಾ.ನವಾಜ್ ಅವರು ಗೂಗಲ್ ಸಂಸ್ಥೆಗೆ ಲೀಗಲ್ ನೋಟಿಸ್ ಕಳುಹಿಸಿದ್ದು, ಅಲ್ಲಿಂದ ಯಾವುದೇ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ ಭಾರತದ ಪ್ರಧಾನ ಕಚೇರಿಯು ಬೆಂಗಳೂರಿನಲ್ಲಿ ಇರುವುದರಿಂದ ಕರ್ನಾಟಕ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆ ಮಾಡಿರುವುದಾಗಿ ವಿವರಿಸಿದ್ದಾರೆ.

ಅರ್ಜಿದಾರ ತಮ್ಮ ಅರ್ಜಿಯಲ್ಲಿ ತಾನು, ಶ್ರೀಲಂಕಾ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಆಗಿರುವುದರಿಂದ ಮಾನಹಾನಿ ಸುದ್ದಿಯ ವಿಚಾರವಾಗಿ ಅಲ್ಲಿನ ನ್ಯಾಯಾಲಯದಲ್ಲಿ ದಾವೆ ಹೂಡುವುದು ನೈತಿಕವಾಗಿ ನಿಷೇಧಿಸಲ್ಪಟ್ಟಿದೆ. ಶ್ರೀಲಂಕಾ ನ್ಯಾಯಾಲಯಗಳ ಮೆಟ್ಟಿಲೇರಿದರೆ ನೈತಿಕ ಸಂಘರ್ಷ ಉಂಟಾಗುವ ಸಾಧ್ಯತೆ ಇದೆ.

# ನಿಮ್ಹಾನ್ಸ್‌ಗೆ ದಾಖಲೆ ಸಂಖ್ಯೆಯಲ್ಲಿ ರೋಗಿಗಳ ಭೇಟಿ

## ಮನೋರೋಗಗಳ ಚಿಕಿತ್ಸೆಗೆ ದೇಶದ ವಿವಿಧೆಡೆಯಿಂದ ಬರುವ ರೋಗಿಗಳು

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಗೆ ಚಿಕಿತ್ಸೆ ಸಂಬಂಧ ಬರುವ ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು. ಕಳೆದ ಒಂದೇ ವರ್ಷದಲ್ಲಿ ಒಟ್ಟು 6.80 ಲಕ್ಷ ರೋಗಿಗಳು ನೋಂದಣಿ ಮಾಡಿಕೊಂಡು ಚಿಕಿತ್ಸೆ ಪಡೆದಿದ್ದಾರೆ. ಈವರೆಗೆ ವರ್ಷದ ಅವಧಿಯಲ್ಲಿ ಚಿಕಿತ್ಸೆ ಪಡೆದ ಗರಿಷ್ಠ ರೋಗಿಗಳ ಸಂಖ್ಯೆ ಇದಾಗಿದೆ. ನಗರದ ಹೃದಯ ಭಾಗವಾದ ಲಕ್ಕಸಂದ್ರದಲ್ಲಿ ಇರುವ ಸಂಸ್ಥೆಯು, ವೈದ್ಯಕೀಯ ಚಿಕಿತ್ಸೆಯ ಜತೆಗೆ ಸಂಶೋಧನೆ ಹಾಗೂ ಶಿಕ್ಷಣಕ್ಕೂ ಆದ್ಯತೆ ನೀಡಿದೆ. ಈ ಸಂಸ್ಥೆಗೆ ರಾಜ್ಯದ ವಿವಿಧ ಭಾಗಗಳ ಜತೆಗೆ, ಹೊರ ರಾಜ್ಯಗಳಿಂದಲೂ ಅಧಿಕ ಸಂಖ್ಯೆಯಲ್ಲಿ ರೋಗಿಗಳು ಬರುತ್ತಿದ್ದಾರೆ. 2024ರಲ್ಲಿ ಒಳರೋಗಿಗಳೂ ಸೇರಿ ಒಟ್ಟು 5.5 ಲಕ್ಷ ಮಂದಿ ಸಂಸ್ಥೆಗೆ ಭೇಟಿ ನೀಡಿದ್ದರು. ಕಳೆದ ವರ್ಷ ಈ ಸಂಖ್ಯೆ 6 ಲಕ್ಷದ ಗಡಿ ದಾಟಿದೆ. ನಿತ್ಯ ಸರಾಸರಿ ಎರಡು ಸಾವಿರ ಮಂದಿ ಹೊರರೋಗಿ ವಿಭಾಗಕ್ಕೆ ಭೇಟಿ ನೀಡುತ್ತಿದ್ದು, ಹಾಲಿ ವ್ಯವಸ್ಥೆಯಡಿ ರೋಗಿಗಳ ನಿರ್ವಹಣೆ ಕಷ್ಟಸಾಧ್ಯವಾಗಿದೆ. ಚಿಕಿತ್ಸೆ ಸಂಬಂಧ ರೋಗಿಗಳು ಮುಂಜಾನೆಯಿಂದಲೇ ಸಂಸ್ಥೆಯ ಆವರಣದಲ್ಲಿ ಕಾಯುವ ದೃಶ್ಯ ಸಾಮಾನ್ಯವಾಗಿದೆ.

**ಒಂದೇ ವರ್ಷದಲ್ಲಿ 6.80 ಲಕ್ಷ ಮಂದಿ ನೋಂದಣಿ**

ಹೊರ ರೋಗಿಗಳ ವಿಭಾಗ, ತುರ್ತು ಚಿಕಿತ್ಸಾ ವಿಭಾಗ, ನರರೋಗ ವಿಭಾಗ, ನರಶಸ್ತ್ರಚಿಕಿತ್ಸಾ ವಿಭಾಗ, ಮನೋವೈದ್ಯ ವಿಭಾಗ, ಮಾದಕ ವ್ಯಸನಿಗಳ ಚಿಕಿತ್ಸಾ ವಿಭಾಗ ಸೇರಿದಂತೆ 60ಕ್ಕೂ ಅಧಿಕ ವಿಭಾಗಗಳನ್ನು ಸಂಸ್ಥೆ ಒಳಗೊಂಡಿದೆ. ಅಪಘಾತ ಸೇರಿದಂತೆ ನಾನಾ ಕಾರಣಗಳಿಂದ ಗಾಯಗೊಂಡು ತಲೆಗೆ ಗಂಭೀರವಾಗಿ ಪೆಟ್ಟು ಮಾಡಿಕೊಂಡವರು, ಮನೋರೋಗಿಗಳು, ಮಾನಸಿಕ ಅಸ್ವಸ್ಥರು, ನರರೋಗ ಸಮಸ್ಯೆ ಉಳ್ಳವರು, ದುಶ್ಚಟಗಳಿಗೆ ಒಳಗಾದವರು, ವಯೋಸಹಜ ನರ ದೌರ್ಬಲ್ಯಗಳನ್ನು ಹೊಂದಿರುವವರು, ಸ್ಮರಣ ಶಕ್ತಿ ಕುಂದಿದವರು ಸೇರಿ ಮಿದುಳು ಮತ್ತು ಮನಸ್ಸಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಒಳಗಾದವರಿಗೆ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತದೆ.


**"ಕಳೆದ ವರ್ಷ ಸಂಸ್ಥೆಗೆ ಅತೀ ಹೆಚ್ಚು ರೋಗಿಗಳು ಭೇಟಿ ನೀಡಿದ್ದಾರೆ ಗುಣಮಟ್ಟದ ಚಿಕಿತ್ಸೆಯಿಂದಾಗಿ ಸಂಸ್ಥೆಗೆ ಬರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ.**

**- ಡಾ. ಪ್ರತಿಮಾ ಮೂರ್ತಿ, ನಿಮ್ಹಾನ್ಸ್ ನಿರ್ದೇಶಕಿ**

**ಸಹಾಯವಾಣಿಗೆ ಸಾವಿರಾರು ಕರೆ:** ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ನಿಮ್ಹಾನ್ಸ್ ಪ್ರಾರಂಭಿಸಿರುವ ಟೆಲಿ ಮನಸ್ ಸಹಾಯವಾಣಿಗೆ (14416) ಪ್ರತಿನಿತ್ಯ ಸಾವಿರಾರು ದೂರವಾಣಿ ಕರೆಗಳು ಬರುತ್ತಿವೆ.

ವಾರದ ಎಲ್ಲಾ ದಿನಗಳು 24 ಗಂಟೆಯೂ ದೂರವಾಣಿ ಕರೆಗಳನ್ನು 20 ಭಾಷೆಗಳಲ್ಲಿ ಸ್ವೀಕರಿಸಲಾಗುತ್ತಿದೆ. 2022ರ ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾದ ಈ ಸಹಾಯವಾಣಿಗೆ ಆತ್ಮಹತ್ಯೆ ಆಲೋಚನೆ ಸೇರಿ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಈವರೆಗೆ 30 ಲಕ್ಷಕ್ಕೂ ಅಧಿಕ ದೂರವಾಣಿ ಕರೆಗಳು ಬಂದಿವೆ. ವ್ಯಥೆಗೆ ಒಳಪಟ್ಟವರು ಕೌಟುಂಬಿಕ ಸಮಸ್ಯೆ ಎದುರಿಸುತ್ತಿರುವವರು ಶೈಕ್ಷಣಿಕ ಒತ್ತಡಕ್ಕೆ ಒಳಗಾದವರು ಮಾದಕ ವಸ್ತುಗಳ ಸೇವನೆಯ ವ್ಯಸನಕ್ಕೆ ಒಳಗಾದವರು ಜ್ಞಾಪಕ ಶಕ್ತಿ ತೊಂದರೆ ಇರುವವರು ಆರ್ಥಿಕ ಒತ್ತಡದಲ್ಲಿ ಇರುವವರು ಸೇರಿ ವಿವಿಧ ಮಾನಸಿಕ ಸಮಸ್ಯೆ ಎದುರಿಸುತ್ತಿರುವವರು ಸಹಾಯವಾಣಿಗೆ ಕರೆ ಮಾಡುತ್ತಿದ್ದಾರೆ. ಈ ಸಹಾಯವಾಣಿಯಿಂದಾಗಿ ನಿಮ್ಹಾನ್ಸ್ ಹೊರರೋಗಿಗಳ ವಿಭಾಗದ ಮೇಲಿನ ಒತ್ತಡ ಕೊಂಚ ಇಳಿಕೆಯಾಗಿದೆ. ಅಗತ್ಯ ಇದ್ದವರಿಗೆ ಈ ಸಹಾಯವಾಣಿ ನೆರವಿನಿಂದ ಮನೋವೈದ್ಯರು ವಿಡಿಯೋ ಸಮಾಲೋಚನೆಯನ್ನೂ ನಡೆಸುತ್ತಾರೆ.

## ಎಲೆಕ್ಟ್ರಿಕ್ ವಾಹನ ಬಳಕೆಗೆ ರಾಜ್ಯ ಸರ್ಕಾರ ಪ್ರೋತ್ಸಾಹ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಜನರು ಹೆಚ್ಚು ಹೆಚ್ಚು ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳನ್ನು ಬಳಕೆ ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಎಲ್ಲಾ ರೀತಿಯ ಪ್ರೋತ್ಸಾಹ ನೀಡಲಿದೆ ಎಂದು ಪೌರಾಡಳಿತ ಸಚಿವ ರಹೀಂ ಖಾನ್ ಭರವಸೆ ನೀಡಿದ್ದಾರೆ. ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ 'ಇವೈಸ್ ರೆಂಟಲ್ಸ್ ' ಆನ್‌ಲೈನ್ ದ್ವಿಚಕ್ರ ವಾಹನ ಬಾಡಿಗೆ ನೀಡುವ ಮೊಬೈಲ್ ಆ್ಯಪ್ ಬಿಡುಗಡೆ ಮಾಡಿ ಸಚಿವರು ಮಾತನಾಡಿದರು.

ವಾಯುಮಾಲಿನ್ಯದಿಂದ ಪರಿಸರ ಹಾಳಾಗುತ್ತಿದ್ದು ಇದರಿಂದ ಅನೇಕ ಆರೋಗ್ಯ ಸಮಸ್ಯೆಗಳು ಎದುರಾಗುತ್ತಿವೆ. ದಿನೇ ದಿನೇ ಇಂಧನ ಬೆಲೆ ಗಗನಮುಖಿಯಾಗುತ್ತಿದ್ದು, ಬಡವರು ಹಾಗೂ ಕೆಳಮಧ್ಯಮ ವರ್ಗದವರಿಗೆ ಇದು ಹೊರೆಯಾಗಿದೆ. ಈ ಸಮಸ್ಯೆಗೆ ವಿದ್ಯುತ್ ಚಾಲಿತ ವಾಹನಗಳು ಪರ್ಯಾಯ ಸಾರಿಗೆ ಸಾಧನಗಳಾಗಿವೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ ಖಾಸಗಿ ಸಂಸ್ಥೆಗಳು ಕೈಗೊಳ್ಳುವ ಪ್ರಯತ್ನಗಳಿಗೆ ರಾಜ್ಯ ಸರ್ಕಾರ ಸಂಪೂರ್ಣ ಉತ್ತೇಜನ ನೀಡಲಿದೆ ಎಂದು ಸಚಿವರು ಸಮಾರಂಭದಲ್ಲಿ ಘೋಷಿಸಿದರು.

ಜನಪ್ರಿಯ ರಿಯಾಲಿಟಿ ಶೋ 'ಬಿಗ್ ಬಾಸ್' ಸ್ಪರ್ಧೆ ವಿಜೇತ ಗಿಲ್ಲಿ ನಟ 'ಇವೈಸ್ ರೆಂಟಲ್ಸ್'ನ ನೂತನ ದ್ವಿಚಕ್ರ ವಾಹನಗಳನ್ನು ಮಾರುಕಟ್ಟೆಗೆ ಸಮರ್ಪಿಸಿದರು. ಈ ವೇಳೆ ಮಾತನಾಡಿದ ಗಿಲ್ಲಿ ನಟ, ಗ್ರಾಮೀಣ ಭಾಗದಿಂದ ಉದ್ಯೋಗ ಅರಸಿ ಬೆಂಗಳೂರಿಗೆ ಬರುವ ಯುವಕ-ಯುವತಿಯರಿಗೆ ಹೊಸ ದ್ವಿಚಕ್ರ ವಾಹನ ಖರೀದಿ ಮಾಡಲು ಹಣ ಸಾಲದು. ಇಂಥವರಿಗೆ ಬಾಡಿಗೆ ಆಧಾರದಲ್ಲಿ 'ಇವೈಸ್ ರೆಂಟಲ್ಸ್' ವಾಹನಗಳು ತುಂಬಾ ಉಪಯುಕ್ತವಾಗಿವೆ ಎಂದರು.

# 3 ತಿಂಗಳಿನಲ್ಲಿ ಭೂ ದಾಖಲೆಗಳ ಡಿಜಿಟಲೀಕರಣ ಕಾರ್ಯ ಪೂರ್ಣ

• **ಉದಯವಾಹಿನಿ, ಮೈಸೂರು**

ಶೀಘ್ರವೇ ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿ ಕಚೇರಿಗಳು ಸಂಪೂರ್ಣ ಪೇಪರ್‌ಲೆಸ್ ಆಗಲಿವೆ. ಈ ಪ್ರಕ್ರಿಯೆಯಲ್ಲಿ ಕಾರ್ಯ ನಿರ್ವಹಿಸುವವರಿಗೆ ತರಬೇತಿ ನೀಡುವ ಕಾರ್ಯ ಭರದಿಂದ ಸಾಗಿದೆ. ತನ್ಮೂಲಕ ಜಿಲ್ಲೆಯಲ್ಲಿ ಈ ಹೊಸ ವ್ಯವಸ್ಥೆ ಅನುಷ್ಠಾನಕ್ಕೆ ನೋಂದಣಿ ಹಾಗೂ ಮುದ್ರಾಂಕ ಇಲಾಖೆ ಸಿದ್ಧತೆ ಮಾಡಿಕೊಳ್ಳುತ್ತಿದೆ.ಮೈಸೂರಿನಲ್ಲಿ ನಗರ ಕೇಂದ್ರದಲ್ಲಿ 5, ತಾಲ್ಲೂಕು ಕೇಂದ್ರಗಳಲ್ಲಿ 9 ಸೇರಿ ಒಟ್ಟು 14 ಕಚೇರಿಗಳಿವೆ. ಒಂದು ಕಚೇರಿಯಲ್ಲಿ ನಿತ್ಯವೂ ಕನಿಷ್ಠ 40ರಿಂದ 50 ನೋಂದಣಿ ದಾಖಲೆಗಳ ಪರಿಶೀಲನೆ ನಡೆಯುತ್ತದೆ. ನಿತ್ಯವೂ ಜಿಲ್ಲೆಯಲ್ಲಿ 1.5 ಕೋಟಿ ರೂ. ರೆವೆನ್ಯೂ ಬರುತ್ತದೆ ಈಗ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಪೇಪರ್‌ಲೆಸ್ ನೋಂದಣಿ



ಯುಗ ಆರಂಭವಾಗುಧಿತ್ತಿದೆ. ಡಿಜಿಟಲ್ ಸಹಿ ಹೊರತುಪಡಿಸಿ ದಸ್ತಾವೇಜು ನೋಂದಣಿ, ಸ್ಟ್ಯಾಂಪ್ ಡ್ಯೂಟಿ ಪಾವತಿ, ಪ್ರಮಾಣಪತ್ರ ಪಡೆಯುವ ವ್ಯವಸ್ಥೆ ಆನ್‌ಲೈನ್ ಮೂಲಕವೇ ನಡೆಯುತ್ತಿದೆ. ಆದರೆ, ಸಂಪೂರ್ಣವಾಗಿ ಪೇಪರ್‌ಲೆಸ್ ನೋಂದಣಿ ಜಾರಿಗೆ ಬರಬೇಕಾದರೆ ಡಿಜಿಟಲ್ ಸಹಿಯನ್ನು ಜಾರಿಗೆ ತರಬೇಕಿದೆ. ಅಲ್ಲದೇ ರಾಜ್ಯದಾದ್ಯಂತ ಇರುವ ಎಲ್ಲಾ ಆಸ್ತಿ ದಾಖಲೆಗಳ ಡಿಜಿಟಲೀಕರಣಗೊಳ್ಳಬೇಕಿದೆ.

ಈ ನಿಟ್ಟಿನಲ್ಲಿ ಕಾವೇರಿ 2 ಸಾಫ್ಟ್‌ವೇರ್ ಮುಖಾಂತರ ಆಧಾರ್ ಸಹಾಯದಿಂದ ಡಿಜಿಟಲ್ ಸಹಿ ಪಡೆದುಕೊಳ್ಳುವ ವ್ಯವಸ್ಥೆ ಅನುಷ್ಠಾನ ಗೊಳಿಸಲಾಗುತ್ತಿದೆ ಇದಲ್ಲದೇ ಭೂ ಸುರಕ್ಷಾ ಯೋಜನೆಯಡಿ ರಾಜ್ಯದ ಎಲ್ಲಾ ಭೂ ದಾಖಲೆಗಳ ಡಿಜಿಟಲೀಕರಣ ನಡೆಯುತ್ತಿದೆ.

**3 ತಿಂಗಳಲ್ಲಿ ಡಿಜಿಟಲೀಕರಣ:** ಸದ್ಯ ಆಸ್ತಿ ದಾಖಲೆಗಳ ಡಿಜಿಟಲೈಜೇಷನ್ ಶೇ.78ರಷ್ಟು ಮುಕ್ತಾಯವಾಗಿದೆ. 101 ತಾಲ್ಲೂಕುಗಳಲ್ಲಿ ಶೇ.100ರಷ್ಟು ಪೂರ್ಣಗೊಂಡಿದೆ. ಮುಂದಿನ ಮೂರು ತಿಂಗಳೊಳಗೆ ಇನ್ನುಳಿದ ಎಲ್ಲಾ ತಾಲ್ಲೂಕುಗಳ ಕಾರ್ಯವೂ ಪೂರ್ಣಗೊಳ್ಳಲಿದೆ. ಬಳಿಕ ಆನ್‌ಲೈನ್ ಮುಖಾಂತರವೇ ಎಲ್ಲಾ ದಾಖಲೆಗಳನ್ನು ತಾಳೆ ನೋಡಿ ನೋಂದಣಿ ಮಾಡುವ ಹಾಗೂ ಸಹಿಯನ್ನು ಆಧಾರ್ ಅಥೆಂಟಿಕೇಷನ್ ಮುಖಾಂತರವೇ ಪಡೆದುಕೊಳ್ಳಲಾಗುತ್ತದೆ. ಆಗ ನೋಂದಣಿಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳೂ ಪೇಪರ್‌ಲೆಸ್ ಆಗಲಿವೆ.

**ಅಗತ್ಯವಿರುವವರಿಗೆ ತರಬೇತಿ:** ಈ ನಿಟ್ಟಿನಲ್ಲಿ ಮೈಸೂರು ಜಿಲ್ಲೆಯಲ್ಲಿ ನೋಂದಣಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಸಾರ್ವಜನಿಕರು, ವಕೀಲರು, ಕರ್ನಾಟಕ ಒನ್, ಗ್ರಾಮ ಒನ್, ಬಾಪೂಜಿ ಸೇವಾ ಕೇಂದ್ರ ಸಿಬ್ಬಂದಿಗೆ ಪೇಪರ್‌ಲೆಸ್ ನೋಂದಣಿ ಕುರಿತು ರಾಜ್ಯ ಸರಕಾರದ ಸೂಚನೆಯಂತೆ ನಾನಾ ಹಂತಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಅರ್ಜಿ ಹಾಕುವ ವಿಧಾನ, ಸಹಿ ಹಾಕುವ ಬಗೆ, ದಸ್ತಾವೇಜು ಡ್ರಾಫ್ಟ್ ಅನ್ನು ಆನ್‌ಲೈನ್‌ನಲ್ಲಿ ಸಿದ್ಧಪಡಿಸುವ ಬಗ್ಗೆ ತರಬೇತಿ ನೀಡಲಾಗುತ್ತಿದೆ.

## ನೇಮಕಾತಿ ಹಿಂಪಡೆಯುವಂತೆ ಒತ್ತಾಯಿಸಿ ಪ್ರತಿಭಟನೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ತಿ.ನರಸೀಪುರ**

ಒಳಮೀಸಲಾತಿ ಇಲ್ಲದೇ ನೇಮಕಾತಿ ಮಾಡಿರುವ ಆದೇಶವನ್ನು ತಕ್ಷಣ ಹಿಂಪಡೆಯುವಂತೆ ಒತ್ತಾಯಿಸಿ ತಾಲ್ಲೂಕು ಮಾದಿಗ ಸಂಘಟನೆಗಳ ಒಕ್ಕೂಟದ ಸದಸ್ಯರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು. ಪಟ್ಟಣದ ಭೈರಾಪುರ ಗ್ರಾಮದ ಬಾಬು ಜಗಜೀವನರಾಂ ಪ್ರತಿಮೆ ಮುಂಭಾಗದಲ್ಲಿ ಸೇರಿದ್ದ ಮಾದಿಗ ಸಮುದಾಯದ ಮುಖಂಡರು ಮೆರವಣಿಗೆ ಮೂಲಕ ತಾಲ್ಲೂಕು ಆಡಳಿತ ಕಚೇರಿಗೆ ತೆರಳಿ ಧರಣಿ ನಡೆಸಿದರು. ತಾಲ್ಲೂಕು ಮಾದರ ಮಹಾಸಭಾ ಅಧ್ಯಕ್ಷ ಮೂಗೂರು ಬಲ್ಲಯ್ಯ ಮಾತನಾಡಿ, ಸಾಮಾಜಿಕ ನ್ಯಾಯದ ಪರಿಶಿಷ್ಟ ಜಾತಿ ಒಳಮೀಸಲಾತಿಯಂತೆ ಹುದ್ದೆಗಳನ್ನು ಭರ್ತಿ ಮಾಡಲೆಂದೇ 2024ರ ಅ.28ರಿಂದ ತಡೆ ಹಿಡಿಯಲಾದ ಹುದ್ದೆಗಳಿಗೆ ಒಳ ಮೀಸಲಾತಿ ತಪ್ಪಿಸಿ, ನಮ್ಮ ಸಮುದಾಯದ ಕೆ.ಎಚ್. ಮುನಿಯಪ್ಪ ಅವರ ತೀವ್ರ ವಿರೋಧದ ನಡುವೆಯೇ ರಜೆ ಇದ್ದ ವೇಳೆಯೇ ಮೀಸಲಾತಿ ತಪ್ಪಿಸಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಫೆ.27ರಂದು ಹೊರಡಿಸಿರುವ ಆದೇಶ ಕೂಡಲೇ ಹಿಂಪಡೆಯಬೇಕು ಎಂದು ಅವರು ಆಗ್ರಹಿಸಿದರು. 'ಪರಿಶಿಷ್ಟ ಜಾತಿ, ಸಮುದಾಯಗಳ ಹಿತ ಕಾಪಾಡುವುದಾಗಿ ಬಲಗೈ ಸಮಾಜದ ಪ್ರತಿನಿಧಿಯಂತೆ ವರ್ತಿಸುತ್ತಿರುವ ಸಂವಿಧಾನ ವಿರೋಧಿ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಎಚ್.ಸಿ. ಮಹಾದೇವಪ್ಪ ಅವರ ರಾಜೀನಾಮೆಗೆ ಮತ್ತು ಸಮಾಜ ಕಲ್ಯಾಣ ಇಲಾಖೆಯ, ಡಿಪಿಎಆರ್ ಇಲಾಖೆಯ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕು' ಎಂದು ಒತ್ತಾಯಿಸಿದರು.

## ಗುಂಡ್ಲುಪೇಟೆಗೆ ಸಂಚಾರ ಪೊಲೀಸ್ ಠಾಣೆ ಭಾಗ್ಯ

### 2026 – 27ರ ಬಜೆಟ್: ಕೋರಿಕೆಗೆ ಸ್ಪಂದಿಸಿದ ಸರ್ಕಾರಕ್ಕೆ ಧನ್ಯವಾದ ಅರ್ಪಿಸಿದ ಶಾಸಕ ಗಣೇಶ್

• **ಉದಯವಾಹಿನಿ, ಗುಂಡ್ಲುಪೇಟೆ**

ನೂತನ ಸಂಚಾರ ಪೊಲೀಸ್ ಠಾಣಾ ಮಂಜೂರಾತಿಗೆ ಅಂದು ನೀಡಿದ್ದ ಕೋರಿಕೆಗೆ ಸ್ಪಂದನೆ ಸಿಕ್ಕ ಹಿನ್ನೆಲೆ 2026 – 27 ನೇ ಬಜೆಟ್‌ನಲ್ಲಿ ಗುಂಡ್ಲುಪೇಟೆಯಲ್ಲಿ ಹೊಸದಾಗಿ ಟ್ರಾಫಿಕ್ ಸ್ಟೇಷನ್ ತೆರೆಯುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿರುವುದು ಸ್ವಾಗತಾರ್ಹವಾಗಿದೆ ಎಂದ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಬಹುದಿನಗಳ ಬೇಡಿಕೆಗೆ ಒತ್ತು ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವ ಸಂಪುಟದ ಎಲ್ಲರಿಗೂ ಧನ್ಯವಾದಗಳನ್ನ ತಿಳಿಸಿದ್ದಾರೆ. ಗುಂಡ್ಲುಪೇಟೆ ತಮಿಳುನಾಡು, ಕೇರಳ ಅಂತರಾಜ್ಯ ಗಡಿಗಳನ್ನ ಹಂಚಿಕೊಂಡಿದ್ದು ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳಲ್ಲಿ ಅಪಘಾತ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದ ಹಿನ್ನೆಲೆ ಪಟ್ಟಣ ಪೊಲೀಸರಿಗೆ ಒತ್ತಡ ಜಾಸ್ತಿಯಾಗಿತ್ತು, ಕಾನೂನು ಸುವ್ಯವಸ್ಥೆ, ಸುಗಮ ಸಂಚಾರದ ಜವಾಬ್ದಾರಿ, ಅಪಘಾತ ತಡೆಗಟ್ಟುವಿಕೆ ನಿಭಾಯಿಸಲು ಉಪದ್ರವಾಗಿದ್ದರ ನಡುವೆಯೇ ಸಕಾಲಕ್ಕೆ ಅತ್ಯವಶ್ಯಕವಾಗಿದ್ದ ಸಂಚಾರ ಪೊಲೀಸ್ ಠಾಣೆಗೆ ಅನುಮೋದನೆ ದೊರೆತಿರುವುದು ಸಾರ್ವಜನಿಕರ ಹಿತದೃಷ್ಟಿಯಲ್ಲಿ ಒಳ್ಳೆಯ ಕಾರ್ಯವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಉದಯವಾಹಿನಿ ಚಿತ್ರ




**ಬಹುದಿನಗಳ ಬೇಡಿಕೆಗೆ ಒತ್ತು**

**ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ 57 ಮಂದಿ :** 189 ಹಳ್ಳಿಗಳಿರುವ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪಿಐ, ಪಿಎಸ್ಐ ಸೇರಿದಂತೆ ಎಎಸ್ ಐ 06, ಮುಖ್ಯಪೇದೆ 16 ಒಳಗೊಂಡಂತೆ 33 ಮಂದಿ ಪೊಲೀಸ್ ಪೇದೆಗಳು ಒತ್ತಡದಲ್ಲಿ ಕರ್ತವ್ಯ ನಿರ್ವಹಿಸಬೇಕಿತ್ತು, ತಮಿಳುನಾಡು, ಕೇರಳ ಮಾರ್ಗಗಳಲ್ಲಿ ಸಂಭವಿಸುತ್ತಿದ್ದ ಅಪಘಾತ ಪ್ರಕರಣ, ಕಾನೂನು ಸುವ್ಯವಸ್ಥೆ ಕಾಪಾಡಲು ಲಭ್ಯವಿದ್ದಂತಹ ಅಧಿಕಾರಿಗಳು ಸಿಬ್ಬಂದಿಗಳಿಗೆ ಹೊರೆಯಾಗಿತ್ತು ಆದರೆ ಸರ್ಕಾರ ಸಂಚಾರ ಪೊಲೀಸ್ ಠಾಣೆಗೆ ಅಸ್ತು ಎಂದಿರುವ ಹಿನ್ನೆಲೆ ವಾಹನ ದಟ್ಟಣೆ, ಅಪಘಾತ ಪ್ರಕರಣ ನಿರ್ವಹಣೆ ಜವಾಬ್ದಾರಿಯಿಂದ ಹೊರಬಂದು ಕಾನೂನು ಸುವ್ಯವಸ್ಥೆ ಕಡೆಗೆ ಹೆಚ್ಚಾಗಿ ಕೇಂದ್ರೀಕರಿಸಲು ಸಹಕಾರಿಯಾಗಿದೆ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಅಭಿಪ್ರಾಯ ಹಂಚಿಕೊಂಡಿದ್ದಾರೆ.

> **ಪಟ್ಟಣದಲ್ಲಿ ಸಂಚಾರ ಪೊಲೀಸ್ ಠಾಣೆಗೆ ಬಜೆಟ್‌ನಲ್ಲಿ ಅನುಮೋದನೆ ದೊರೆತಿರುವುದು ಸ್ವಾಗತಾರ್ಹ ಇದರಿಂದ ವಾಹನ ದಟ್ಟಣೆ, ಅಪಘಾತ ಪ್ರಕರಣಗಳ ನಿರ್ವಹಣೆ ಮಾಡಲು ಕಾನೂನು ಸುವ್ಯವಸ್ಥೆ ಪೊಲೀಸರ ಮೇಲಿದ್ದ ಒತ್ತಡಕ್ಕೆ ವಿರಾಮ ಹೇಳಿದಂತಾಗಿದೆ ಆದರೆ ಸಂಚಾರ ಪೊಲೀಸ್ ಠಾಣೆಗೆ ಅನುಮೋದನೆ ನೀಡಿದಂತೆ ಅಧಿಕಾರಿ ಮತ್ತು ಸಿಬ್ಬಂದಿಗಳನ್ನ ನೇಮಿಸುವ ಕೆಲಸವನ್ನು ಸಹ ಸರ್ಕಾರ ತುರ್ತಾಗಿ ಮಾಡಬೇಕಿದೆ, ಪಟ್ಟಣದಲ್ಲಿನ ವಾಹನ ದಟ್ಟಣೆ ನಿರ್ವಹಣೆ, ರಸ್ತೆ ಸುಗಮ ಸಂಚಾರ ಕರ್ತವ್ಯಕ್ಕೆ ಪ್ರತ್ಯೇಕವಾಗಿ ಹೆಚ್ಚುವರಿ ಸಿಬ್ಬಂದಿಗಳನ್ನ ನೇಮಿಸಲಿ.**
> –ಸಿ.ಎಸ್.ನಿರಂಜನ್ ಕುಮಾರ್
> ಮಾಜಿ ಶಾಸಕ, ಗುಂಡ್ಲುಪೇಟೆ

## ಮಿನಿ ನ್ಯೂಸ್

### ಗ್ರಾಮ ಲೆಕ್ಕಾಧಿಕಾರಿಗಳ ವರ್ಗಾವಣೆಗೆ ಮನವಿ

• **ಉದಯವಾಹಿನಿ, ಹಾರೋಹಳ್ಳಿ**

ತಾಲ್ಲೂಕಿನ ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ಮಿತಿ ಮೀರಿದ್ದು, 10 ರಿಂದ 15 ವರ್ಷ ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿರುವ ಗ್ರಾಮ ಲೆಕ್ಕಾಧಿಕಾರಿಗಳನ್ನು ವರ್ಗಾವಣೆ ಮಾಡುವಂತೆ ಎಂದು ರೈತ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಯನ್ನು ಆಗ್ರಹಿಸಿದ್ದಾರೆ. ತಾಲ್ಲೂಕು ಆಡಳಿತದ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ ರೈತ ಮುಖಂಡರು, ಗ್ರಾಮ ಲೆಕ್ಕಾಧಿಕಾರಿಗಳನ್ನು ತಾಲ್ಲೂಕಿನಿಂದ ಬೇರೆಡೆ ವರ್ಗಾವಣೆ ಮಾಡುವಂತೆ ಆಗ್ರಹಿಸಿದರು. ಗಬ್ಬಾಡಿ ಸಮೀಪದ 40 ವರ್ಷದ ಬಳಿಕ ಜಾಗವೊಂದನ್ನು ನಕಲಿ ದಾಖಲೆ ಬಳಸಿ ಪೋಡಿ ಮಾಡಿಕೊಟ್ಟಿದ್ದಾರೆ. ಇದರ ತನಿಖೆ ಆಗಬೇಕು. ಸರ್ಕಾರಿ ಜಮೀನನ್ನು ಪರಭಾರೆ ವಿರುದ್ಧ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು. ಜಿಲ್ಲಾಡಳಿತ ಕೂಡಲೇ ಹಾರೋಹಳ್ಳಿ ತಾಲ್ಲೂಕು ವ್ಯಾಪ್ತಿಯ ಗ್ರಾಮ ಲೆಕ್ಕಾಧಿಕಾರಿಗಳನ್ನು ವರ್ಗಾವಣೆ ಮಾಡದಿದ್ದರೆ ಬಾರುಕೋಲು ಚಳವಳಿ ನಡೆಸಲಾಗುವುದು ಎಂದು ರೈತ ಸಂಘದ ಪದಾಧಿಕಾರಿಗಳು ಎಚ್ಚರಿಸಿದರು.

### ನರಸಿಂಹರಾಜ ಕ್ಷೇತ್ರ 'ಗ್ಯಾರಂಟಿ'ಗೆ ನಾಮನಿರ್ದೇಶನ

• **ಉದಯವಾಹಿನಿ, ಮೈಸೂರು**

ಇಲ್ಲಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಚಿಸಲಾಗಿದ್ದು. ಅಧ್ಯಕ್ಷರನ್ನಾಗಿ ಗಣೇಶನಗರ 'ಎ' ಬ್ಲಾಕ್‌ನ ಎಂ.ಎನ್. ಮಹದೇವ ಅವರನ್ನು ನಾಮನಿರ್ದೇಶನ ಮಾಡಲಾಗಿದೆ. ಸದಸ್ಯರಾಗಿ ವಿದ್ಯಾನಗರದ ಎಚ್.ಶಶಿಕುಮಾರ್, ಎನ್.ಆರ್.ಮೊಹಲ್ಲಾದ ಸೇಂಟ್ ಮೇರೀಸ್ ರಸ್ತೆಯ ಎನ್.ಸುರೇಂದ್ರ, ಗಾಂಧಿನಗರ 11ನೇ ಕ್ರಾಸ್‌ನ ರಾಕೇಶ್‌ಕುಮಾರ್, ರಾಜೀವನಗರ 2ನೇ ಹಂತದ ಅಹ್ಮದ್ ಸಲೀಂ, ರಾಘವೇಂದ್ರನಗರ 13ನೇ ಕ್ರಾಸ್‌ನ ವಿಜಯಲಕ್ಷ್ಮಿಸಿ.. ಅಜೀಜ್‌ಸೇಠ್ ನಗರದ ಎಸ್.ರೇಷ್ಮೆ, ಸಾತಗಳ್ಳಿ ಬಡಾವಣೆ 2ನೇ ಕ್ರಾಸ್‌ನ ಪದ್ಮಾವತಿ ಜಿ., ಸತ್ಯನಗರ 1ನೇ ಕ್ರಾಸ್‌ನ ಸೈಯದ್ ಸದ್ದಾಂ ಅವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ. ವಲಯ ಕಚೇರಿ 7ರ ಕಂದಾಯಾಧಿಕಾರಿ ಎನ್.ಲೋಕೇಶ್ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ. 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ.

### ಬೆಂಕಿ ತಡೆಗೆ ಡ್ರೋಣ್ ಕಣ್ಗಾವಲು

• **ಉದಯವಾಹಿನಿ, ಶ್ರೀರಂಗಪಟ್ಟಣ**

ತಾಲ್ಲೂಕಿನ ಕೆ.ಶೆಟ್ಟಹಳ್ಳಿ ಮೀಸಲು ಅರಣ್ಯಕ್ಕೆ ಬೆಂಕಿ ಬೀಳುವುದನ್ನು ತಡೆಗಟ್ಟುವ ಉದ್ದೇಶದಿಂದ ಪೊಲೀಸ್ ಮತ್ತು ಅರಣ್ಯ ಇಲಾಖೆಗಳು ಜಂಟಿಯಾಗಿ ದ್ರೋಣ್ ಕಣ್ಗಾವಲು ಆರಂಭಿಸಿವೆ. ತಾಲ್ಲೂಕಿನ ಕರಿಘಟ್ಟ, ಚೆನ್ನಾಯಕನಹಳ್ಳಿ, ಅಲ್ಲಾಪಟ್ಟಣ, ಗರುಡನ ಉಕ್ಕಡ, ಶ್ರೀನಿವಾಸ ಅಗ್ರಹಾರ, ಟಿ.ಎಂ. ಹೊಸೂರು ಗೇಟ್, ಸುಮುತ್ತಲಿನ ಪ್ರದೇಶಗಳಲ್ಲಿ ಡೋಣ್ ಹಾರಾಡಲಿದೆ. ಪೊಲೀಸ್ ಇಲಾಖೆಯ ವೈರ್‌ಲೆಸ್ ವಿಭಾಗದ ಸಿಬ್ಬಂದಿ ಒಂದು ವಾರ ಕಾಲ ಪ್ರೋಣ್ ಮೂಲಕ ಜನರ ಚಲನ ವಲನದ ಬಗ್ಗೆ ನಿಗಾ ವಹಿಸಲಿದ್ದಾರೆ. ಅರಣ್ಯದ ಒಳಗೆ ಮತ್ತು ಅಂಚಿನಲ್ಲಿ ಓಡಾಡುವವರ ಮಾಹಿತಿ ಸಂಗ್ರಹಿಸಲಿದ್ದಾರೆ.

ಉದಯವಾಹಿನಿ ಚಿತ್ರ



ಕರಿಘಟ್ಟ ಮೀಸಲು ಅರಣ್ಯಕ್ಕೆ ಪ್ರತಿ ವರ್ಷ ಕಿಡಿಗೇಡಿಗಳು ಬೆಂಕಿ ಹಚ್ಚುತ್ತಿದ್ದರು. ಇದರಿಂದ ಸಸ್ಯ ಸಂಪತ್ತು ಹಾಗೂ ಪ್ರಾಣಿ, ಪಕ್ಷಿಗಳಿಗೆ ಹಾನಿಯಾಗುತ್ತಿತ್ತು. ಕರಿಘಟ್ಟದ ವೆಂಕಟರಮಣಸ್ವಾಮಿ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಬೆಂಕಿ ಹಚ್ಚಲಾಗುತ್ತಿತ್ತು. ಅರಣ್ಯಕ್ಕೆ ಬೆಂಕಿ ಹಚ್ಚಿದರೆ ಮಕ್ಕಳಾಗುತ್ತವೆ ಎಂಬ ಮೂಢನಂಬಿಕೆಯೂ ಈ ಭಾಗದಲ್ಲಿ ಪ್ರಚಲಿದಲ್ಲಿದೆ. ಹಾಗಾಗಿ ಬೆಂಕಿ ಬೀಳುವುದನ್ನು ತಡೆಯಲು ಡೋಣ್ ಮೂಲಕ ಹದ್ದಿನ ಕಣ್ಣಿಡಲಾಗಿದೆ ಎಂದು ಶ್ರೀರಂಗಪಟ್ಟಣ ಪೊಲೀಸ್ ಠಾಣೆ ಸಿಪಿಐ ಬಿ.ಜಿ. ಕುಮಾರ್ ತಿಳಿಸಿದ್ದಾರೆ. ಕರಿಘಟ್ಟ ಅರಣ್ಯದಲ್ಲಿ ಅಪರೂಪದ ಸಸ್ಯ ಹಾಗೂ ಪ್ರಾಣಿ ಸಂಕುಲವಿದೆ. ಆದರೆ ಬೇಸಿಗೆ ಕಾಲದಲ್ಲಿ ಪ್ರತಿ ವರ್ಷ ಬೆಂಕಿ ಬಿದ್ದು ಅರಣ್ಯ ಸುಟ್ಟು ಹೋಗುತ್ತಿತ್ತು. ಅದನ್ನು ತಡೆಯಲು ಪೊಲೀಸ್ ಇಲಾಖೆಯ ಸಹಯೋಗದಲ್ಲಿ ದ್ರೋಣ್ ಹಾರಾಟದ ಮೂಲಕ ಕಟ್ಟೆಚ್ಚರ ವಹಿಸಲಾಗಿದೆ ಎಂದು ವಲಯ ಅರಣ್ಯಾಧಿಕಾರಿ ಶೈಲಜಾ ಹೇಳಿದ್ದಾರೆ.

## ನೀರಿನ ಬವಣೆ ನಿವಾರಣೆಗೆ ಕ್ರಮ ಕೈಗೊಳ್ಳಿ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಿಂದ ಬಾಗೇಪಲ್ಲಿ ತಾಲ್ಲೂಕಿನ ಆಂಧ್ರಪ್ರದೇಶದ ಗಡಿವರೆಗಿನ ರಾಷ್ಟ್ರೀಯ ಹೆದ್ದಾರಿ 44 ಅನ್ನು ದಶಪಥ ರಸ್ತೆಯನ್ನಾಗಿ 2,500 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದು ಚಿಕ್ಕಬಳ್ಳಾಪುರ ಸಂಸದ ಡಾ.ಕೆ. ಸುಧಾಕರ್ ತಿಳಿಸಿದರು. ಜಿಲ್ಲಾ ಪಂಚಾಯಿತಿಯ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ನಡೆದ 'ಜಿಲ್ಲಾ ಅಭಿವೃದ್ಧಿ ಸಮನ್ವಯ, ಉಸ್ತುವಾರಿ ಸಮಿತಿ' (ದಿಶಾ) ಸಭೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿ, ಸುದ್ದಿಗಾರರೊಂದಿಗೆ ಮಾತನಾಡಿದರು. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 44 ಅನ್ನು ದಶಪಥ ರಸ್ತೆಯನ್ನಾಗಿ ಅಭಿವೃದ್ಧಿ ಸಂಬಂಧ ಪ್ರಕ್ರಿಯೆ ಆರಂಭವಾಗಿದೆ. ಈಗಿರುವ ರಸ್ತೆ ಜೊತೆಗೆ 6 ಪಥದ ರಸ್ತೆ ನಿರ್ಮಿಸಿ, ದಶಪಥ ರಸ್ತೆ ಮಾಡಲಾಗುವುದು. ಈ ನಿಟ್ಟಿನಲ್ಲಿ ಭೂಸ್ವಾಧೀನ ಪ್ರಕ್ರಿಯೆಯೂ ಪೂರ್ಣಗೊಂಡಿದೆ. ಮುಂದಿನ ಮೂರು ತಿಂಗಳಿನಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಭರವಸೆ ನೀಡಿದರು. ಕೃಷಿ ಬೆಳೆಗಳಿಗೆ ಕೇಂದ್ರ ಸರ್ಕಾರ

ಉದಯವಾಹಿನಿ ಚಿತ್ರ



ದುಪ್ಪಟ್ಟು ಬೆಂಬಲ ಬೆಲೆ ನಿಗದಿಪಡಿಸಿದೆ ಜಿಲ್ಲೆಯಲ್ಲಿ ರಾಗಿ ಬೆಳೆಯುವ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಪ್ರತಿ ಕ್ವಿಂಟಲ್ ರಾಗಿಗೆ 4,886 ದರ ನಿಗದಿಪಡಿಸಲಾಗಿದೆ. ಈ ದರವು ಮಾರುಕಟ್ಟೆ ದರಕ್ಕಿಂತಲೂ ಹೆಚ್ಚು. ಜಿಲ್ಲೆಯಲ್ಲಿ ರಾಗಿ ಖರೀದಿ ಪ್ರಕ್ರಿಯೆ ಚಾಲನೆಯಲ್ಲಿದೆ. ಜಿಲ್ಲೆ ರೈತರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

**ಹಗಲು ಹೊತ್ತಿನಲ್ಲೂ ವಿದ್ಯುತ್:** ಕುಸುಮ್ ಸಿ ಯೋಜನೆಯಡಿ ಜಿಲ್ಲೆಯಲ್ಲಿ 300 ಮೆಗಾ ವ್ಯಾಟ್ ಸೌರ ವಿದ್ಯುತ್ ಉತ್ಪಾದನೆ ಮಾಡಿ, ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೆ ಕಡಿಮೆ ಬೆಲೆಗೆ ನೀಡಲಾಗುತ್ತದೆ. ಈ ಯೋಜನೆಯಡಿ ರೈತರಿಗೆ ಉಚಿತವಾಗಿ ಹಗಲು ಹೊತ್ತಿನಲ್ಲೂ ಸಾಕಷ್ಟು ತೃಪ್ತಿದಾಯಕವಾಗಿ ವಿದ್ಯುತ್ ನೀಡುವ ಯೋಜನೆ ಇದು. ಇಂತಹ ಯೋಜನೆಗಳು 2047ಕ್ಕೆ ಭಾರತವನ್ನು ವಿಶ್ವದ ಸಂಪದ್ಭರಿತ ದೇಶವಾಗಿ ಹೊರಹೊಮ್ಮಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಆದಿ ಆದರ್ಶ ಗ್ರಾಮ ಯೋಜನೆಯಡಿ ಈ ಹಿಂದೆ 18 ಗ್ರಾಮಗಳನ್ನು ದತ್ತು ತೆಗೆದುಕೊಳ್ಳಲಾಗಿತ್ತು. ಈ ಸಾಲಿನಲ್ಲಿ 30 ಗ್ರಾಮಗಳನ್ನು ತೆಗೆದುಕೊಂಡು ಆ ಗ್ರಾಮಗಳ ಸಂಪೂರ್ಣ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಗೆ ಅನುದಾನದ ಮಿತಿ ಇರುವುದಿಲ್ಲ. ಸದರಿ ಗ್ರಾಮದ ಗ್ರಾಮ ಸಭೆಯ ಬೇಡಿಕೆ ಅನ್ವಯ ಗ್ರಾಮದ ಸಂಪೂರ್ಣ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

**2 ತಿಂಗಳಲ್ಲಿ ಜಿಲ್ಲಾ ಆಯುಷ್ ಆಸ್ಪತ್ರೆ:** ಜಿಲ್ಲಾ ಕೇಂದ್ರದಲ್ಲಿ ನಿರ್ಮಾಣವಾಗುತ್ತಿರುವ ಜಿಲ್ಲಾ ಆಯುಷ್ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಯು ಅಂತಿಮ ಹಂತದಲ್ಲಿದೆ. ಮುಂದಿನ 2 ತಿಂಗಳಿನಲ್ಲಿ ಲೋಕಾರ್ಪಣೆಯಾಗಲಿದೆ. ಅಲ್ಲದೆ, ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆಯಡಿ 65 ಲಕ್ಷ ವೆಚ್ಚದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣವಾಗಲಿದೆ ಎಂದರು.

## ಆಧುನಿಕ ಕುರಿ-ಮೇಕೆ ಮಾರಾಟ ಕೇಂದ್ರ ಸ್ಥಾಪನೆ

• **ಉದಯವಾಹಿನಿ, ಚಿಕ್ಕನಾಯಕನಹಳ್ಳಿ**

ತಾಲ್ಲೂಕಿನ ಕುರಿಗಾಹಿಗಳ ಆರ್ಥಿಕ ಸಬಲೀಕರಣ, ದಲ್ಲಾಳಿಗಳ ಶೋಷಣೆ ತಪ್ಪಿಸಲು ಸುಸಜ್ಜಿತ ಆಧುನಿಕ ಕುರಿ ಮತ್ತು ಮೇಕೆ ಮಾರಾಟ ಕೇಂದ್ರವನ್ನು ಶೀಘ್ರ ನಿರ್ಮಿಸಲಾಗುವುದು ಎಂದು ಶಾಸಕ ಸಿ.ಬಿ. ಸುರೇಶ್‌ಬಾಬು ಭರವಸೆ ನೀಡಿದರು. ಪಟ್ಟಣದ ಉಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ಮಾರುಕಟ್ಟೆ ನಿರ್ಮಾಣಕ್ಕೆ ಉದ್ದೇಶಿಸಿರುವ ಸ್ಥಳವನ್ನು ವೀಕ್ಷಿಸಿ ಮಾತನಾಡಿದರು. ತಾಲ್ಲೂಕಿನಲ್ಲಿ ಕೃಷಿಯೊಂದಿಗೆ ಕುರಿ ಸಾಕಾಣಿಕೆ ಪ್ರಮುಖ ಉಪಕಸುಬು. ಆದರೆ ಕುರಿಗಾಹಿಗಳಿಗೆ ತಮ್ಮ ಜಾನುವಾರುಗಳನ್ನು ಮಾರಾಟ ಮಾಡಲು ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದು ಗಮನಕ್ಕೆ ಬಂದಿದೆ. ಈ ಕೊರತೆ ನೀಗಿಸಲು ಗಣಿಬಾಧಿತ ಪ್ರದೇಶಾಭಿವೃದ್ಧಿ ಯೋಜನೆಯಡಿ 1.66 ಕೋಟಿ ವೆಚ್ಚದಲ್ಲಿ ಎರಡು ಎಕರೆ ವಿಸ್ತೀರ್ಣದಲ್ಲಿ ಅತ್ಯಾಧುನಿಕ ಮಾರುಕಟ್ಟೆ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು.

ಈ ಮಾರುಕಟ್ಟೆ ಕೇವಲ ಮಾರಾಟ ಕೇಂದ್ರವಾಗಿರದೆ, ಡಿಜಿಟಲ್ ತೂಕದ ಯಂತ್ರಗಳು, ಪಾರದರ್ಶಕ ಬೆಲೆ ನಿಗದಿ ವ್ಯವಸ್ಥೆ ಹೊಂದಿದೆ. ಇದರಿಂದ ಮಧ್ಯವರ್ತಿಗಳ ಹಾವಳಿ ತಪ್ಪಲಿದ್ದು, ರೈತರಿಗೆ ನ್ಯಾಯಯುತ ಬೆಲೆ ಸಿಗಲಿದೆ. ಕುರಿಗಾಹಿಗಳಿಗೆ ಸಾಲ, ವಿಮೆ, ಜಾನುವಾರು ಹಣಕಾಸು ಸೌಲಭ್ಯಗಳು ಒಂದೇ ಸೂರಿನಡಿ ಸಿಗುವಂತೆ ಮಾಡುವುದು ಹಾಗೂ ವೈಜ್ಞಾನಿಕ ಸಾಕಾಣಿಕೆಗೆ ಉತ್ತೇಜನ ನೀಡುವುದು ಗುರಿಯಾಗಿದೆ ಎಂದು ಹೇಳಿದರು.

ಉದಯವಾಹಿನಿ ಚಿತ್ರ



> **ತಾಲ್ಲೂಕಿನಲ್ಲಿ ಕುರಿಗಾಹಿಗಳ ಸಂಖ್ಯೆ ಹೆಚ್ಚಿದ್ದರೂ, ಮಾರುಕಟ್ಟೆ ಕೊರತೆಯಿಂದಾಗಿ ಮಧ್ಯವರ್ತಿಗಳೇ ಲಾಭ ಮಾಡಿಕೊಳ್ಳುತ್ತಿದ್ದರು. ಈ ಸುಸಜ್ಜಿತ ಮಾರುಕಟ್ಟೆ ಸ್ಥಾಪನೆಯಿಂದ ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ವೈಜ್ಞಾನಿಕ ಮಾರುಕಟ್ಟೆ ಸಮಯ ಮತ್ತು ರೋಗ ನಿಯಂತ್ರಣದಂತಹ ಕ್ರಮಗಳು ಕುರಿಗಾಹಿಗಳಿಗೆ ದೊಡ್ಡ ವರವಾಗಲಿವೆ.**
> – ಕಾಂತರಾಜು ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ

## ಹರಾಜು ಪ್ರಕ್ರಿಯೆಯಲ್ಲಿ ದೋಷ: ಆರೋಪ

• **ಉದಯವಾಹಿನಿ, ಕೆಜಿಎಫ್**

ಸಾರ್ವಜನಿಕರ ಹರಾಜಿನಲ್ಲಿ ಹಳೇ ವಾಹನಗಳನ್ನು ಖರೀದಿಗೆ ಬಂದಿದ್ದ ಬಿಡ್‌ದಾರರು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಮುಂಭಾಗ ಸಾಂಕೇತಿಕ ಪ್ರತಿಭಟನೆ ನಡೆಸಿದರು. ಸಾರಿಗೆ ಇಲಾಖೆ ವಶದಲ್ಲಿದ್ದ ಹಳೆಯ ವಾಹನಗಳನ್ನು ಮಾರ್ಚ್ 5ರಂದು ಹರಾಜು ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದರು. ಅದಕ್ಕೆ ಅನುಗುಣವಾಗಿ ಸರ್ಕಾರ ನಿಗದಿ ಮಾಡಿದ್ದ 25 ಸಾವಿರ ಡಿಡಿ ತೆಗೆದುಕೊಂಡು ಹರಾಜು ಪ್ರಕ್ರಿಯೆಗೆ ಕರ್ನಾಟಕದ ವಿವಿಧ ಭಾಗಗಳಿಂದ ಬಿಡ್‌ದಾರರು ಬಂದಿದ್ದರು. ಆದರೆ, ಕಚೇರಿ ಸಿಬ್ಬಂದಿ ಮಾರ್ಚ್ 4ಕ್ಕೆ ಹರಾಜು ಪ್ರಕ್ರಿಯೆ ನಡೆದಿದೆ. ಅದಕ್ಕೆ ಅನುಗುಣವಾಗಿ ಅಧಿಕೃತ ಪ್ರಚಾರ ಕೂಡ ನಡೆಸಿದ್ದೆವು ಎಂದು ತಿಳಿಸಿದ್ದಾರೆ. ಬಿಡ್‌ದಾರರ ದಾರಿ ತಪ್ಪಿಸಿ, ತಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಡಲು ಅಧಿಕಾರಿಗಳು ಸಂಚು ರೂಪಿಸಿದ್ದಾರೆಂದು ಬಿಡ್‌ದಾರರು ದೂರಿದರು.

ಹರಾಜು ಹಾಕಲು ಸಿದ್ಧಪಡಿಸಿದ್ದ ವಾಹನಗಳನ್ನು ಅಧಿಕ ಮೌಲ್ಯ ಕಟ್ಟಿದ್ದಾರೆ. ಗುಜರಿ ವಾಹನಗಳಿಗೆ ಜಿಎಸ್‌ಟಿ, ದಂಡ ಮುಂತಾದವುಗಳನ್ನು ವಿಧಿಸಿ, ಖರೀದಿಸಲು ಸಾಧ್ಯವಿಲ್ಲದಷ್ಟು ಬೆಲೆ ನಮೂದಿಸಿದ್ದಾರೆ. ಹರಾಜು ಪ್ರಕ್ರಿಯೆಯಲ್ಲಿ ಹರಾಜು ಮಾಡುವ ವಾಹನಗಳ ಕನಿಷ್ಠ ಮೌಲ್ಯದ ಬಗ್ಗೆ ತಿಳಿಸಿದ್ದರೆ, ನೂರಾರು ಕಿ.ಮೀ ಪ್ರಯಾಣ ಮಾಡಿ ಇಲ್ಲಿಗೆ ಬರುವ ಅವಶ್ಯಕತೆ ಇರಲಿಲ್ಲ ಎಂದು ಬಿಡ್‌ದಾರರು ಆಕ್ರೋಶ ವ್ಯಕ್ತಪಡಿಸಿದರು.

ಹರಾಜು ಹಾಕಿರುವ ವಾಹನಗಳ ಮೂಲ ಮಾಲೀಕರು ಕಟ್ಟಬೇಕಾಗಿದ್ದ ಬಾಕಿ ಹಣವನ್ನು ಕೂಡ ಗುಜರಿ ವಾಹನಕ್ಕೆ ಸೇರಿಸಲಾಗಿದೆ. 40 ಸಾವಿರ ಬೆಲೆ ಬಾಳುವ ವಾಹನಕ್ಕೆ 6 ಲಕ್ಷ ನಿಗದಿ ಮಾಡಲಾಗಿದೆ. 5 ಸಾವಿರ ಬೆಲೆ ಬಾಳದ ಆಟೋಗೆ 21 ಸಾವಿರ ನಿಗದಿ ಮಾಡಲಾಗಿದೆ. ಇಷ್ಟೊಂದು ಅವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡಲಾಗಿರುವುದು ಖಂಡನೀಯ. ಆರ್‌ಟಿಒ ಕಚೇರಿಗಳಲ್ಲಿ ಹರಾಜು ಮಾಡುವಾಗ ಅಡ್ಜಸ್ಟ್‌ಮೆಂಟ್ ಮಾಡುವ ಪ್ರಕ್ರಿಯೆ ಬಹಳಷ್ಟು ಕಡೆ ನಡೆಯುತ್ತದೆ. ಇಲ್ಲಿಯೂ ಕೂಡ ಅದೇ ರೀತಿ ನಡೆದಿದೆ. ಆರ್‌ಟಿಐ ಮೂಲಕ ವಿವರ ಪಡೆದು ದೂರು ನೀಡಲಾಗುವುದು' ಎಂದು ಬಿಡ್‌ದಾರರೊಬ್ಬರು ಹೇಳಿದರು.

## 5 ಶತಮಾನದ ಕೆರೆಯಲ್ಲಿ ಕಸದ ರಾಶಿ

• **ಉದಯವಾಹಿನಿ, ಶಿಡ್ಲಘಟ್ಟ**

ಐದು ಶತಮಾನಗಳ ಇತಿಹಾಸ ಹೊಂದಿರುವ ಸುಪ್ರಸಿದ್ಧ ಗೌಡನ ಕೆರೆಯಲ್ಲಿ ಇದೀಗ ಜಾಲಿಗಿಡಗಳು ಹೆಮ್ಮರವಾಗಿ ಬೆಳೆದು ನಿಂತಿವೆ. ಇದರಿಂದಾಗಿ ಕೆರೆಯ ಒಳಗೆ ಮನುಷ್ಯರು ಇರಲಿ, ದನ, ಕರುಗಳು ಹೋಗಲು ಸಾಧ್ಯವಾಗದಂಥ ದುಸ್ಥಿತಿ ನಿರ್ಮಾಣವಾಗಿದೆ. ಮತ್ತೊಂದೆಡೆ ಕೆರೆಯ ಭೂಪ್ರದೇಶವನ್ನು ಒತ್ತುವರಿ ಮಾಡಿಕೊಳ್ಳಲಾಗುತ್ತಿದ್ದು, ಕೆರೆಯು ತನ್ನ ವಿಸ್ತೀರ್ಣವನ್ನು ಕಳೆದುಕೊಳ್ಳುತ್ತಿದೆ. ಜೊತೆಗೆ ನಗರದಲ್ಲಿ ಕೆಡವಿ ಹಾಕಲಾಗುವ ಹಳೆಯ ಮನೆಗಳ ತ್ಯಾಜ್ಯ, ಹೋಟೆಲ್‌ತ್ಯಾಜ್ಯ, ತಲೆ ಕೂದಲು ಸೇರಿದಂತೆ ಇನ್ನಿತರ ತ್ಯಾಜ್ಯವನ್ನು ತಂದು ಸುರಿಯಲಾಗುತ್ತಿದ್ದು. ಕೆರೆಯ ಒಡಲಿನಲ್ಲಿ ಕಸವನ್ನು ತುರುಕಿದಂತಾಗಿದೆ. ಇದಕ್ಕೆ ಕಡಿವಾಣವೇ ಇಲ್ಲ ಎಂಬಂತಾಗಿದೆ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸುತ್ತಾರೆ. ಮತ್ತೊಂದೆಡೆ ಕೆರೆಯ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕಿರುವ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಿರ್ಲಕ್ಷ್ಯಕ್ಕೂ ಕೆರೆ ತುತ್ತಾಗಿದೆ. ಇದರಿಂದಾಗಿ ಕೆರೆಯ ತುಂಬಾ ಜಾಲಿಗಿಡಗಳು ಬೆಳೆದು ನಿಂತಿದ್ದು, ಕೆರೆಯ ಅಸ್ತಿತ್ವವನ್ನೇ ಅಣುಕ ಮಾಡುವಂತಿದೆ. ಇದು ಕೆರೆಯೊ

ಉದಯವಾಹಿನಿ ಚಿತ್ರ



ಅಥವಾ ಜಾಲಿಗಿಡಗಳ ವನವೊ ಎಂಬಂತಾಗಿದೆ. ಸಣ್ಣ ನೀರಾವರಿ ಇಲಾಖೆಯಿಂದ ಹೇಗೋ ತಪ್ಪಿ ಹೋಗಿ ಡೀಮ್ಡ್ ಅರಣ್ಯಕ್ಕೆ ಸೇರಿಕೊಂಡಿದೆ. ಆದರೆ, ಅರಣ್ಯ ಇಲಾಖೆಯವರು ಒತ್ತುವರಿ ತೆರವಿಗೂ ಮುಂದಾಗದೆ, ಜಾಲಿ ಮರಗಳನ್ನೂ ತೆಗೆಯದ ಕಾರಣ ಕೆರೆ ನುರುಪಯುಕ್ತವಾಗಿದೆ.

ಗೌಡನಕೆರೆ ಸುಮಾರು 99 ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದು, ಸುತ್ತಮುತ್ತಲಿನ ನೂರಾರು ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸುವ ಅವಕಾಶವಿದೆ. ಆದರೆ, ಒತ್ತುವರಿ ಪರಿಣಾಮ ಇದು ಕೆರೆಯೇ ಎಂಬ ಪ್ರಶ್ನೆ ಮೂಡುವಂತಾಗಿದೆ. ಈ ಕೆರೆಯಲ್ಲಿ ನೀರು ಸಂಗ್ರಹಗೊಂಡರೆ ನಗರಕ್ಕೆ ನೀರು ಸರಬರಾಜು ಮಾಡುವ ಹಲವಾರು ಕೊಳವೆ ಬಾವಿಗಳು ಹಾಗೂ ಸುತ್ತಲಿನ ಗ್ರಾಮಗಳ ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ. ಆದರೆ, ದಶಕಗಳಿಂದ ಮಳೆ ಕೊರತೆಯಿಂದ ಕೆರೆಗೆ ನೀರು ಬಾರದೆ ಯಥೇಚ್ಛವಾಗಿ ಜಾಲಿಗಿಡಗಳು ಬೆಳೆದಿವೆ. ಕಾಲಕಾಲಕ್ಕೆ ಇವುಗಳನ್ನು ತೆರವು ಮಾಡದ ಪರಿಣಾಮ ಇಡೀ ಕೆರೆಯನ್ನೇ ಜಾಲಿ ಗಿಡಗಳು ಆಕ್ರಮಿಸಿವೆ.

ಬೈಪಾಸ್ ರಸ್ತೆಯುದ್ದಕ್ಕೂ ಗೌಡನ ಕೆರೆಗೆ ಟ್ರ್ಯಾಕ್ಟರ್‌ಗಳ ಮೂಲಕ ಊರಿನಲ್ಲಿ ಉತ್ಪತ್ತಿಯಾಗುವ ಕಸವನ್ನು ತಂದು ಸುರಿಯಲಾಗುತ್ತಿದೆ. ನಗರದಲ್ಲಿ ಕೆಡವಿ ಹಾಕಲಾಗುವ ಹಳೆ ಮನೆ, ಕಟ್ಟಡಗಳ ತ್ಯಾಜ್ಯವನ್ನೂ ಕೆರೆ ಒಡಲಿಗೆ ಸೇರಿಸಲಾಗುತ್ತಿದೆ. ಇದಲ್ಲದೆ ಹೋಟೆಲ್‌ಗಳ ತ್ಯಾಜ್ಯವೂ ಸೇರಿದಂತೆ ಎಲ್ಲಾ ರೀತಿಯ ನಿರುಪಯುಕ್ತ ವಸ್ತುಗಳನ್ನು ತಂದು ಸುರಿಯಲಾಗುತ್ತಿದೆ. ಕೆರೆಯಲ್ಲಿ ಬಿದ್ದಿರುವ ಕಾಲುದಾರಿಗಳಲ್ಲಿ ಹಸು, ಕುರಿ, ಮೇಕೆಗಳನ್ನು ಮೇಯಿಸಲೆಂದು ಕರೆದೊಯ್ಯುವ ನಗರ ವ್ಯಾಪ್ತಿಯ ರೈತರಿಗೆ ಈ ತ್ಯಾಜ್ಯ ಕಂಟಕಪ್ರಾಯವಾಗಿ ಪರಿಣಮಿಸಿದೆ.

### 81.98 ಲಕ್ಷ ಉಳಿತಾಯ ಬಜೆಟ್: 17 ಸಾವಿರ ಶ್ರಮಿಕರಿಗೆ ವಿಮೆ ಭಾಗ್ಯ: ಅಭಿವೃದ್ಧಿ ಜೊತೆಗೆ ಸ್ವಚ್ಛತೆಗೆ ಒತ್ತು; ಜಯಂತಿಗಳಿಗೆ ಉದಾರ ಅನುದಾನ

## ಸರ್ವೋದಯ ಆಶಯಕ್ಕೆ ಒತ್ತು; ಸಮುದಾಯ ಪ್ರಾತಿನಿಧ್ಯಕ್ಕೆ ಅಸ್ತು

• **ಉದಯವಾಹಿನಿ, ರಾಮನಗರ**

ಮೂಲ ಕಸುಬುದಾರರಿಗೆ ಪರಿಕರ ವಿತರಣೆ, 17 ಸಾವಿರ ಕಾರ್ಮಿಕರಿಗೆ ವಿಮೆಯ ಆಸರೆ, ಪರಿಶಿಷ್ಟರು, ಪೌರ ಕಾರ್ಮಿಕರ ಬಗ್ಗೆ ವಿಶೇಷ ಕಾಳಜಿ, ಅಭಿವೃದ್ಧಿ, ಸೌಂದರ್ಯೀಕರಣ, ಪರಿಸರ ಕಾಳಜಿ ಜೊತೆಗೆ ಎಲ್ಲಾ ಜಾತಿ ಮತ್ತು ಧರ್ಮಗಳ ಕಲ್ಯಾಣದ ಆಶಯದೊಂದಿಗೆ ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಶಶಿ ಅವರು 81.98 ಲಕ್ಷದ ಉಳಿತಾಯ ಬಜೆಟ್ ಮಂಡಿಸಿದರು. ಬಜೆಟ್ ಪ್ರತಿಗಳಿದ್ದ ಕೆಂಬಣ್ಣದ ಬ್ರೀಫ್‌ಕೇಸ್‌ನೊಂದಿಗೆ ನಗರಸಭೆ ಸಭಾಂಗಣಕ್ಕೆ ಬಂದ ಅವರು, 20 ಪುಟಗಳ 2026-27ನೇ ಸಾಲಿನ ಬಜೆಟ್ ಮಂಡಿಸಿದರು. ನಗರಸಭೆ ಅವಧಿ ಈ ವರ್ಷ ಅಂತ್ಯಗೊಂಡು ಚುನಾವಣೆಗೂ ಸಾಕ್ಷಿಯಾಗುವ ಹಿನ್ನೆಲೆಯಲ್ಲಿ, ಬಜೆಟ್ ಪೂರ್ವ ಸಭೆಗಳಲ್ಲಿ ಕೇಳಿ ಬಂದ ವಿವಿಧ ಜಾತಿ, ಧರ್ಮ, ಸಂಘ, ಸಂಸ್ಥೆ ಹಾಗೂ ಸಂಘಟನೆಗಳ ಬಹುತೇಕ ಬೇಡಿಕೆಗಳಿಗೆ ಬಜೆಟ್‌ನಲ್ಲಿ ಸ್ಪಂದಿಸಿರುವುದು ಎದ್ದು ಕಾಣುತ್ತದೆ.

ಸಮುದಾಯವಾರು ಪ್ರಾತಿನಿಧ್ಯದೊಂದಿಗೆ ಅಭಿವೃದ್ಧಿ ಮಂತ್ರ ಜಪಿಸುತ್ತಲೇ ಆದಾಯ ವೃದ್ಧಿಗೆ ಬಜೆಟ್‌ನಲ್ಲಿ ಸರ್ಕಸ್ ಮಾಡಲಾಗಿದೆ. ಅದೇ ಕಾರಣಕ್ಕೆ ಕಳೆದ ಸಾಲಿನಲ್ಲಿ 78.21 ಕೋಟಿ ಇದ್ದ ಬಜೆಟ್ ಗಾತ್ರ. ಈ ಸಲ 107.39 ಕೋಟಿಗೆ ಹಿಗ್ಗಿದೆ. ವೆಚ್ಚದ ಜೊತೆಗೆ ವಿವಿಧ ಮೂಲಗಳ ಆದಾಯದ ನಿರೀಕ್ಷೆಯೂ ಹೆಚ್ಚಾಗಿದೆ. ಮಹನೀಯರ ಜಯಂತಿ ಜೊತೆಗೆ ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ ಧರ್ಮಗಳ ಆಚರಣೆಗೂ ಅನುದಾನದಲ್ಲಿ ಉದಾರತೆ ಪ್ರದರ್ಶಿಸಲಾಗಿದೆ.

ಘನತ್ಯಾಜ್ಯ ನಿರ್ವಹಣೆ, ಸ್ಮಾರ್ಟ್ ರಾಮನಗರ, ಸ್ವಚ್ಛ ರಾಮನಗರ, ಪರಿಸರ ಪೋಷಣೆಗೂ ಒತ್ತು ನೀಡುವಂತಹ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ಪರಿಶಿಷ್ಟ, ಹಿಂದುಳಿದ ಸಮುದಾಯಗಳು, ಪೌರ ಕಾರ್ಮಿಕರಿಗೆ ಬಜೆಟ್‌ನಲ್ಲಿ ವಿಶೇಷ ಕಾಳಜಿ ತೋರಲಾಗಿದೆ.

**ವಿಮೆ ಭಾಗ್ಯ:** ನಗರ ವ್ಯಾಪ್ತಿಯ ಆಟೋ ಚಾಲಕರು, ಬೀದಿ ವ್ಯಾಪಾರಿಗಳು,



ಉದಯವಾಹಿನಿ ಚಿತ್ರ

ದರ್ಜಿಗಳು, ಮೇದಾರರು, ದೊಂಬಿದಾಸರು, ಅಕ್ಕಸಾಲಿಗರು ಕುಂಬಾರರರು, ಇರುಳಿಗರು, ವಿಶ್ವಕರ್ಮ, ಪಿಲೇಚರ್ಸ್, ಹುರಿಮಿಷನ್ ಕಾರ್ಮಿಕರು, ನೇಕಾರರು, ಮಡಿವಾಳರು, ಚಿಂದಿ ಆಯುವವರು, ಗಾಣಿಗರು, ಸವಿತಾ ಸಮಾಜ ಸೇರಿದಂತೆ ಶ್ರಮಿಕ ವರ್ಗದ 17 ಸಾವಿರ ಮಂದಿಯ ವಿಮೆ ವಂತಿಕೆಗೆ 30 ಲಕ್ಷ ತೆಗೆದಿರಿಸಲಾಗಿದೆ. ನಗರಸಭೆ ಚರಿತ್ರೆಯಲ್ಲೇ ಇಷ್ಟೊಂದು ಶ್ರಮಿಕರಿಗೆ ವಿಮೆ ಭಾಗ್ಯ ಸಿಕ್ಕಿರುವುದು ಇದೇ ಮೊದಲು.

**ಪೌರ ಕಾರ್ಮಿಕರಿಗೆ ವಿಶೇಷ ಕಾಳಜಿ**

ದರ್ಜಿ ವೃತ್ತಿದಾರರ ಪರಿಕರಕ್ಕೆ 5 ಲಕ್ಷ, ಆಟೋ ಚಾಲಕರಿಗೆ ಸಮವಸ್ತ್ರ ಮತ್ತು ಚಾಲನಾ ಪರವಾನಗಿ ನವೀಕರಣಕ್ಕೆ 10 ಲಕ್ಷ, ಗಾಣಿಗ ವೃತ್ತಿದಾರರ ಪರಿಕರಕ್ಕೆ 1 ಲಕ್ಷ, ವಿಶ್ವಕರ್ಮರಿಗೆ 3 ಲಕ್ಷ, ಅಲೆಮಾರಿ ಹಾಗೂ ಬುಡಕಟ್ಟು ಜನಾಂಗದ ವೃತ್ತಿದಾರರಿಗೆ 3 ಲಕ್ಷ, ಮಹಿಳಾ ಸ್ವಸಹಾಯ ಸಂಘಗಳು ಹಾಗೂ ಒಕ್ಕೂಟಗಳಿಗೆ 15 ಲಕ್ಷ, ಮೇದಾರರ ಪರಿಕರಕ್ಕೆ 2 ಲಕ್ಷ ನಿಗದಿಪಡಿಸಲಾಗಿದೆ. ಅಸಂಘಟಿತ ಕಾರ್ಮಿಕರಿಗೆ ಪಿಂಚಣಿ ಸೌಲಭ್ಯದ ಜೊತೆಗೆ ಈ ವಲಯಗಳ ಕಾರ್ಮಿಕರಿಗೆ ನಗರದ 3 ಕಡೆ ಲೇಬರ್ ಚೌಕ ಸ್ಥಾಪನೆಯಾಗಲಿದೆ.

**ಕೋಚಿಂಗ್ ಮುಂದುವರಿಕೆ:** ಉದ್ಯೋಗದ ಸ್ಪರ್ಧಾತ್ಮಕ ಪರೀಕ್ಷೆಗಳ, ವೃತ್ತಿಪರ ಕೋರ್ಸ್‌ಗಳಿಗೆ ನಡೆಯುವ ಪರೀಕ್ಷೆಗಳ ಕೋಚಿಂಗ್ ಮುಂದುವರಿಸಿ ತಲಾ 10 ಲಕ್ಷ ಮೀಸಲಿರಿಸಲಾಗಿದೆ. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹಾಸನ ರಘು ಅವರು ಜಾನಪದ ಗುರುಕುಲ, ಜನಪದ ಕಲೆ, ಮಲ್ಲಕಂಬ ವಿದ್ಯೆಗೆ ಪ್ರೋತ್ಸಾಹ ನೀಡಲು 1.50 ಲಕ್ಷ ಘೋಷಿಸಲಾಗಿದೆ.

> **ಸರ್ವರ ಅಭ್ಯುದಯದ ಆಶಯದೊಂದಿಗೆ ರಾಮನಗರವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ದೂರದೃಷ್ಟಿಯ ಬಜೆಟ್ ಮಂಡಿಸಿದ್ದೇನೆ. ನಾವು ಘೋಷಿಸಿ ಸುಮ್ಮನಾಗುವುದಿಲ್ಲ. ಅನುಷ್ಠಾನ ಮಾಡಿ ತೋರಿಸುತ್ತೇವೆ**
> – ಕೆ. ಶೇಷಾದ್ರಿ ಶಶಿ ಅಧ್ಯಕ್ಷ ನಗರಸಭೆ ರಾಮನಗರ

ಉನ್ನತ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ವೃತ್ತಿ ತರಬೇತಿಗೆ ಒತ್ತು ನೀಡಲಾಗಿದೆ. ಸಾಹಿತ್ಯ, ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಆಚರಣೆ ಮತ್ತು ಪ್ರೋತ್ಸಾಹಕ್ಕಾಗಿ 30 ಲಕ್ಷ ತೆಗದಿರಸಲಾಗಿದೆ. ವಿವೇಕಾನಂದ ನಗರದಲ್ಲಿರುವ ವಿವೇಕಾನಂದರ ಪುತ್ಥಳಿ ಉನ್ನತೀಕರಣದ ಜೊತೆಗೆ ಕೆಂಗಲ್ ಹನುಮಂತಯ್ಯ ಪ್ರತಿಮೆ ಸ್ಥಳದ ಸೌಂದರ್ಯೀಕರಣಕ್ಕೆ ಒತ್ತು ನೀಡಲಾಗಿದೆ.

ಕೆಂಪೇಗೌಡ ವೃತ್ತದಲ್ಲಿ ನೀರಿನ ಕಾರಂಜಿಯ ಫೌಂಟೇನ್, ವಾಟರ್ ಟ್ಯಾಂಕ್ ವೃತ್ತದಲ್ಲಿ ಗಡಿಯಾರ ಗೋಪುರ, ಎಲ್ಲಾ ವಾರ್ಡ್‌ಗಳಿಗೆ ನಾಮಫಲಕ ಅಳವಡಿಕೆ, ಸ್ಮಶಾನಗಳಿಗೆ ಮೂಲಸೌಕರ್ಯ, 30 ಲಕ್ಷದಲ್ಲಿ ಆಧುನಿಕ ದೋಬಿ ಘಾಟ್ ಸ್ಥಾಪನೆ. 50 ಲಕ್ಷದಲ್ಲಿ ಫುಡ್ ಸ್ಟ್ರೀಟ್ ನಿರ್ಮಾಣ, ಡಾ. ಬಿ.ಆರ್. ಅಂಬೇಡ್ಕರ್ ಭವನ ನವೀಕರಣ, ಕುಡಿಯುವ ನೀರು, ಪೈಪ್‌ಲೈನ್ ಕಾಮಗಾರಿ, ಬೀದಿ ದೀಪಗಳ ನಿರ್ವಹಣೆ, ರಸ್ತೆ ನಿರ್ಮಾಣ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ಕೊಡಲಾಗಿದೆ.

**ಜಯಂತಿಗಳು ಧಾರ್ಮಿಕ ಉತ್ಸವಕ್ಕೆ ಅನುದಾನ**

**ನಗರಸಭೆಯಿಂದ ಆಚರಿಸುವ ಜಯಂತಿಗಳ ಸಂಖ್ಯೆ ನಾಲ್ಕಕ್ಕೇರಿದೆ. ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಜೊತೆಗೆ ನಾಡಪ್ರಭು ಕೆಂಪೇಗೌಡ ಜಯಂತಿ ಬಸವ ಜಯಂತಿ ದೇವರಾಜ ಅರಸು ಜಯಂತಿಯನ್ನು ಘೋಷಿಸಿ ತಲಾ 5 ಲಕ್ಷ ಅನುದಾನ ನಿಗದಿಪಡಿಸಲಾಗಿದೆ.**

**ಸ್ಮಾರ್ಟ್ ತಂಗುದಾಣ; ಪರಿಸರ ರಕ್ಷಣೆ:** ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಬಳಿ ಮೊಬೈಲ್ ಚಾರ್ಜಿಂಗ್ ವೈಫೈ ಸೇರಿದಂತೆ ಅತ್ಯಾಧುನಿಕ ಸೌಲಭ್ಯವಿರುವ ಸ್ಮಾರ್ಟ್ ಬಸ್ ತಂಗುದಾಣ. ಉದ್ಯಾನಗಳಲ್ಲಿ ಇದೇ ಸೌಲಭ್ಯವಿರುವ ಇರುವ ಸ್ಮಾರ್ಟ್ ಬೆಂಚುಗಳು ತೀರ್ಮಾಣವಾಗಲಿವೆ. ನಗರದ ವ್ಯಾಪ್ತಿಯಲ್ಲಿ ಪರಿಸರ ಜಾಗೃತಿಗೆ ಸರಣಿ ಕಾರ್ಯಕ್ರಮಗಳ ಜೊತೆಗೆ 5 ಸಾವಿರ ಸಸಿಗಳನ್ನು ನೆಡುವುದು. ಪ್ಲಾಸ್ಟಿಕ್ ಬಳಕೆಗೆ ಪರ್ಯಾಯವಾಗಿ ಜನಸಂದಣಿ ಪ್ರದೇಶದಲ್ಲಿ ಬಟ್ಟೆ ಕೈ ಚೀಲಗಳು ಜನರಿಗೆ ಸುಲಭವಾಗಿ ಸಿಗುವಂತಾಗಲು ಬ್ಯಾಗ್ ವೆಂಡಿಂಗ್ ಮಷಿನ್ ಅಳವಡಿಸುವ ಜೊತೆಗೆ ನಿರ್ವಹಣೆಯನ್ನು ಸ್ವಸಹಾಯ ಸಂಘಗಳಿಗೆ ವಹಿಸಲು ಕ್ರಮ ಕೈಗೊಳ್ಳಲಾಗಿದೆ. ತ್ಯಾಜ್ಯ ನಿರ್ವಹಣೆಗೆ ಹೊಸ ಮಾರ್ಗ ಘನ ತ್ಯಾಜ್ಯ ನಿರ್ವಹಣೆಯ ಭಾಗವಾಗಿ ನಗರದಲ್ಲಿ 100 ಮನೆಗಳಲ್ಲಿ ಬಯೋಗ್ಯಾಸ್ ಉತ್ಪತ್ತಿಗೆ ಒತ್ತು ನೀಡಲಾಗಿದ್ದು ಇದನ್ನು ಅಳವಡಿಸಿಕೊಳ್ಳುವವರಿಗೆ ಸಬ್ಸಿಡಿ ಘೋಷಿಸಲಾಗಿದೆ.


ಅಂತರಾಳದಿಂದ...
EDITORIAL

# ಸಭ್ಯ ರಾಜಕಾರಣಕ್ಕೆ ತಿಲಾಂಜಲಿ, ಸಾಮಾಜಿಕ ಸ್ವಾಸ್ಥ್ಯಕ್ಕೆ ಅಪಾಯ

ಮುಸ್ಲಿಮರನ್ನು ಗುರಿಯಾಗಿಸಿಕೊಂಡು ದ್ವೇಷ ಭಾಷಣ ಮಾಡುವುದರಲ್ಲಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಇತರ ಎಲ್ಲಾ ಹಿಂದುತ್ವ ರಾಜಕಾರಣಿಗಳಿಗಿಂತ ಮುಂದಿದ್ದಾರೆ. 2021ರಲ್ಲಿ ಮುಖ್ಯಮಂತ್ರಿ ಆದಾಗಿನಿಂದ ಅವರು ಮುಸ್ಲಿಮರ ವಿರುದ್ಧ ದ್ವೇಷ ಕಾರಿದ್ದಾರೆ. ತಾರತಮ್ಯಕ್ಕೆ ದಾರಿ ಮಾಡಿಕೊಡುವಂತಹ ನೀತಿಗಳನ್ನು ಅನುಸರಿಸಿದ್ದಾರೆ; ಮುಸ್ಲಿಮರನ್ನು ಕಿರುಕುಳಕ್ಕೆ ಗುರಿಪಡಿಸುವ, ಅವರನ್ನು ಹತ್ತಿಕ್ಕುವ ಕ್ರಮಗಳನ್ನು ಎಗ್ಗಿಲ್ಲದೆ ಕೈಗೊಂಡಿದ್ದಾರೆ. ಅವರು ಈಚೆಗೆ ಎಸಗಿದ ಕೃತ್ಯವೊಂದು ತೀರಾ ಆಕ್ಷೇಪಾರ್ಹವಾಗಿದೆ. ಶರ್ಮಾ ಅವರ ಇತ್ತೀಚಿನ ಕೆಲವು ಮಾತುಗಳನ್ನು ಉಲ್ಲೇಖಿಸಿ ಕೆಲವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಮುಸ್ಲಿಮರು ಧರಿಸುವಂತಹ ಟೋಪಿ ಧರಿಸಿದ್ದ ಕೆಲವರನ್ನು ಗುರಿಯಾಗಿಸಿಕೊಂಡು ಶರ್ಮಾ ಅವರು ಗುಂಡು ಹಾರಿಸುತ್ತಿರುವ ಚಿತ್ರವೊಂದು ಇರುವ ವಿಡಿಯೋ ಬಗ್ಗೆ ಅರ್ಜಿದಾರರು ಕೋರ್ಟ್‌ನ ಗಮನ ಸೆಳೆಯುವ ಕೆಲಸ ಮಾಡಿದ್ದಾರೆ. ಈ ವಿಡಿಯೋವನ್ನು ನಂತರ ಅಳಿಸಿಹಾಕಲಾಗಿದೆ. ಆದರೆ, ಇದು ಅಸ್ಸಾಂನಲ್ಲಿ ಹಾಗೂ ದೇಶದ ಇತರೆಡೆಗಳಲ್ಲಿ ವ್ಯಾಪಕವಾಗಿ ಹರಿದಾಡಿದೆ. 'ಮಿಯಾಗಳನ್ನು ಗುರಿಯಾಗಿಸಿಕೊಳ್ಳಿ' ಎಂದು ಶರ್ಮಾ ಅವರು ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಹೇಳಿದ್ದರು. ಬಂಗಾಳಿ ಭಾಷೆ ಮಾತನಾಡುವ ಮುಸ್ಲಿಮರನ್ನು 'ಮಿಯಾಗಳು' ಎಂದು ಕರೆಯಲಾಗುತ್ತಿದೆ. ಮುಸ್ಲಿಮರನ್ನು ಗುರಿಯಾಗಿಸಿಕೊಂಡು ತಾರತಮ್ಯ ಎಸಗುವವರಿಗೆ, ಅವರನ್ನು ಕಿರುಕುಳಕ್ಕೆ ಗುರಿಪಡಿಸುವವರಿಗೆ ಸರ್ಕಾರ ರಕ್ಷಣೆ ಒದಗಿಸುತ್ತದೆ ಎಂದು ಕೂಡ ಶರ್ಮಾ ಭರವಸೆ ನೀಡಿದ್ದಾರೆ.

> **ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ದೇಶದ ಸಾಮಾಜಿಕ ಮತ್ತು ರಾಜಕೀಯ ಪರಿಸರವನ್ನು ತೀವ್ರವಾಗಿ ಗಾಸಿಗೊಳಿಸುತ್ತಿದ್ದಾರೆ; ಸಭ್ಯ ರಾಜಕಾರಣದ ಎಲ್ಲೆಗಳನ್ನು ದಾಟಿದ್ದಾರೆ.**

ಅಸ್ಸಾಂನ ವಿಧಾನಸಭೆಗೆ ಚುನಾವಣೆ ಹತ್ತಿರವಾಗುತ್ತಿದೆ. ಅಲ್ಲಿ ಸತತ ಮೂರನೆಯ ಬಾರಿಯೂ ಜಯ ಸಾಧಿಸಲು ಬಿಜೆಪಿ ಯತ್ನಿಸುತ್ತಿದೆ. ಶರ್ಮಾ ಅವರು ಮುಸ್ಲಿಮರನ್ನು ಗುರಿಯಾಗಿಸಿ ಕೊಂಡು ಎಸಗುತ್ತಿರುವ ಕೃತ್ಯಗಳ ಹಿಂದೆ ಚುನಾವಣಾ ಲೆಕ್ಕಾಚಾರದ ಆಯಾಮವೂ ಇದ್ದಿರಬಹುದು. ಆದರೆ ಅವನ್ನೆಲ್ಲ ಚುನಾವಣಾ ಪ್ರಚಾರ ತಂತ್ರದ ಭಾಗ ಮಾತ್ರ ಎಂದಷ್ಟೇ ಪರಿಗಣಿಸಲು ಆಗದು. ಶರ್ಮಾ ಅವರ ಅರ್ಭಟದ ಮಾತುಗಳು ಅತ್ಯಂತ ವಿಭಜನಕಾರಿ ಯಾಗಿವೆ, ಅವು ದ್ವೇಷ ಭಾಷಣದ ವ್ಯಾಪ್ತಿಗೆ ಬರುವಂಥವು. ತಮ್ಮ ಮಾತುಗಳು ಬಾಂಗ್ಲಾದೇಶದಿಂದ ಬಂದಿರುವ ಅಕ್ರಮ ವಲಸಿಗರನ್ನು ಮಾತ್ರ ಗುರಿಯಾಗಿಸಿಕೊಂಡಿವೆ ಎಂದು ಶರ್ಮಾ ಹೇಳಿದ್ದಾರೆ. ಆದರೆ ವಾಸ್ತವದಲ್ಲಿ ಅವರ ಮಾತುಗಳಲ್ಲಿ ಆ ಬಗೆಯ ವ್ಯತ್ಯಾಸ ಕಾಣುತ್ತಿಲ್ಲ. ಅವರ ಮಾತುಗಳು ಮುಸ್ಲಿಮರೆಲ್ಲರನ್ನೂ ಗುರಿಯಾಗಿಸಿಕೊಂಡಂತೆ ಇವೆ. ಪ್ರಜೆಗಳನ್ನು ಗುರಿಯಾಗಿಸಿಕೊಂಡು ಗುಂಡು ಹಾರಿಸಲು ಮುಂದಾಗುವ, ಕೋಮು ಪ್ರಚೋದನಕಾರಿ ಸಂದೇಶ ರವಾನಿಸಲು ನಿರ್ದಿಷ್ಟ ಸಾಂಕೇತಿಕ ಪದಗಳನ್ನು ಬಳಕೆ ಮಾಡುವ ಮುಖ್ಯಮಂತ್ರಿ, ತಾನು ಸ್ವೀಕರಿಸಿದ ಪ್ರತಿಜ್ಞಾವಿಧಿಗೆ ತಕ್ಕಂತೆ ನಡೆದುಕೊಳ್ಳುತ್ತಿಲ್ಲ ಎನ್ನಬೇಕಾಗುತ್ತದೆ. ಅವರು ಸಭ್ಯ ರಾಜಕಾರಣದ ಎಲ್ಲೆಗಳನ್ನೆಲ್ಲ ಮೀರಿದ್ದಾರೆ. ಬಾಂಗ್ಲಾದೇಶದ ಅಕ್ರಮ ವಲಸಿಗರ ವಿಷಯವನ್ನು ಬಿಜೆಪಿ ನಾಯಕರು ಹಾಗೂ ಶರ್ಮಾ ಅವರು ರಾಜಕೀಯ ಉದ್ದೇಶಕ್ಕೆ ಬಳಕೆ ಮಾಡಿಕೊಂಡಿದ್ದಾರೆ. ಅಸ್ಸಾಂಗೆ ಈಚೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೂ ಅಕ್ರಮ ವಲಸಿಗರ ಬಗ್ಗೆ ಮಾತನಾಡಿದ್ದಾರೆ.



ಕೇಂದ್ರದಲ್ಲಿ ಹಾಗೂ ಅಸ್ಸಾಂನಲ್ಲಿ ಬಿಜೆಪಿಯು 10 ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಅಧಿಕಾರದಲ್ಲಿದೆ. ಈ ಸಮಸ್ಯೆಯನ್ನು ಕಾನೂನಿನ ಚೌಕಟ್ಟಿನ ಅಡಿಯಲ್ಲಿ ಬಗೆಹರಿಸುವ ಅಧಿಕಾರ, ಹೊಣೆ ಆ ಪಕ್ಷದ ಬಳಿಯೇ ಇದೆ. 1985ರ ಅಸ್ಸಾಂ ಒಪ್ಪಂದ ಹಾಗೂ ನಂತರದ ಸುಪ್ರೀಂ ಕೋರ್ಟ್ ತೀರ್ಪುಗಳು ಆಡಳಿತಾರೂಢರಿಗೆ ಮಾರ್ಗದರ್ಶಿಯಂತೆ ಇವೆ. ಆದರೆ ಎಲ್ಲಾ ಮುಸ್ಲಿಮರನ್ನು ಕೆಟ್ಟವರೆಂದು ಚಿತ್ರಿಸಲು ಯತ್ನಿಸುವುದು ಸರಿಯಾದ ಕ್ರಮವಲ್ಲ. ಶರ್ಮಾ ಅವರು ಕಾಂಗ್ರೆಸ್ಸಿನಿಂದ ಬಿಜೆಪಿ ಸೇರಿದವರು. ತಾವು ಇತರರಿಗಿಂತ ಹೆಚ್ಚಿನ ಮಟ್ಟದ ಹಿಂದುತ್ವ ಮೂಲಭೂತವಾದಿ ಎಂಬುದನ್ನು ಸಾಬೀತು ಮಾಡಲು ಅವರು ಯತ್ನಿಸುತ್ತಿರಬಹುದು. ಆ ಕಸರತ್ತಿನ ಭರಾಟೆಯಲ್ಲಿ ಅವರು ದೇಶದ ಸಾಮಾಜಿಕ ಪರಿಸರಕ್ಕೆ ಮತ್ತು ರಾಜಕೀಯ ಭಿತ್ತಿಗೆ ತೀವ್ರವಾದ ಅಪಾಯ ಉಂಟು ಮಾಡುತ್ತಿದ್ದಾರೆ. ಅವರು ಹದ್ದು ಮೀರಿ ವರ್ತಿಸುತ್ತಿದ್ದಾರೆ. ತಪ್ಪು ಮಾಡಿಯೂ ತಪ್ಪಿಸಿಕೊಳ್ಳಲು ಅವರಿಗೆ ಅವಕಾಶ ಕೊಡಬಾರದು.

# ರಾಮಾಯಣ



## ಕಪಿಸೇನೆಗಳ ಆಗಮನ

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಅವರ ಲೆಕ್ಕವನ್ನು ಹೇಳುವುದಕ್ಕೆ ಶಕ್ಯವಿಲ್ಲ. ಆ ಬಳಿಕ ಸುಗ್ರೀವನು ಆ ಕಪಿ ನಾಯಕರನ್ನು ಶ್ರೀರಾಮನಿಗೆ ತೋರಿಸುತ್ತ ಅವರ ದೇಶಗಳನ್ನೂ ಪರಾಕ್ರಮಗಳನ್ನೂ ಹೆಸರುಗಳನ್ನೂ ಹೇಳಿ ಆತನ ಅಪ್ಪಣೆಯಿಂದ ಅವರನ್ನು ಪರ್ವತದ ತಪ್ಪಲುಗಳಲ್ಲಿ ಹಾಳೆಯವಿಳಿಸಿದನು. ಶ್ರೀರಾಮನು ಆ ವಾನರರ ಪರಾಕ್ರಮಾರ್ತಯನ್ನು ಕೇಳಿ ಸಂತುಷ್ಟನಾದನು.

## ಸುಗ್ರೀವನು ಸೀತಾದೇವಿಯನ್ನು ಹುಡುಕುವುದಕ್ಕಾಗಿ ಸೇನೆಗಳನ್ನು ಕಳಿಸಿದ್ದು

ಆಮೇಲೆ ಸುಗ್ರೀವನು ಅತ್ಯಂತ ಹರ್ಷಯುಕ್ತನೂ ಪರಬಲಾಂತಕನೂ ಪುರುಷೋತ್ತಮನೂ ಆದ ಶ್ರೀರಾಮನನ್ನು ಕುರಿತು ಶ್ರೀರಾಮ ಮಹಾಬಲವಂತರಾಗಿಯೂ ಕಾಮರೂಪಿಗಳಾಗಿಯೂ ದೇವೇಂದ್ರನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವುಳ್ಳವರಾಗಿಯೂ ಇರುವ ಈ ಕಪಿನಾಯಕರು ತಮ್ಮ ಸೇನೆಗಳನ್ನು ಕೂಡಿಕೊಂಡು ಬಂದಿರುವರು. ಇವರು ಸಮಸ್ತ ಕಾರ್ಯಗಳನ್ನೂ ಸಾಧಿಸುವುದರಲ್ಲಿ ಪ್ರವೀಣರು. ಇವರಲ್ಲಿ ಕೆಲವರು ಭೂಮಿಯಲ್ಲಿಯೂ ಉದಕದಲ್ಲಿಯೂ ಸಂಚರಿಸ ಬಲ್ಲರು. ಕೆಲವರು ಪರ್ವತಗಳಲ್ಲಿ ಸಂಚರಿಸಬಲ್ಲರು. ನಾನಾದೇಶಗಳಲ್ಲಿದ್ದ ಈ ಕಪಿನಾಯಕರೆಲ್ಲರೂ ನಿನ್ನ ಸೇವೆಗಾಗಿ ಬಂದದ್ದರಿಂದ ನಿನ್ನ ಆಜ್ಞೆಯಲ್ಲಿದ್ದು ನಿನ್ನ ಕಾರ್ಯವನ್ನು ಸಾಧ್ಯ ಮಾಡುವರು. ಇನ್ನು ನಿನ್ನ ಮನಸ್ಸಿನಲ್ಲೆಣಿಸಿರುವ ಕಾರ್ಯವನ್ನು ಈ ಕಪಿನಾಯಕರಿಗೆ ತಿಳುಹಿಸು. ನಿನ್ನ ಕಾರ್ಯವನ್ನು ನಾನು ಬಲ್ಲವನು. ಆದರೂ ಇವರಿಗೆ ನೀನೇ ಆಜ್ಞೆ ಮಾಡು ಎಂದು ನುಡಿದನು. ಆ ಮಾತನ್ನು ಕೇಳಿ ಶ್ರೀರಾಮನು ಸುಗ್ರೀವನನ್ನು ಆಲಿಂಗಿಸಿ ಸುಗ್ರೀವ, ಸೀತಾದೇವಿಯು ಜೀವಸಹಿತವಾಗಿ ಇರುವಳೋ ಇಲ್ಲವೊ ಎಂಬ ವೃತ್ತಾಂತವನ್ನು ತಿಳಿಯಬೇಕು. ರಾವಣನಿರುವ ದೇಶವನ್ನು ಕಂಡದ್ದಿಲ್ಲ. ಆದ್ದರಿಂದ ಮೊದಲು ಆತನಿರುವ ದೇಶವನ್ನೂ ಅಲ್ಲಿ ಸೀತಾದೇವಿ ಯಿರುವುದನ್ನೂ ತಿಳಿದು ಆಮೇಲೆ ನಿನ್ನ ಸಹಾಯದಿಂದ ಕಾಲೋಚಿತವಾದ ಕಾರ್ಯವನ್ನು ಮಾಡಬೇಕು. ರಾವಣನಿರುವ ಸ್ಥಳವನ್ನು ಕಾಣುವುದಕ್ಕೆ ನನ್ನಿಂದಲಾದರೂ ಲಕ್ಷ್ಮಣನಿಂದಲಾದರೂ ಆಗದು. ಈ ಕಾರ್ಯವನ್ನು ನಿಶ್ಚಯಿಸುವುದಕ್ಕೆ ನೀನೇ ಸಮರ್ಥನು. ಸುಗ್ರೀವ, ನಮಗೆ ನೀನೇ ಸಖನಲ್ಲದೆ ಮತ್ತೊಬ್ಬರಿಲ್ಲ. ನೀನು ಮಹಾಬ್ರಾಜ್ಞ, ಕಾಲೋಚಿತವನ್ನು ಬಲ್ಲವನು. ನನ್ನ ಕಾರ್ಯಸ್ಥಿತಿಯನ್ನು ನೀನು ಬಲ್ಲೆಯಾದ್ದರಿಂದ ನೀನು ಈ ಕಾರ್ಯವನ್ನು ನಿಶ್ಚಯಿಸುವುದಕ್ಕೆ ಸಮರ್ಥರಾದ ಕಪಿನಾಯಕರನ್ನು ಆಜ್ಞಾಪಿಸು. ನೀನು ಯಾವಾಗಲೂ ನನಗೆ ಹಿತವಾದ ಕಾರ್ಯದಲ್ಲಿ ಪ್ರೀತಿಯುಳ್ಳವನು. ನೀನು ಕಾರ್ಯಜ್ಞ ಎಂದು ನುಡಿದನು.

ಸುಗ್ರೀವನು ಮಹಾಪ್ರಸಾದವೆಂದು ಅಂಗೀಕರಿಸಿ ರಾಮಲಕ್ಷ್ಮಣರ ಸಂಮುಖದಲ್ಲಿ ಗುಡುಗಿನಂತೆ ಗಂಭೀರವಾದ ಧ್ವನಿಯುಳ್ಳ ವಿನತನೆಂಬ ಕಪಿನಾಯಕನನ್ನು ಕರೆದು ಹೀಗೆಂದನು: ಸೂರ್ಯಚಂದ್ರರ ಮಕ್ಕಳಾದ ಕಪಿನಾಯಕರನ್ನು ಕೂಡಿಕೊಂಡು ದೇಶಕಾಲಗಳನ್ನು ವಿಚಾರಿಸಿಕೊಂಡು ನೀತಿಯನ್ನರಿತು ಮೂಡಣ ದಿಕ್ಕಿಗೆ ಹೋಗಿ ಅಲ್ಲಿ ರಾವಣನಿರುವ ಸ್ಥಳವನ್ನು ಆರಿಸಿ ಸೀತಾದೇವಿಯನ್ನು ಕಂಡು ಬಾ. ನಿನ್ನ ಜೊತೆಯಲ್ಲಿ ಒಂದು ಲಕ್ಷ ವಾನರರು. ಆ ದಿಕ್ಕಿನಲ್ಲಿರುವ ಗಿರಿದುರ್ಗಗಳಲ್ಲಿಯೂ ವನಾಂತರಗಳಲ್ಲಿಯೂ ಸೀತೆಯನ್ನರಸು. ಬಳಿಕ ಭಾಗೀರಥೀ ಕೌಶಿಕೀ ಯಮುನಾ ನದೀತೀರಗಳಲ್ಲಿರುವ ಪರ್ವತಗಳಲ್ಲಿ ಹುಡುಕಿ ಮುಂದೆ ಸರಸ್ವತೀನದೀತೀರಕ್ಕೆ ಹೋಗಿ ನೋಡು. ಆಮೇಲೆ ಸಿಂಧೂನದಿಗೆ ಹೋಗಿ ಅಲ್ಲಿಂದ ಮುಂದೆ ವಜ್ರಮಣಿಯಂತೆ ನಿರ್ಮಲೋದಕವುಳ್ಳ ಶೋಣನದಿಗೆ ಹೋಗು. ಕಾಲಮಹೀ ಬ್ರಹ್ಮಮಾಲಾ ವಿದೇಹ ಮಾಳವ ಕಾಶಿ ಕೋಸಲ ಮಾಗಧ ಪುಂಡ್ರ ಅಂಗ ದೇಶಗಳಿಗೆ ಹೋಗಿ ಶ್ರೀರಾಮನ ಪಟ್ಟದ ಅರಸಿಯಾದ ಸೀತಾದೇವಿಯನ್ನು ಹುಡುಕಿನೋಡು. ಸಮುದ್ರ ತೀರಗಳಲ್ಲಿಯೂ ಮಂದರಗಿರಿ ಪರ್ವತದ ಶಿಖರಗಳಲ್ಲಿಯೂ ಮೀನುಗಳನ್ನೇ ಆಹಾರಮಾಡಿ ಕೊಂಡಿರುವವರಾಗಿಯೂ ಉದಕದೊಳಗೆ ಸಂಚರಿಸಿಕೊಂಡು ನರವ್ಯಾಘ್ರವೆಂಬ ಹೆಸರುಳ್ಳವರಾಗಿಯೂ ಹುಲಿಯಮುಖವುಳ್ಳವರಾಗಿಯೂ ಇರುವ ಕಿರಾತರಿರುವರು.

**ಮುಂದುವರಿಯುವುದು...**

# ನಾರಿಗಾಗಿ ಒಂದು ದಿನ




ಸಾಮಾಜಿಕ ಕಳಕಳಿ
**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

**ಮಹಿಳಾ ದಿನಾಚರಣೆ ಅತಿಮುಖ್ಯ ಜಗದಲ್ಲಿ**
**ಸಹನೆ ತುಂಬಿರುವ ಮಮತಾಮಯಿ ಹೆಣ್ಣು**
**ಕಹಿಯನುಂಡರು ಕೂಡ ನಗುಚೆಲ್ಲಿ ಜೀವಿಸುತ**
**ಸಿಹಿಯ ಹಂಚುತ ಜಗಕೆ ಲಕ್ಷ್ಮಿದೇವಿ....**

ಈ ಮೇಲಿನ ಮುಕ್ತಕದಂತೆ ಮಹಿಳಾ ದಿನಾಚರಣೆಯನ್ನು ಆಚರಿಸುವುದು ಮಹಿಳೆಗೆ ನೀಡುವಂತಹ ಒಂದು ಗೌರವ. ಆ ಗೌರವಕ್ಕೆ ಮಹಿಳೆ ಪಾತ್ರಳಾಗಿದ್ದಾಳೆ. ನಾವು ಸ್ತ್ರೀಯನ್ನು ನಾರಿ ಮಣಿ, ಮಹಿಳೆ, ಹೆಂಗಸು, ಹಲವಾರು ಹೆಸರುಗಳಲ್ಲಿ ಕರೆಯುವುದು ಎಲ್ಲರಿಗೂ ತಿಳಿದಂತ ವಿಷಯ. ನಾರಿಯು ಸಹನೆಯನ್ನು ತುಂಬಿರುವಂತಹ ಮಮತಾ ಮಯಿಯಾಗಿರುವ ಹೆಣ್ಣನ್ನು ಎಷ್ಟು ಗೌರವಿಸಿ ಸನ್ಮಾನಿಸಿದರು ಕಡಿಮೆಯೇ. ಅವಳಿಗೂ ಒಂದು ದಿನ ಸೀಮಿತವಾಗಿಟ್ಟಿರುವುದು ಸಂತಸದ ಸುದ್ದಿ. ಆಕೆಯ ಪ್ರತಿದಿನವೂ ಮಹಿಳಾ ದಿನಾಚರಣೆಯ ಆಗಿರುತ್ತದೆ.

ಎಷ್ಟೇ ನೋವುಗಳು ಬಂದರೂ ಸಹ ಅದನ್ನೆಲ್ಲ ನುಂಗುತ್ತಾ ಇತರರಿಗೆ ಸಂತೋಷವನ್ನು ನೀಡುವವಳು ಹೆಣ್ಣು. ಎಷ್ಟೇ ನೋವಿದ್ದರೂ ನಗು ಮುಖವನ್ನು ತೋರಿಸಿಕೊಂಡು ಕಹಿಯನ್ನು ತನ್ನಲ್ಲಿ ಇರಿಸಿಕೊಂಡು ಇತರರಿಗೆ ಸಿಹಿಯನ್ನು ಉಣಿಸುವವಳು ಹೆಣ್ಣು. ಎಲ್ಲೆಡೆಯು ನಗು ನಗುತ ಪಾಲಿಗೆ ಬಂದದ್ದೇ ಪಂಚಾಮೃತ ಎನ್ನುತ್ತಾ ತನ್ನ ಪಾಡಿಗೆ ತಾನು ಜೀವನವನ್ನು ಮಾಡಿಕೊಂಡು ಹೋಗುತ್ತಾಳೆ. ಅವಳು ತ್ಯಾಗಮಯಿ ಎನ್ನುವುದಕ್ಕೆ ಎಷ್ಟು ಪದಗಳು ಹೇಳಿದರು ಕಡಿಮೆ. ಹೇಳಬೇಕೆಂದರೆ ಬಹಳಷ್ಟು ಉದಾಹರಣೆಗಳ ಮಾಲೆಯೇ ಇವೆ.

ಪ್ರಸ್ತುತ ಜಗತ್ತಿನಲ್ಲಿ ಮಹಿಳಾ ದಿನಾಚರಣೆ ಬರ್ತಿದ್ದರೆ ಸಾಕು. ಮಹಿಳೆಯರನ್ನು ಹೊಗಳುವುದು ಎಷ್ಟು? ಆಕೆಯನ್ನು ಅಟ್ಟದ ಮೇಲೆ ಕೂರಿಸುವುದೆಷ್ಟು? ಮಹಿಳೆಯರ ಹೆಸರಿನಲ್ಲಿ ಮಾಡುವಂತಹ ಕಾರ್ಯಕ್ರಮಗಳೆಷ್ಟು? ಲೆಕ್ಕವೇ ಇಲ್ಲ. ಒಮ್ಮೆ ಯೋಚಿಸಿ ನೋಡಿ. ದಿನಾಚರಣೆಯಂದು ನೀಡುತ್ತಿರುವ ಗೌರವವನ್ನು ಅವರಿಗೆ ಮನೆಯಲ್ಲಿ ನೀಡುತ್ತಿದ್ದೇವೆಯೆ? ಅವರ ಜೀವನದಲ್ಲಿ ನಾವು ಉತ್ತಮ ಸ್ಥಾನಕ್ಕೆ ಹೋಗಲು ಅವಕಾಶ ನೀಡುತ್ತಿದ್ದೇವೆಯೆ? ಇಂದಿಗೂ ಸಹ ಮಹಿಳೆಯರ ಕಷ್ಟಗಳು ಹೇಳತೀರದು. ಮನೆಯ ಜವಾಬ್ದಾರಿಗಳನ್ನೆಲ್ಲ ಆ ಮಹಿಳೆ ತೆಗೆದುಕೊಂಡು ಗಂಡಿನಂತೆ ದುಡಿಯುತ್ತಿರುವ ಎಷ್ಟು ಕೋಟಿ ಉದಾಹರಣೆಗಳಿವೆ. ನಾರಿ ನಿನಗೆ ಯಾರು ಸಮ. ನಿನ್ನನ್ನು ಯಾರಿಗೂ ಹೋಲಿಸಲು ಸಾಧ್ಯವಿಲ್ಲ ಹೀಯಾಳಿಸುವ, ಹಿಂಜರಿಯುವ ಪ್ರಪಂಚದಲ್ಲಿ ನಿನ್ನ ಸ್ಥಾನ ಅಪಾರವಾದದ್ದು. ಯಾರು ಸಹ ನಿನ್ನ ಸ್ಥಾನವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಾರಿ ನೀನು ಅಬಲೆಯಲ್ಲ ಸಬಲೆ. ಇಂದು ಹಲವಾರು ಸಮಸ್ಯೆಗಳ ಮಧ್ಯೆಯೂ ಸಹ ನೀನು ಕೆಲಸಗಳಲ್ಲಿ ತೊಡಗಿ ಹಲವಾರು ಜವಾಬ್ದಾರಿಗಳನ್ನು ನಿಭಾಯಿಸುತ್ತಿರುವ ತ್ಯಾಗ ಮೂರ್ತಿ ನೀನು. ನಿನ್ನಲ್ಲಿರುವ ನೋವೆಷ್ಟು, ಹುಟ್ಟಿದಾಗಲಿಂದಲೇ ಕಷ್ಟ ಎಂಬುದು ನಿನ್ನ ಬೆನ್ನೇರಿದೆ. ನೋವು ನಲಿವುಗಳು ಎಷ್ಟೇ ಇದ್ದರೂ. ಜವಾಬ್ದಾರಿಯುತ ಜೀವನ ಮಾಡುವವಳು ನೀನೊಬ್ಬಳೇ. ಯಾವುದೇ ಮನೆಯಲ್ಲಿನ ಸಮಸ್ಯೆ ಆಗಿರಬಹುದು. ಮನೆಯ ಒಳಗಿನ ಕೆಲಸವಾಗಿರಬಹುದು. ಗಮನವಿಟ್ಟು ಮಾಡುವಂತಹ ವ್ಯಕ್ತಿ ನೀನೊಬ್ಬಳೇ. ಅರಿಯದ ಎಷ್ಟೋ ಜನರು ಹೆಣ್ಣು ಮಗುವಾಯಿತೆಂದರೆ ಹೆಂಡತಿ ಮಕ್ಕಳನ್ನೇ ಬಿಟ್ಟು ಹೋಗುತ್ತಾರೆ.ಅಂತಹ ಉದಾಹರಣೆಗಳು ಬಹಳಷ್ಟಿದೆ. ಅಂತಹ ಕ್ರೂರ ಮೃಗಗಳು ಗಂಡಿನ ಹೆಸರಿನಲ್ಲಿದ್ದಾರೆ. ಎಲ್ಲರೂ ಈ ಪ್ರಪಂಚದಲ್ಲಿ ಹಾಗೆ ಇದ್ದಾರೆ ಎಂದು ಹೇಳುತ್ತಿಲ್ಲ. ಗಂಡು ಹೆಣ್ಣು ಎಂಬ ಭೇದ ಭಾವದಲ್ಲಿ ಜೀವನ ಮಾಡುತ್ತಿರುವುದು ಇಂದಿಗೂ ಪ್ರಸ್ತುತ ಜಗತ್ತಿನಲ್ಲಿ ಇದೆ. ಅದರ ಅನುಭವವನ್ನು ಪ್ರತಿಯೊಬ್ಬರೂ ನೋಡುತ್ತಿರುತ್ತಾರೆ. ಮನೆಗೆ ಒಂದು ಹೆಣ್ಣು ಇಲ್ಲ ಎಂದರೆ ಅದು ಮನೆಯಾಗುವುದಿಲ್ಲ. ನರಕದ ಕೂಪವಾಗುತ್ತದೆ. ದಯಮಾಡಿ ನೋಡಿ ಹೆಣ್ಣು ಇಲ್ಲದ ಮನೆ ಮನೆಯಲ್ಲ. ಎಷ್ಟೋ ಗಂಡು ಮಕ್ಕಳಿರುವಂತಹ ಮನೆಗಳಲ್ಲಿ ನಾನು ನೋಡಿದ್ದೇನೆ. ಸೊಸೆ ಎಂದಿಗೂ ಮಗಳಾಗುವುದಿಲ್ಲ ಎಂದುಹೇಳುತ್ತಾರೆ ಮಗಳು ಎಂದು ಸೊಸೆಯಾಗುವುದಿಲ್ಲ. ಎನ್ನುವ ಭ್ರಮೆಯಲ್ಲಿ ಇರುತ್ತಾರೆ. ಆದರೂ ಹೆಣ್ಣು ಹೆಣ್ಣೇ. ಆಕೆ ಎಂದಿಗೂ ತನಗಾಗಿ ಏನನ್ನು ಬಯಸುವುದಿಲ್ಲ ಇತರರ ಸೇವೆಗಾಗಿ ಜೀವನವಿಡೀ ಮುಡುಪಾಗಿರುತ್ತಾಳೆ.



> **ಎಷ್ಟು ಹೇಳಿದರು ಕಡಿಮೆಯೆ**

ಮಹಿಳೆ ತನ್ನ ಜೀವನದಲ್ಲಿ ಮನೆಯ ನಿರ್ವಹಣೆಗಾಗಿ ಮನೆಯಲ್ಲೂ ಕೆಲಸವನ್ನು ಮಾಡುತ್ತಾ, ಹೊರಗಡೆಯೂ ದುಡಿಯುತ್ತಾ, ತನ್ನದೇ ಆದಂತಹ ಸೇವೆಯನ್ನು ನಿಷ್ಕಲ್ಮಶವಾಗಿ ಎಲ್ಲಾ ಕಡೆಯಲ್ಲೂ ಮಾಡುತ್ತಾಳೆ. ಅವಳ ಹುಟ್ಟು ಸೇವೆಗಾಗಿ ಎಂಬುದನ್ನು ತೋರಿಸುತ್ತಾಳೆ. ಜಗದ ನಿಯಮದಲ್ಲಿ ಜೀವನದ ಕಷ್ಟ ಸುಖಗಳನ್ನು ಎದುರಿಸುತ್ತ ಬಾಳುವವಳು ಹೆಣ್ಣು. ಎಷ್ಟೆಂದು ಹೇಳುವುದು ಅವಳ ಕಾರ್ಯದ ಉದಾಹರಣೆಯನ್ನು ಮನೆಯ ನಿರ್ವಹಣೆಗಾಗಿ ಮನೆಯಲ್ಲಿಯೇ ಎಷ್ಟು ವಿದ್ಯಾವಂತ ಮಹಿಳೆಯರು ಹೊರಗೂ ದುಡಿದು, ಮನೆಯಲ್ಲೂ ಸಹ ದುಡಿಯುತ್ತಾರೆ. ಮನೆಯಲ್ಲಿ ಇರುವಂತಹ ಅವಿದ್ಯಾವಂತ ಮಹಿಳೆಯರು ಸಹ ತಮ್ಮ ಕೈಯಲ್ಲಿ ಆಗುವ ಕರಕುಶಲ ಕೆಲಸಗಳನ್ನು ಮಾಡಿ ದುಡಿಯುತ್ತಿದ್ದಾರೆ. ಬಟ್ಟೆ ಹೊಲಿಯುವುದಾಗಿರಬಹುದು, ತೋರಣಗಳನ್ನು ಹಾಕುವುದಾಗಿರಬಹುದು, ಮೇಣಗಳನ್ನು ಮಾಡುವುದಾಗಿರಬಹುದು, ವಸ್ತುಗಳನ್ನು ಕಟ್ಟಿಕೊಡುವುದಾಗಿರಬಹುದು, ಊಟದ ಎಲೆಗಳನ್ನು ತಯಾರು ಮಾಡುವುದು ಹೀಗೆ ಹಲವಾರು ವಿಧದಲ್ಲಿ ಅವಿದ್ಯಾವಂತ ಮಹಿಳೆಯರು ಸಹ ದುಡಿಯುತ್ತಾರೆ.

ವಿದ್ಯಾವಂತ ಮಹಿಳೆಯರು ತಮ್ಮ ಕೈಲಾದಷ್ಟು ಅವರು ದುಡಿಯುತ್ತಾ ಕಾರ್ಖಾನೆಗಳಿಗೆ ಹೋಗುತ್ತಾರೆ. ಎಷ್ಟೇ ಮುಜುಗರದ ಪರಿಸ್ಥಿತಿ ಇದ್ದರೂ. ಯಾವುದಕ್ಕೂ ಹೆದರದೆ ಅಂಜದೆ ಕೆಲಸವನ್ನು ಮಾಡುತ್ತಾರೆ. ಒಟ್ಟಾರೆ ಹೆಣ್ಣಿಗೆ ಎಷ್ಟು ವಿಮರ್ಶೆಮಾಡಿ ಪಟ್ಟಿ ಮಾಡಿ ವಿಶೇಷತೆಗಳನ್ನು ಹೇಳಿದರು ಕಡಿಮೆಯೇ. ನಾರಿ ನಿನಗೆ ಯಾರು ಸಮ ನಿನ್ನ ತ್ಯಾಗಕ್ಕೆ ಬೆಲೆಯೇ ಇಲ್ಲ ಎಂಬ ಮಾತಿಗೆ ಸರಿಯಾದ ಅರ್ಥವನ್ನು ನೀಡುವವಳು ನಾರಿಯೆ ಒಟ್ಟಾರೆ ನಮ್ಮ ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್, ಕರ್ನಾಟಕವು ಮಹಿಳೆಯರ ಪ್ರತಿಭೆ ನೋವು ಸಂತೋಷಕ್ಕೆ ಸ್ಪಂದಿಸಿ ಕರಕುಶಲ ತರಬೇತಿ ನೀಡಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು ಸಂತಸದ ವಿಷಯವಾಗಿದೆ. ಮಹಿಳೆಯರ ತ್ಯಾಗಕ್ಕೆ ಅವರ ಕೆಲಸಕ್ಕೆ ನಿಮಗೊಂದು ನನ್ನ ನಮಸ್ಕಾರ. ಹೆಣ್ಣಿನ ಬಗ್ಗೆ ಹೇಳುತ್ತಾ ಹೋದರೆ ಎಷ್ಟು ಹೇಳಿದರು ಕಡಿಮೆಯೆ ಎಂದು ಹೇಳಬಹುದು. ಧನ್ಯವಾದಗಳು ಜೈ ಹಿಂದ್ ಜೈ ಭಾರತ ಮಾತೆ.

# ಮಾರ್ಕೆಟ್‌ನಲ್ಲಿ ತಾಜಾ ನೈಸರ್ಗಿಕ ಸಿಹಿ ಸಪೋಟಾವನ್ನು ಹೇಗೆ ಆರಿಸುವುದು

ಸಪೋಟ ಅಥವಾ ಚಿಕ್ಕು ಹಣ್ಣು ಎಂದರೆ ಸಾಮಾನ್ಯವಾಗಿ ಎಲ್ಲರಿಗೂ ಕೂಡ ಇಷ್ಟವಾಗುತ್ತದೆ. ತನ್ನಲ್ಲಿ ನೈಸರ್ಗಿಕ ಸಿಹಿ ಗುಣಗಳನ್ನು ಒಳಗೊಂಡಿರುವ ಈ ಹಣ್ಣುಗಳು ಸಾಮಾನ್ಯವಾಗಿ ಜನವರಿಯಿಂದ ಮೇ-ಜೂನ್ ತಿಂಗಳವರೆಗೂ ಕೂಡ ಮಾರುಕಟ್ಟೆಯಲ್ಲಿ ಕಂಡು ಬರುತ್ತದೆ. ವಿಶೇಷವಾಗಿ ಬೇಸಿಗೆಯ ಆರಂಭದಲ್ಲಿ ಮಾರುಕಟ್ಟೆಯಲ್ಲಿ ಈ ಹಣ್ಣುಗಳು ಹೇರಳವಾಗಿ ಕಂಡುಬರುತ್ತದೆ. ಪ್ರಮುಖವಾಗಿ ಈ ಹಣ್ಣುಗಳಲ್ಲಿ ವಿಟಮಿನ್ ಎ, ವಿಟಮಿನ್ ಸಿ, ನಾರಿನಾಂಶ ಮತ್ತು ಖನಿಜಾಂಶಗಳು ಹೇರಳವಾಗಿ ಕಂಡುಬರುವುದರಿಂದ, ಈ ಹಣ್ಣುಗಳು ಆರೋಗ್ಯಕ್ಕೆ ಬಹಳ ಒಳ್ಳೆಯದು ಎನ್ನಲಾಗುತ್ತದೆ.

ಆದರೆ ಇಷ್ಟೆಲ್ಲಾ ಪ್ರಯೋಜನಗಳನ್ನು ಒಳಗೊಂಡಿರುವ ಈ ಹಣ್ಣನ್ನು ಖರೀದಿಸುವ ಮುನ್ನ ಕೆಲವೊಂದು ಅಂಶಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಬಹಳ ಮುಖ್ಯ. ಅದರಲ್ಲೂ ಮ ಉತ್ತಮ ಗುಣಮಟ್ಟ, ನೈಸರ್ಗಿಕ ಸಿಹಿಯಾಗಿರುವ ಇಂತಹ ಹಣ್ಣುಗಳನ್ನು ಖರೀದಿಸುವ ಮುನ್ನ ಈ ಹಣ್ಣಿನ ಬಣ್ಣ, ಮೃದುತ್ವ ಮತ್ತು ವಾಸನೆಯನ್ನು ಪರೀಕ್ಷಿಸುವುದು ಮುಖ್ಯ. ಯಾಕೆಂದ್ರೆ, ದುಬಾರಿ ಬೆಲೆ ಕೊಟ್ಟು ಈ ಹಣ್ಣನ್ನು ಖರೀದಿಸುವಾಗ ಕೆಲವೊಂದು ಮುನ್ನೆಚ್ಚರಿಕೆ ಗಳನ್ನು ತೆಗೆದುಕೊಳ್ಳದಿದ್ದರೆ, ಅದು ಬೇಗನೆ ಹಾಳಾಗಬಹುದು ಅಥವಾ ರುಚಿ ಸಪ್ಪೆಯಾಗಬಹುದು.

**ಮೊದಲಿಗೆ ಈ ಹಣ್ಣಿನ ಬಣ್ಣ ಮತ್ತು ವಿನ್ಯಾಸಕ್ಕೆ ಗಮನ ಕೊಡಿ:** ತಾಜಾ ಸಪೋಟಾ ತಿಳಿ ಕಂದು ಅಥವಾ ಮಣ್ಣಿನ ಬಣ್ಣವನ್ನು ಹೊಂದಿರಬೇಕು. ಅದು ತುಂಬಾ ಗಾಢ ಅಥವಾ ಕಪ್ಪು ಬಣ್ಣದ್ದಾಗಿದ್ದರೆ, ಅದು ಅತಿಯಾಗಿ ಹಣ್ಣಾಗಿರಬಹುದು ಅಥವಾ ಹಾಳಾಗಿರಬಹುದು. ಅದರ ಮೇಲ್ಮೈ ಅತಿಯಾದ ಸುಕ್ಕುಗಳು ಅಥವಾ ಕಲೆಗಳಿಲ್ಲದೆ ನಯವಾಗಿರಬೇಕು.

**ಲಘುವಾಗಿ ಒತ್ತುವ ಮೂಲಕ:** ಲಘುವಾಗಿ ಒತ್ತುವ ಮೂಲಕ ಪರೀಕ್ಷಿಸಿ. ಸಪೋಟಾ ಸ್ವಲ್ಪ ಮೃದುವಾಗಿದ್ದರೆ, ಅದು ತಿನ್ನಲು ಸಿದ್ಧವಾಗಿದೆ. ಅದು ತುಂಬಾ ಗಟ್ಟಿಯಾಗಿದ್ದರೆ, ಅದು ಹಣ್ಣಾಗಿಲ್ಲ, ಮತ್ತು ಅದು ತುಂಬಾ ಮೃದುವಾಗಿದ್ದರೆ, ಅದು ಹಾಳಾಗುವ ಸಾಧ್ಯತೆಯಿದೆ. ಒತ್ತುವಾಗ ಹಣ್ಣು ಮುರಿಯದಂತೆ ಎಚ್ಚರವಹಿಸಿ.

**ಕಾಂಡವನ್ನು ಪರಿಶೀಲಿಸಿ:** ಕಾಂಡದ ಕಡೆಗೆ ಗಮನ ಕೊಡಿ. ಯಾವುದೇ ಸೋರಿಕೆ ಅಥವಾ ವಾಸನೆ ಇದ್ದರೆ, ಅದು ಹಾಳಾಗಿದೆ ಎಂದರ್ಥ ತಾಜಾ ಸಪೋಟಾ ಯಾವುದೇ ಸೋರಿಕೆಯನ್ನು ಹೊಂದಿರಬಾರದು.

**ಹಣ್ಣಿನ ಪರಿಮಳವನ್ನು ಗುರುತಿಸಿ:** ತಾಜಾ ಚಿಕೂ ಸೌಮ್ಯವಾದ, ಸಿಹಿ ಪರಿಮಳವನ್ನು ಹೊಂದಿರುತ್ತದೆ. ಅದು ಹುಳಿ, ಅಸಾಮಾನ್ಯ ವಾಸನೆಯನ್ನು ಹೊಂದಿದ್ದರೆ, ಅದನ್ನು ಖರೀದಿಸು ವುದನ್ನು ತಪ್ಪಿಸಿ. ಇದು ಹಾಳಾಗುವಿಕೆಯ ಸಂಕೇತವಾಗಿದೆ.

**ತುಂಬಾ ದೊಡ್ಡದಾದ, ತುಂಬಾ ಚಿಕ್ಕದಾದ ಹಣ್ಣುಗಳನ್ನು ತಪ್ಪಿಸಿ:** ಮಧ್ಯಮ ಗಾತ್ರದ ಚಿಕೂಗಳು ಉತ್ತಮ. ತುಂಬಾ ದೊಡ್ಡ ಹಣ್ಣುಗಳು ಸಾಮಾನ್ಯವಾಗಿ ಒಳಗೆ ತುಂಬಾ ಮೃದುವಾಗಿರಬಹುದು ಅಥವಾ ಹಾನಿಗೊಳಗಾಗಬಹುದು, ಆದರೆ ತುಂಬಾ ಚಿಕ್ಕವುಗಳು ಹಣ್ಣಾಗದಿರಬಹುದು.

**ಪ್ಯಾಕ್ ಮಾಡಿದ ಸಪೋಟಾವನ್ನು ಖರೀದಿಸುವಾಗ ಎಚ್ಚರಿಕೆ ವಹಿಸಿ** ನೀವು ಪ್ಯಾಕ್ ಮಾಡಿದ ಸಪೋಟಾವನ್ನು ಖರೀದಿಸುತ್ತಿದ್ದರೆ, ಪ್ಯಾಕೇಜ್ ತೇವಾಂಶ ಅಥವಾ ನೀರಿನಿಂದ ಮುಕ್ತವಾಗಿದೆ ಎಂದು ಖಚಿತಪಡಿಸಿಕೊಳ್ಳಿ. ತೇವಾಂ ಶವು ಹಣ್ಣು ಬೇಗನೆ ಕೊಳೆಯಲು ಕಾರಣವಾಗಬಹುದು. ಪ್ಯಾಕೇಜ್ ಅನ್ನು ಬಿಗಿಯಾಗಿ ಮುಚ್ಚಬೇಕು.

**ಋತುವನ್ನು ಮನಸ್ಸಿನಲ್ಲಿಟ್ಟುಕೊಳ್ಳಿ:** ಸಪೋಟಾ ಋತುವು ಸಾಮಾನ್ಯವಾಗಿ ಅಕ್ಟೋಬರ್ ನಿಂದ ಮಾರ್ಚ್ ವರೆಗೆ ಇರುತ್ತದೆ. ಈ ಸಮಯದಲ್ಲಿ ಲಭ್ಯವಿರುವ ಹಣ್ಣುಗಳು ತಾಜಾ ಮತ್ತು ಸಿಹಿಯಾಗಿರುತ್ತವೆ. ಆಫ್-ಸೀಸನ್ ಹಣ್ಣುಗಳು ಹೆಚ್ಚು ದುಬಾರಿ ಮತ್ತು ಕಡಿಮೆ ರುಚಿಕರವಾಗಿರುತ್ತವೆ

**ಸಂಗ್ರಹಣೆ ಮಾಡುವ ವಿಧಾನ:** ಖರೀದಿಸಿದ ನಂತರ, ಕೋಣೆಯ ಉಷ್ಣಾಂಶದಲ್ಲಿ ಸಪೋಟಾವನ್ನು ಸಂಗ್ರಹಿಸಿ. ಹಣ್ಣು ಹಣ್ಣಾಗದಿದ್ದರೆ, ಅದನ್ನು ವೃತ್ತಪತ್ರಿಕೆಯಲ್ಲಿ ಸುತ್ತಿ 2-3 ದಿನಗಳವರೆಗೆ ಸಂಗ್ರಹಿಸಿ. ಮಾಗಿದ ಸಪೋಟಾವನ್ನು ಹೆಚ್ಚು ಕಾಲ ತಾಜಾವಾಗಿಡಲು ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸಬೇಕು. ಸಪೋಟಾ ಖರೀದಿಸುವಾಗ ಈ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದರಿಂದ ಹಾಳಾದ, ಸಪ್ಪೆಯಾದ ಹಣ್ಣನ್ನು ತಪ್ಪಿಸಲು ಸಹಾಯ ಮಾಡುತ್ತದೆ. ತಾಜಾ, ಸಿಹಿಯಾದ ಸಪೋಟಾ ರುಚಿಯನ್ನು ಹೆಚ್ಚಿಸುವುದಲ್ಲದೆ ಆರೋಗ್ಯ ಪ್ರಯೋಜನಗಳನ್ನು ಸಹ ಹೊಂದಿದೆ. ಮುಂದಿನ ಬಾರಿ ನೀವು ಮಾರುಕಟ್ಟೆಗೆ ಹೋದಾಗ ಈ ಸಲಹೆಗಳನ್ನು ನೆನಪಿಡಿ.



# ಗರ್ಭಾವಸ್ಥೆಯಲ್ಲಿ ಬೆನ್ನುನೋವು ಯಾಕೆ ಕಾಡುತ್ತದೆ?


ಗರ್ಭಧಾರಣೆಯು ಮಹಿಳೆಯ ದೇಹವನ್ನು ಅಸಾಧಾರಣ ರೀತಿಯಲ್ಲಿ ಪರಿವರ್ತಿಸುತ್ತದೆ, ಬೆಳೆಯುತ್ತಿರುವ ಹೊಟ್ಟೆಯಿಂದ ಹಿಡಿದು ಬದಲಾಗುತ್ತಿರುವ ಹಾರ್ಮೋನುಗಳ ವರೆಗೆ, ಆದರೆ ಅವರ ಬೆನ್ನುಮೂಳೆಯು ಗಮನಿಸದೆ ಹೋಗುವ ಹೆಚ್ಚಿನ ಬದಲಾವಣೆಗಳನ್ನು ಸದ್ದಿಲ್ಲದೆ ಹೊತ್ತುಕೊಳ್ಳುತ್ತದೆ. ಹೊಟ್ಟೆಯು ವಿಸ್ತರಿಸಿ ಹೆರಿಗೆಗೆ ಸಿದ್ಧವಾಗಲು ಅಸ್ಥಿರಜ್ಜುಗಳು ಮೃದುವಾಗುತ್ತಿದ್ದಂತೆ, ಕೆಳ ಬೆನ್ನು ಮೂಲತಃ ವಿನ್ಯಾಸಗೊಳಿಸದ ಹೊರೆಯನ್ನು ಹೊರಲು ಪ್ರಾರಂಭಿಸುತ್ತದೆ.ಗರ್ಭಾವಸ್ಥೆಯಲ್ಲಿ ಮಹಿಳೆಯರಿಗೆ ನಾನಾ ರೀತಿಯ ಆರೋಗ್ಯ ಸಮಸ್ಯೆಗಳು ಎದುರಾಗುತ್ತದೆ ಅವುಗಳಲ್ಲಿ ಬೆನ್ನು ನೋವು ಕೂಡಾ ಒಂದು. ಕೆಲವೊಮ್ಮೆ ಈ ಬೆನ್ನುನೋವು ತುಂಬಾನೇ ತೀವ್ರವಾಗಿರುತ್ತದೆ. ಗರ್ಭಿಣಿಯರು ಈ ಬೆನ್ನು ನೋವಿನ ಸಮಸ್ಯೆಯನ್ನು ಯಾವ ರೀತಿ ನಿವಾರಿಸಬಹುದು ಎನ್ನುವುದನ್ನು ತಿಳಿಯೋಣ.

**ಅಸ್ಥಿರಜ್ಜುಗಳು, ಕೀಲುಗಳು ಸಡಿಲಗೊಳ್ಳಲು ಕಾರಣವಾಗುತ್ತವೆ:** ಗರ್ಭಾವಸ್ಥೆಯಲ್ಲಿ ಬೆನ್ನು ನೋವು ಸಾಮಾನ್ಯ ಸಮಸ್ಯೆಗಳಲ್ಲಿ ಒಂದಾಗಿದೆ, ಇದು ಮಗುವಿನ ಬೆಳವಣಿಗೆಗೆ ದೇಹವು ಹೊಂದಿಕೊಳ್ಳುವುದರಿಂದ ಅನೇಕ ಮಹಿಳೆಯರ ಮೇಲೆ ಪರಿಣಾಮ ಬೀರುತ್ತದೆ. ಗರ್ಭಾವಸ್ಥೆಯಲ್ಲಿ ಹಾರ್ಮೋನುಗಳಲ್ಲಿನ ಬದಲಾವಣೆಗಳು ಅಸ್ಥಿರಜ್ಜುಗಳು, ಕೀಲುಗಳು ಸಡಿಲಗೊಳ್ಳಲು ಕಾರಣವಾಗುತ್ತವೆ, ಆದರೆ ಗರ್ಭಾಶಯದ ಹೆಚ್ಚುತ್ತಿರುವ ತೂಕವು ದೇಹದ ಗುರುತ್ವಾಕರ್ಷಣೆಯ ಕೇಂದ್ರವನ್ನು ಬದಲಾಯಿಸುತ್ತದೆ. ಇದು ಬೆನ್ನು, ಶ್ರೋಣಿಯ ಸ್ನಾಯುಗಳ ಮೇಲೆ ಹೆಚ್ಚುವರಿ ಒತ್ತಡವನ್ನು ಉಂಟುಮಾಡಬಹುದು, ಇದು ವಿಶೇಷವಾಗಿ ನಂತರದ ತಿಂಗಳುಗಳಲ್ಲಿ ಅಸ್ವಸ್ಥತೆಗೆ ಕಾರಣವಾಗುತ್ತದೆ ಎನ್ನುತ್ತಾರೆ ಬೆಂಗಳೂರಿನ ಯಲಹಂಕದಲ್ಲಿನ ಸ್ಪರ್ಶ ಆಸ್ಪತ್ರೆಯ ಪ್ರಸೂತಿ ತಜ್ಞೆ ಡಾ. ಸುನೀತಾ ರೆಡ್ಡಿ ಜಿ.

**ಗರ್ಭಾವಸ್ಥೆಯಲ್ಲಿ ಸಮತೋಲನ ದೊಂದಿಗೆ ನಿಲ್ಲುವುದು ಹೇಗೆ:** ದೀರ್ಘಕಾಲ ನಿಲ್ಲುವುದು ಕೆಳ ಬೆನ್ನಿನ ಅಸ್ವಸ್ಥತೆಯನ್ನು ತೀವ್ರಗೊಳಿಸುತ್ತದೆ. ಅನೇಕ ಗರ್ಭಿಣಿಯರು ತಿಳಿಯದೆ ತಮ್ಮ ತೂಕವನ್ನು ಒಂದು ಕಾಲಿನ ಮೇಲೆ ಬದಲಾಯಿಸುತ್ತಾರೆ, ಇದು ಬೆನ್ನುಮೂಳೆಯ ಅಸಮತೋಲನವನ್ನು ಹೆಚ್ಚಿಸುತ್ತದೆ.



# ಮಕ್ಕಳೇ ಈ ಕೆಲಸಗಳನ್ನು ಮಾಡಿ- ಪರೀಕ್ಷೆ ಸುಲಭ...



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಮಕ್ಕಳ ಶೈಕ್ಷಣಿಕ ಬೆಳವಣಿಗೆಯಲ್ಲಿ ಶಾಲಾ ಪರೀಕ್ಷೆಗಳು ಪ್ರಮುಖ ಹಂತವಾಗಿದೆ. ಮಕ್ಕಳ ಪರೀಕ್ಷೆ ಒಂದರ್ಥದಲ್ಲಿ ಪೋಷಕರ ಪರೀಕ್ಷೆ. ಮಕ್ಕಳಿಗೆ ಓದುವ ಒತ್ತಡ ಅವರಿಗಿರುವಷ್ಟೇ ಪೋಷಕರಿಗೂ ಇರುತ್ತದೆ. ವರ್ಷವಿಡೀ ಚೆನ್ನಾಗಿ ಓದುವ ಮಗು ಇದ್ದರೆ ಪರವಾಗಿಲ್ಲ, ಇಲ್ಲದಿದ್ದರೆ, ಪರೀಕ್ಷೆಗಳು ಹತ್ತಿರವಾದಾಗ ಒತ್ತಡದಲ್ಲಿ ಓದುವುದರಿಂದ ಮಕ್ಕಳಿಗೆ ಏನೂ ಅರ್ಥವಾಗುವುದಿಲ್ಲ ಮತ್ತು ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಮಕ್ಕಳು ಹೇಗೆ ಉತ್ತರಿಸುತ್ತಾರೆ ಎಂದು ಪಾಲಕರು ಚಿಂತಿಸತೊಡಗುತ್ತಾರೆ.

10, 12ನೇ ತರಗತಿಯಂತಹ ಮಹತ್ವದ ಪರೀಕ್ಷೆಗಳಿದ್ದರೆ ಪೋಷಕರಿಗೆ ಹೆಚ್ಚು ಒತ್ತಡವಿರುತ್ತದೆ. ಇದನ್ನು ತಡೆಯಲು ಮತ್ತು ಕೊನೆಯ ಹಂತದಲ್ಲಿ ಅಂದರೆ ಅಂತಿಮ ಪರೀಕ್ಷೆಯ ಸಂದರ್ಭದಲ್ಲಿ, ಮಕ್ಕಳ ಆರೋಗ್ಯ ಮತ್ತು ಮಾನಸಿಕ ಆರೋಗ್ಯವು ಉತ್ತಮವಾಗಿ ಉಳಿಯಲು ಪೋಷಕರು ಕೆಲವು ವಿಷಯಗಳತ್ತ ಗಮನ ಹರಿಸಬೇಕು. ಅವು ಏನೆಂದು ನೋಡೋಣ...

**ಆಹಾರ ಪದ್ಧತಿ...:** ಪರೀಕ್ಷೆಯ ಅವಧಿಯಲ್ಲಿ ಮಕ್ಕಳ ಆಹಾರವು ಸಾಧ್ಯವಾದಷ್ಟು ಪೌಷ್ಟಿಕವಾಗಿರಬೇಕು. ಈ ಆಹಾರವು ತಾಜಾ, ಹಗುರವಾಗಿರುವಂತೆ ಎಚ್ಚರಿಕೆ ವಹಿಸಬೇಕು. ಆಹಾರದ ಕಾರಣದಿಂದಾಗಿ ಜೀರ್ಣಕಾರಿ ಸಮಸ್ಯೆಗಳು ಆಗದಂತೆ ಎಚ್ಚರಿಕೆ ವಹಿಸಬೇಕು. ನಿಮ್ಮ ಆಹಾರದಲ್ಲಿ ನೀರು, ದ್ರವಗಳನ್ನು ಸೇರಿಸಲು ಮರೆಯದಿರಿ.

**ನಿದ್ರೆ...:** ಸಾಮಾನ್ಯವಾಗಿ, ಅಧ್ಯಯನದ ಒತ್ತಡ ಬಂದಾಗ, ಮಕ್ಕಳು ತಡ ರಾತ್ರಿಯವರೆಗೂ ಎಚ್ಚರವಾಗಿರುತ್ತಾರೆ ಅಥವಾ ಬೆಳಿಗ್ಗೆ ಬೇಗ ಎದ್ದು ಅಧ್ಯಯನ ಮಾಡುತ್ತಾರೆ. ಇದರಿಂದ ಓದುತ್ತಿದ್ದರೂ ಸರಿಯಾಗಿ ಪರೀಕ್ಷೆಯ ಸಮಯದಲ್ಲಿ ನಿದ್ದೆ ಬರುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಮಕ್ಕಳು ರಾತ್ರಿಯಲ್ಲಿ 7 ರಿಂದ 8 ಗಂಟೆಗಳ ಪೂರ್ಣ ನಿದ್ರೆ ಪಡೆಯುತ್ತಾರೆ ಎಂದು ಖಚಿತಪಡಿಸಿಕೊಳ್ಳಿ. ತಡರಾತ್ರಿ ಹಾಗೂ ನಸುಕಿನಲ್ಲಿ ಜಾಗರಣೆ ಮಾಡಿದರೆ ಮಾತ್ರ ಚೆನ್ನಾಗಿ ಓದಿದಂತೆ ಎಂಬ ತಪ್ಪು ಕಲ್ಪನೆ ಬೇಡ.

**ಮಾನಸಿಕ ಒತ್ತಡ...:** ಮಕ್ಕಳೊಂದಿಗೆ ಸಂವಹನವನ್ನು ಮುಂದುವರಿಸಿ ಇದರಿಂದ ಅವರು ಪರೀಕ್ಷೆಗಳ ಬಗ್ಗೆ ಒತ್ತಡಕ್ಕೆ ಒಳಗಾಗುವುದಿಲ್ಲ ಮತ್ತು ಉತ್ತಮ ಅಂಕಗಳನ್ನು ಪಡೆಯುತ್ತಾರೆ. ಮಕ್ಕಳ ಆತ್ಮವಿಶ್ವಾಸ ಹೆಚ್ಚುತ್ತದೆ, ಪರೀಕ್ಷೆಗಳು ಚೆನ್ನಾಗಿರುತ್ತವೆ. ಸಕಾರಾತ್ಮಕ ಭಾವನೆಯನ್ನು ಸೃಷ್ಟಿಸಲು ಸಕಾರಾತ್ಮಕ ವಿಷಯಗಳನ್ನು ಚರ್ಚಿಸಿ.

**ಓದಿನ ಹೊರೆತು ಬಿಡುವಿನ ಸಮಯ...:** ಪರೀಕ್ಷೆ ಇದೆ ಎಂದ ಮಾತ್ರಕ್ಕೆ 24 ಗಂಟೆಗಳ ಕಾಲ ಮಕ್ಕಳ ಕಣ್ಣ ಮುಂದೆ ಪುಸ್ತಕ ಇರಬೇಕಿಲ್ಲ. ಆದ್ದರಿಂದ 2 ರಿಂದ 3 ಗಂಟೆಗಳ ಕಾಲ ನಿರಂತರವಾಗಿ ಅಧ್ಯಯನ ಮಾಡಿದ ನಂತರ, ಅರ್ಧ ಗಂಟೆ ವಿರಾಮವನ್ನು ತೆಗೆದುಕೊಳ್ಳುವುದು ಅವಶ್ಯಕ. ಅಂತಹ ವಿರಾಮ ತೆಗೆದುಕೊಂಡರೆ ಮಾತ್ರ ಅಧ್ಯಯನದತ್ತ ಗಮನ ಹರಿಸಬಹುದು. ಇಲ್ಲವಾದರೆ, ಕಣ್ಣೆದುರು ಸತತ ಪಠ್ಯಪುಸ್ತಕಗಳಿದ್ದರೆ ಅಧ್ಯಯನ ನಡೆಯುವುದಿಲ್ಲ ಮಾತ್ರವಲ್ಲ, ವಿನಾಕಾರಣ ಒತ್ತಡವೂ ಮುಂದುವರಿಯುತ್ತದೆ. ಮಕ್ಕಳೊಂದಿಗೆ ಆಟವಾಡುವುದು, ಬೇರೆ ಬೇರೆ ವಿಷಯದ ಮೇಲೆ ಹರಟೆ ಹೊಡೆಯುವುದು, ಬಯಲಿನಲ್ಲಿ ವಿಹಾರಕ್ಕೆ ಹೋಗುವುದು ಅತ್ಯಗತ್ಯ. ಇದನ್ನು ಮಾಡಬೇಕು.



**ಸಿದ್ಧತೆಯಲ್ಲಿ ವಿವಿಧತೆ ಇರಲಿ:** ಮಕ್ಕಳು ಓದಿಗಾಗಿ ಬೇರೆ ಬೇರೆ ಪದ್ಧತಿಗಳನ್ನು ರೂಢಿಸಿಕೊಳ್ಳಲಿ. ಉದಾಹರಣೆಗೆ, ಕೆಲ ಸಮಯ ಸ್ವತಃ ಒಂಟಿಯಾಗಿ ಓದುವುದು, ಸ್ವಲ್ಪ ಹೊತ್ತು ನಿಮ್ಮ ಮುಂದೆ ಅಂದರೆ ತಂದೆ, ತಾಯಿ ಅಥವಾ ಅಣ್ಣ-ಅಕ್ಕಂದಿರ ಮುಂದೆ ಗಟ್ಟಿಯಾಗಿ ಓದುವುದು, ಸಹಪಾಠಿಗಳೊಂದಿಗೆ ಓದಿದ್ದನ್ನು ಚರ್ಚಿಸುವುದು, ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವುದು, ಇತ್ಯಾದಿ. ಇದರಿಂದ ಪಾಠಗಳು ಸರಿಯಾಗಿ ಅರ್ಥವಾಗುತ್ತವೆ ಹಾಗೂ ಜ್ಞಾಪಿಸಿಕೊಳ್ಳಲು ಸಹಾಯವಾಗುತ್ತದೆ.

**ಪರೀಕ್ಷೆಗಳ ಉದ್ದೇಶ ತಿಳಿದುಕೊಳ್ಳುವುದು:** ಕೇವಲ ಪರೀಕ್ಷೆಗಾಗಿ ಓದುವ ಉದ್ದೇಶಕ್ಕಿಂತಲೂ ವಿಷಯಗಳನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಓದುವುದನ್ನು ರೂಢಿಸಿಕೊಳ್ಳಬೇಕು.

**ಪರೀಕ್ಷೆಗಳ ಬಗ್ಗೆ ಆತಂಕ ಬೇಡ:** ಪರೀಕ್ಷೆಗಳ ಬಗ್ಗೆ ಮಕ್ಕಳ ಮನಸ್ಸಿನಲ್ಲಿ ಭಯ, ಆತಂಕ ಹುಟ್ಟಿಸಬೇಡಿ. ಪರೀಕ್ಷೆಗಳು ಒತ್ತಡದ ಹಾಗೂ ವಲ್ಲದ ಸಮಯಗಳೆಂದು ಪರಿಗಣಿಸದೆ ಅವುಗಳು ತಮ್ಮನ್ನು ತಾವು ರೂಪಿಸಿಕೊಳ್ಳಲು ಉತ್ತಮ ಅವಕಾಶ ಎಂಬುದನ್ನು ಮಕ್ಕಳ ಮನಸ್ಸಿನಲ್ಲಿ ಬಿಂಬಿಸಿ. ಕ್ರಿಕೆಟ್ ಸ್ಪರ್ಧೆಗಾಗಿ ಮಕ್ಕಳು ಹೇಗೆ ಉತ್ಸಾಹದಿಂದ ಸಿದ್ಧತೆಗಳನ್ನು ಮಾಡಿ ಸ್ಪರ್ಧೆಗಳನ್ನು ಕ್ರೀಡಾತ್ಮಕವಾಗಿ ಆನಂದಿಸುತ್ತಾರೋ ಹಾಗೆಯೇ ಪರೀಕ್ಷೆಗಳನ್ನು ಕೂಡ ಪರಿಗಣಿಸಬೇಕು.

### ಬಿಜೆಪಿ ವತಿಯಿಂದ ಬೂತ್ ಮಟ್ಟದ ಕಾರ್ಯಕರ್ತರು ಹಾಗೂ ವಿಸ್ತಾರಕರಿಗೆ ಏರ್ಪಡಿಸಿದ್ದ ಅಭಿನಂದನಾ ಸಭೆ

# ಉಪಚುನಾವಣೆ ಗೆದ್ದರೆ ಬಿಜೆಪಿ ಅಧಿಕಾರಕ್ಕೆ: ರಾಧಾಮೋಹನ್ ದಾಸ್

• ಉದಯವಾಹಿನಿ, ದಾವಣಗೆರೆ

ರಾಜ್ಯದಲ್ಲಿ 2028ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯನ್ನು ಗೆಲ್ಲಬೇಕು. ಆಗ ಮಾತ್ರ ಮುಂದಿನ ಎರಡೂವರೆ ವರ್ಷಗಳಲ್ಲಿ ಬಿಜೆಪಿ ಸರ್ಕಾರ ರಚಿಸುವುದು ಖಚಿತ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಅಭಿಪ್ರಾಯಪಟ್ಟರು. ಇಲ್ಲಿನ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ ಬಿಜೆಪಿ ವತಿಯಿಂದ ಬೂತ್ ಮಟ್ಟದ ಕಾರ್ಯಕರ್ತರು ಹಾಗೂ ವಿಸ್ತಾರಕರಿಗೆ ಏರ್ಪಡಿಸಿದ್ದ ಅಭಿನಂದನಾ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಮುಂದಿನ ಸಾರ್ವತ್ರಿಕ ಚುನಾವಣೆಯ ಬಳಿಕ ಬಿಜೆಪಿ ಅಧಿಕಾರಕ್ಕೆ ಬರುವ ಸಂಪೂರ್ಣ ವಿಶ್ವಾಸವಿದೆ. ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯಬೇಕು ಎಂದು ಬಯಸುವ ಕಾರ್ಯಕರ್ತರು, ನಾಯಕರು ಉಪಚುನಾವಣೆಯಲ್ಲಿ ಶ್ರಮಪಟ್ಟು ದುಡಿಯಬೇಕು. ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷವನ್ನು ಗೆಲ್ಲಿಸಬೇಕು ಎಂದು ಹೇಳಿದರು.

ಕ್ಷೇತ್ರದ ಪ್ರತಿ ಬೂತ್‌ಗೆ ಪಕ್ಷದ 3 ಕಾರ್ಯಕರ್ತರನ್ನು ನಿಯೋಜಿಸಲಾಗಿದೆ. ಇಷ್ಟಿದ್ದೂ ಚುನಾವಣೆಯಲ್ಲಿ ಪಕ್ಷ ಸೋಲು ಕಾಣಬಾರದು. ಪ್ರತಿಯೊಬ್ಬರು ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಯಾವುದೇ ಕಾರಣಕ್ಕೂ ಬೂತ್ ಬಿಟ್ಟು ಕದಲಬಾರದು. ಕಮಲದ ಗುರುತು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಗಾಗಿ ಕೆಲಸ ಮಾಡಬೇಕು ಎಂದು ಸೂಚಿಸಿದರು. ಬಿಜೆಪಿಯ ಗೆಲುವನ್ನು ಅಭ್ಯರ್ಥಿ ನಿರ್ಧರಿಸುವುದಿಲ್ಲ. ಪಕ್ಷ ನಿರ್ಧರಿಸುವ ಅಭ್ಯರ್ಥಿಯ ಪರವಾಗಿ ಎಲ್ಲರೂ ಕೆಲಸ ಮಾಡಬೇಕು. ಬಿಜೆಪಿ ಕಾರ್ಯಕರ್ತರ ಪಕ್ಷವೇ ಹೊರತು ನಾಯಕರ ಪಕ್ಷವಲ್ಲ. ಬೀದಿ ಸುತ್ತಿ, ಮನೆಗಳಿಗೆ ಭೇಟಿ ನೀಡಿ ಮತಯಾಚನೆ ಮಾಡುವ ಕಾರ್ಯಕರ್ತರಿಗೆ ಶಾಸಕನನ್ನು ಸೃಷ್ಟಿ ಮಾಡುವ ಶಕ್ತಿ ಇದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

**ಸೋತರೆ ಟಿಕೆಟ್ ಇಲ್ಲ**

ದಕ್ಷಿಣ ವಿಧಾನಸಭಾ ಕ್ಷೇತ್ರದ ಶಕ್ತಿ ಕೇಂದ್ರಗಳ ಹೊಣೆಯನ್ನು ಪಕ್ಷದ ನಾಯಕರಿಗೆ ವಹಿಸಲಾಗುತ್ತದೆ. ಈ ಕೇಂದ್ರಗಳಲ್ಲಿ ಪಕ್ಷಕ್ಕೆ ಹೆಚ್ಚು ಮತ ಪಡೆಯಲು ವಿಫಲರಾದವರಿಗೆ 2028ರ ಸಾರ್ವತ್ರಿಕ ಚುನಾವಣೆಯಲ್ಲಿ ಟಿಕೆಟ್ ನೀಡುವುದಿಲ್ಲ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರವಾಲ್ ಎಚ್ಚರಿಕೆ ನೀಡಿದರು. ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾಜಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಸೇರಿದಂತೆ ವೇದಿಕೆ ಮೇಲಿರುವ ಎಲ್ಲಾ ನಾಯಕರಿಗೆ 2ರಿಂದ 3 ಶಕ್ತಿ ಕೇಂದ್ರಗಳ ಜವಾಬ್ದಾರಿಯನ್ನು ಜಿಲ್ಲಾ ಘಟಕದ ಅಧ್ಯಕ್ಷರು ನೀಡಬೇಕು. ಕಾರ್ಯಕರ್ತರ ಜತೆಗೆ ಇವರೂ ತಳಮಟ್ಟದಲ್ಲಿ ಕೆಲಸ ಮಾಡಬೇಕು. ಇವರು ಮಾತನಾಡುವುದರಲ್ಲಿ ನಿಷ್ಣಾತರು. ಯಾರ ಮಾತನ್ನೂ ಕೇಳಬೇಡಿ ಎಂದು ಹೇಳಿದರು.

**ದಿಕ್ಕು ಬದಲಿಸುವ ಚುನಾವಣೆ**

**ದಿಕ್ಕು ಬದಲಿಸುವ ಚುನಾವಣೆ:** ದಾವಣಗೆರೆ ದಕ್ಷಿಣ , ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ನಡೆಯಲಿರುವ ಉಪಚುನಾವಣೆಯು ರಾಜ್ಯ ರಾಜಕೀಯದ ದಿಕ್ಕು ಬದಲಿಸಲಿದೆ. ಪಕ್ಷವು ಉಪಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದೆ. ಪಕ್ಷದ ಕಾರ್ಯಕರ್ತರು, ನಾಯಕರು ಒಗ್ಗೂಡಿ ಪಕ್ಷಕ್ಕೆ ದುಡಿಯೋಣ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮನವಿ ಮಾಡಿದರು. ಪಕ್ಷಕ್ಕಿಂತ ದೊಡ್ಡವರು ಯಾರೂ ಇಲ್ಲ. ಕಾರ್ಯಕರ್ತರೇ ಪಕ್ಷದ ಅತಿದೊಡ್ಡ ಶಕ್ತಿ. ಪಕ್ಷದ ಸ್ವಂತ ಶಕ್ತಿಯ ಮೇಲೆ ಕಮಲ ಅರಳಿಸುವ ಪ್ರಯತ್ನ ಮಾಡೋಣ. ರಾಜ್ಯದಲ್ಲಿ ಎಂದೇ ಚುನಾವಣೆ ಎದುರಾದರೂ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಪಕ್ಷದ ಮುಂದೆ ಸುವರ್ಣ ಅವಕಾಶವಿದೆ ಎಂದು ಹೇಳಿದರು.

ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಕಾರ್ಯವೈಖರಿಯ ಬಗ್ಗೆ ಅವರದೇ ಪಕ್ಷದ ಶಾಸಕರಿಗೆ ತೃಪ್ತಿ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದಂಗೆ ಏಳುವ ಪರಿಸ್ಥಿತಿ ನಿರ್ಮಾಣವಾಗಿದೆ. ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದೇ ಕಾಲಾಹರಣ ಮಾಡಲಾಗುತ್ತಿದೆ. ಲಜ್ಜೆಗೆಟ್ಟ ಜನವಿರೋಧಿ ಸರ್ಕಾರದಿಂದ ಜನರು ಬೇಸತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಮಾ.11ರಿಂದ ಆರೋಗ್ಯ ಇಲಾಖೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

• ಉದಯವಾಹಿನಿ, ಮುದ್ದೇಬಿಹಾಳ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಹಾಗೂ ನೌಕರರ ವಿವಿಧ ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ತಕ್ಷಣ ಈಡೇರಿಸದಿದ್ದರೆ, ಬರುವ ಮಾರ್ಚ್ 11ರಿಂದ ತಾಲ್ಲೂಕಿನಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಹಾಗೂ ಆರೋಗ್ಯ ಇಲಾಖಾ ನೌಕರರ ಕೇಂದ್ರ ಸಂಘ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಈ ಕುರಿತು ಶಾಸಕರು ಹಾಗೂ ಕೆ.ಎಸ್.ಡಿ.ಎಲ್ ಅಧ್ಯಕ್ಷರು ಶಾಸಕ ಸಿ.ಎಸ್. ನಾಡಗೌಡ (ಅಪ್ಪಾಜಿ) ಅವರಿಗೆ ಅವರ ಗೃಹ ಕಚೇರಿಯಲ್ಲಿ ತಾಲ್ಲೂಕಿನ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಅಧಿಕೃತವಾಗಿ ಮನವಿ ಸಲ್ಲಿಸಿದರು.

**ಶಾಸಕರ ಭರವಸೆ:** ಮನವಿ ಸ್ವೀಕರಿಸಿ ಮಾತನಾಡಿದ ಶಾಸಕ ಸಿ.ಎಸ್. ನಾಡಗೌಡರು, ಆರೋಗ್ಯ ಇಲಾಖೆಯ ನೌಕರರ ಸಮಸ್ಯೆಗಳು ಈಗಾಗಲೇ ನನ್ನ ಗಮನಕ್ಕೆ ಬಂದಿವೆ. ಈ ಕುರಿತು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಅವರೊಂದಿಗೆ ಪ್ರಾಥಮಿಕ ಚರ್ಚೆ ನಡೆಸಿದ್ದೇನೆ. ಸಾರ್ವಜನಿಕರಿಗೆ ವೈದ್ಯಕೀಯ ಸೇವೆ ಅತಿ ಮುಖ್ಯವಾಗಿದ್ದು, ಮುಷ್ಕರದಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ತಡೆಯಲು ಮುಖ್ಯಮಂತ್ರಿಗಳು ಹಾಗೂ ಆರೋಗ್ಯ ಸಚಿವರ ಗಮನಕ್ಕೆ ನಿಮ್ಮ ಬೇಡಿಕೆಗಳನ್ನು ತಂದು ಶೀಘ್ರವೇ ಪರಿಹಾರ ಕಂಡುಕೊಳ್ಳುವ ಭರವಸೆ ನೀಡುತ್ತೇನೆ ಎಂದರು.



ಉದಯವಾಹಿನಿ ಚಿತ್ರ

**ಆಡಳಿತ ಮಂಡಳಿಗೆ ಮನವಿ:** ನಂತರ ನಿಯೋಗವು ತಹಶೀಲ್ದಾರರಿಗೆ ಮನವಿ ಸಲ್ಲಿಸಿ, ಮುಷ್ಕರದ ಕುರಿತು ಸರ್ಕಾರದ ಗಮನ ಸೆಳೆಯುವಂತೆ ಕೋರಿದರು. ಬಳಿಕ ತಾಲ್ಲೂಕು ಆರೋಗ್ಯ ಅಧಿಕಾರಿಗಳಾದ ಡಾ. ಸತೀಶ್ ತಿವಾರಿ ಹಾಗೂ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ. ಪರಶುರಾಮ ವಡ್ಡರ ಅವರಿಗೂ ಮನವಿ ಪತ್ರ ಸಲ್ಲಿಸಲಾಯಿತು.

ತಾಲ್ಲೂಕಿನ ಪ್ರಮುಖ ವೈದ್ಯಾಧಿಕಾರಿಗಳಾದ ಡಾ. ರಂಗನಾಥ ವೈದ್ಯ, ಡಾ. ಬಿ.ಎಸ್. ಚೌದ್ರಿ, ಡಾ. ಅಬ್ದುಲಮಜೀದ್ ಬಾಗವಾನ, ಡಾ. ರಿಪತ್ತಕೌಸರ್ ಇನಾಮದಾರ, ಡಾ. ಅನಿಲಕುಮಾರ್ ಶೇಗುಣಸಿ, ಡಾ. ಬಸವರಾಜ್ ಅಲಗೂರ, ಡಾ. ಸಂಗಮೇಶ ದಶವಂತ, ಡಾ. ತಹಸೀನ್ ಶಿವಣಗಿ ಹಾಗೂ ಡಾ. ಸಂದೀಪ ಬಿರಾದಾರ ಉಪಸ್ಥಿತರಿದ್ದರು. ಸಂಘಟನೆಯ ಪ್ರಮುಖರಾದ ಆಲ್ ಕೆಡರ್ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದಗೌಡ ಎನ್. ಬಿರಾದಾರ, ನೌಕರರಾದ ಯಲ್ಲಪ್ಪ ಚಲವಾದಿ, ಎ.ಎಸ್. ತೆರದಾಳ, ಐ.ಸಿ. ಮಾನಕರ, ಎ.ಜಿ. ಆಳಗುಂಡಿ, ರೇಖಾ ಜಯಗೊಂಡರ, ಎಂ.ಎಸ್. ಗೌಡರ, ವ್ಹಿ.ವ್ಹಿ. ಪವಾಡಶೆಟ್ಟಿ, ವಿಠ್ಠಲ ಕಿಲಾರಟ್ಟಿ, ಸಂತೋಷ ಅಂಗಡಗೇರಿ, ಎಂ.ಬಿ. ಬಾಗವಾನ, ಎಸ್.ಎಸ್. ಮಾಗಿ, ಎ.ಐ. ಕೇಸಾಪುರ, ಮಲ್ಲು ತುರುಡಗಿ, ಕಾಶೀನಾಥ ಯಲಗೂರೇಶ ತೋನಸಶ್ಯಾಳ, ಸಂತೋಷ ನಾಗರಾಬೆಟ್ಟ, ಚೇತನ್ ಸಿ.ಜಿ. ಬಿದರಕುಂದಿ, ಐ.ಬಿ. ಹೂಗಾರ, ಶಶಿಧರ ಒತಗೇರಿ, ನಾಗರಾಜ ಪಾಟೀಲ, ವಿಶ್ವನಾಥ ಬಿರಾದಾರ, ಹಣಮಗೌಡ ಬಿರಾದಾರ ಹಾಗೂ ಮಂಜುಳಾ ಪಾಟೀಲ ಹಾಜರಿದ್ದರು.

ಸರಕಾರಿ ನೌಕರರ ಸಂಘದ ಪದಾಧಿಕಾರಿಗಳು, ವಿವಿಧ ವೃಂದ ಸಂಘದ ಅಧ್ಯಕ್ಷರು ಹಾಗೂ ತಾಲ್ಲೂಕಿನ ಸಮಸ್ತ ಆರೋಗ್ಯ ಇಲಾಖೆಯ ನೌಕರ ಬಾಂಧವರು ಈ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಪಾಲ್ಗೊಂಡಿದ್ದರು.

## ಅಧ್ಯಕ್ಷರ ಏಕ ಪಕ್ಷಿಯ ನಿರ್ಧಾರಕ್ಕೆ ಆಕ್ರೋಶ: ಸೂಕ್ತ ಕ್ರಮ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ದೂರು

• ಉದಯವಾಹಿನಿ ಕಾರಟಗಿ

ಪುರಸಭೆ ಸ್ಥಾಯಿ ಸಮಿತಿ ರಚನೆ ಸಭೆಯನ್ನು ಅಧ್ಯಕ್ಷರು ಕಾನೂನು ಉಲ್ಲಂಘಿಸಿ ಏಕ ಪಕ್ಷಿಯವಾಗಿ ಮುಂದೂಡಿರುವುದನ್ನು ವಿರೋಧಿಸಿ ಕಾರಟಗಿ ಪುರಸಭೆಯ ಸದಸ್ಯರುಗಳು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ರವರಿಗೆ ಶುಕ್ರವಾರ ದೂರು ನೀಡಿದ್ದಾರೆ.

ದೂರುದಾರರ ಪುರಸಭೆಯ ಸದಸ್ಯರುಗಳು ಅಧ್ಯಕ್ಷರ ಏಕಪಕ್ಷೀಯ ನಿರ್ಧಾರವನ್ನು ತೀವ್ರವಾಗಿ ಖಂಡಿಸಿದ್ದಾರೆ. ಈ ಕುರಿತು ಸದಸ್ಯ ಸಂಗನಗೌಡರು ಮಾತನಾಡಿ, ದಿನಾಂಕ 26.2.2026ರಂದು ನಡೆದ ಕಾರಟಗಿ ಪುರಸಭೆ ಸಾಮಾನ್ಯ ಸಭೆಯಲ್ಲಿ ಸರ್ವ ಸದಸ್ಯರು ಮತ್ತು ಅಧ್ಯಕ್ಷರ ನೇತೃತ್ವದಲ್ಲಿ ತೀರ್ಮಾನಿಸಿದಂತೆ ದಿನಾಂಕ 5.3.2026ರಂದು ಸ್ಥಾಯಿ ಸಮಿತಿ ರಚನೆ ಸಭೆ ನಿಗದಿಯಾಗಿತ್ತು, ಸಭೆಯ ನಿರ್ಧಾರದಂತೆ ಮಾರ್ಚ್ 5ರಂದು ಒಟ್ಟು 23 ಸದಸ್ಯರ ಪೈಕಿ 22 ಸದಸ್ಯರು ಹಾಜರಿದ್ದು ಒಟ್ಟು 7 ಸ್ಥಾಯಿ ಸಮಿತಿ ಸದಸ್ಯತ್ವ ಸ್ಥಾನಕ್ಕೆ ಸೂಚಕರು ಮತ್ತು ಅನುಮೋದಕರ ಸಹಿಯೊಂದಿಗೆ ಅಧ್ಯಕ್ಷರು ನಾಮಪತ್ರವನ್ನು ಸ್ವೀಕರಿಸಿರುತ್ತಾರೆ, ಆರನೆಯ ವಾರ್ಡಿನ ಹಿರೇ ಬಸಪ್ಪ ಸಜ್ಜನ್ ಸದಸ್ಯರ ಸೂಚಕರ ಸಹಿ ಇದ್ದು ಅವರು ಸಭೆಗೆ ಹಾಜರಿರುವುದಿಲ್ಲ ಆ ಸಂದರ್ಭದಲ್ಲಿ ಪ್ರತಿಪಕ್ಷದವರು ಅಧ್ಯಕ್ಷರಿಗೆ 1 ನಾಮಪತ್ರವನ್ನು ತಿರಸ್ಕೃತಗೊಳಿಸಿ 6 ಸ್ಥಾನಕ್ಕೆ ಮಾತ್ರ ಚುನಾವಣೆ ನಡೆಸಲು ವಿನಂತಿಸಿದರು.

ಆದರೆ ಅಧ್ಯಕ್ಷರು ಯಾವುದೇ ಕಾರಣ ನೀಡದೆ ಏಕಾಏಕಿ ಸಭೆಯನ್ನು ಮುಂದೂಡಿದ್ದು ಕಾನೂನಿನ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಆದ್ದರಿಂದ ಮುಂದಿನ ಸಭೆಯಲ್ಲಿ



ಉದಯವಾಹಿನಿ ಚಿತ್ರ

ಈಗಾಗಲೇ ಸ್ವೀಕೃತಗೊಂಡ ನಾಮಪತ್ರವನ್ನು ಮತ್ತು ಹಿಂದಿನ ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು ಮಾತ್ರ ಪರಿಗಣಿಸಬೇಕೆಂದು ಸೂಚನೆ ನೀಡಬೇಕೆಂದು ಅಪರ ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿದ್ದೇವೆ ಎಂದಿದ್ದಾರೆ. ಈ ಈ ಸಂದರ್ಭದಲ್ಲಿ ಸಭೆಯಲ್ಲಿ ಕಾನೂನಿಗೆ ಅಗೌರವ ತೋರಿಸಿರುವ ಅಧ್ಯಕ್ಷರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಎಲ್ಲಾ ಸದಸ್ಯರು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ 1) ಶ್ರೀ ರಾಜಶೇಖರ್ ಸಿರಿಗೇರಿ ವಾರ್ಡ್ ನಂಬರ್ 1 2) ಶ್ರೀ ಪಕೀರಪ್ಪ ದೊಡ್ಡಮನಿ ವಾರ್ಡ್ ನಂಬರ್ 3 3) ಶ್ರೀಮತಿ ಲಕ್ಷ್ಮೀದೇವಿ ಬಸವರಾಜ ಎತ್ತಿನಮನಿ ವಾರ್ಡ್ ನಂಬರ್ 4 4) ಶ್ರೀಮತಿ ಮೌನಿಕಾ ಧನಂಜಯ ಕುಮಾರ ವಾರ್ಡ್ ನಂಬರ್ 5,,5) ಶ್ರೀ ರಮೇಶ ವಾರ್ಡ್ ನಂಬರ್ 12 6) ಶ್ರೀ ಬಸವರಾಜ ಕೊಪ್ಪದ್ ವಾರ್ಡ್ ನಂಬರ್ 15,7) ಶ್ರೀ ಸೋಮಶೇಖರ್ ಬೆರ್ಗಿ ವಾರ್ಡ್ ನಂಬರ್ 17.8) ಶ್ರೀ ಆನಂದ್ ಎಂ ವಾರ್ಡ್ ನಂಬರ್ 18 ಮತ್ತು 9 ನೇ ವಾರ್ಡಿನ ಶ್ರೀ ಸಂಗನಗೌಡ ಇದ್ದರು.

## ವಿಪತ್ತು ನಿರ್ವಹಣಾ ಪ್ರಾಧಿಕಾರದ ಮುಂಜಾಗ್ರತಾ ಕ್ರಮ ಪಾಲಿಸಿ, ಸುರಕ್ಷಿತವಾಗಿರಿ: ಜಿಲ್ಲಾಧಿಕಾರಿ

• ಉದಯವಾಹಿನಿ ವಿಜಯನಗರ

ಪೂರ್ವ ಮುಂಗಾರು ಅವಧಿಯಲ್ಲಿ ವಿಜಯನಗರ ಜಿಲ್ಲೆಯಾದ್ಯಂತ ಗುಡುಗು, ಸಿಡಿಲು ಮತ್ತು ಗಾಳಿ ಮಳೆಯಿಂದಾಗಿ ಸಾಕಷ್ಟು ಸಾವು ನೋವು ಸಂಭವಿಸಲಿವೆ. ಆದ್ದರಿಂದ ಸಾರ್ವಜನಿಕರು ಹಾಗೂ ವಿಶೇಷವಾಗಿ ರೈತರು ಜಿಲ್ಲಾಡಳಿತ ವತಿಯಿಂದ ಮುಂಜಾಗ್ರತಾ ಕ್ರಮಗಳನ್ನು ಸೂಚಿಸಿದ್ದು, ಪ್ರತಿಯೊಬ್ಬರೂ ಇವುಗಳನ್ನು ಪಾಲಿಸುವ ಮೂಲಕ ಸುರಕ್ಷಿತವಾಗಿರಿ ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಮನವಿ ಮಾಡಿದರು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯನ್ನು ಆಯೋಜಿಸಲಾಗಿದ್ದು, ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪೂರ್ವ ಮುಂಗಾರು ವೇಳೆ ಗುಡುಗು ಸಿಡಲು ಶಬ್ದ ಕೇಳಿಸಿದ ತಕ್ಷಣ ತೆರೆದ ಮೈದಾನ, ಗದ್ದೆ ಅಥವಾ ಗುಡ್ಡಗಾಡು ಪ್ರದೇಶದಲ್ಲಿದ್ದರೆ ಕೂಡಲೇ ಸುರಕ್ಷಿತ ಕಟ್ಟಡದ ಒಳಗೆ ಆಶ್ರಯ ಪಡೆಯಬೇಕು. ಒಂಟಿ ಮರ ಅಥವಾ ಎತ್ತರದ ಮರಗಳ ಕೆಳಗೆ ಆಶ್ರಯ ಪಡೆಯಬಾರದು. ವಿದ್ಯುತ್ ಉಪಕರಣಗಳಾದ ಮೊಬೈಲ್, ಟಿವಿ, ಫ್ರಿಡ್ಜ್ ಮುಂತಾದ ವಿದ್ಯುತ್ ಉಪಕರಣಗಳ ಬಳಕೆ ಮಾಡಬಾರದು. ಕೇಂದ್ರ ಸರ್ಕಾರ ಸಿದ್ಧಪಡಿಸಿರುವ ದಾಮಿನಿ ಆಪ್ ಬಳಸುವುದು ಸೂಕ್ತ. ಇದು ಸಿಡಿಲಿನ ಮುನ್ಸೂಚನೆ ನೀಡುತ್ತದೆ ಎಂದು ತಿಳಿಸಿದರು. ರೈತರು ಗುಡುಗು-ಮಿಂಚು ಆರಂಭವಾದಾಗ



ಉದಯವಾಹಿನಿ ಚಿತ್ರ

ಜಾನುವಾರುಗಳನ್ನು ಮರದ ಕೆಳಗೆ ಅಥವಾ ವಿದ್ಯುತ್ ಕಂಬಗಳಿಗೆ ಕಟ್ಟದೇ, ಸುರಕ್ಷಿತವಾದ ಶೆಡ್ ಅಥವಾ ಕೊಟ್ಟಿಗೆಯಲ್ಲಿ ಕಟ್ಟಬೇಕು. ಮಳೆ ಬರುವ ಮುನ್ಸೂಚನೆ ಇದ್ದಾಗ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದರೆ ತಕ್ಷಣ ನಿಲ್ಲಿಸಿ, ಸುರಕ್ಷಿತ ಪ್ರದೇಶಕ್ಕೆ ಸೇರಬೇಕು. ಗಾಳಿ ಮಳೆಗೆ ವಿದ್ಯುತ್ ತಂತಿಗಳು ತುಂಡಾಗಿ ಬೀಳುವ ಸಾಧ್ಯತೆ ಹೆಚ್ಚಿದ್ದು, ಸಾರ್ವಜನಿಕರು ಎಚ್ಚರಿಕೆಯಿಂದಿರಬೇಕು. ಅಂತಹ ಪ್ರಕರಣ ಕಂಡುಬಂದಲ್ಲಿ ತಕ್ಷಣ ಜೆಸ್ಕಾಂ ಅಧಿಕಾರಿಗಳಿಗೆ ತಿಳಿಸಬೇಕು. ಮಳೆ ಸುರಿಯುವಾಗ ವಾಹನ ಚಾಲನೆ ಮಾಡುವವರು ರಸ್ತೆ ಬದಿಯ ಮರಗಳ ಕೆಳಗೆ ವಾಹನ ನಿಲ್ಲಿಸದೆ, ಸುರಕ್ಷಿತ ಜಾಗದಲ್ಲಿ ನಿಲ್ಲಿಸಬೇಕು.

ಈ ರೀತಿಯ ಯಾವುದೇ ಆಕಸ್ಮಿಕ ಘಟನೆಗಳು ಸಂಭವಿಸಿದಲ್ಲಿ ತಕ್ಷಣ ಹತ್ತಿರದ ತಹಶೀಲ್ದಾರ್ ಕಚೇರಿ ಅಥವಾ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಹಾಯವಾಣಿ ಸಂಖ್ಯೆ 1077 ಕ್ಕೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ತಿಳಿಸಿದರು.

## ಕ್ಷೇತ್ರದ ಜನರ ಆರೋಗ್ಯ ಭದ್ರತೆಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಲಿದೆ

• ಉದಯವಾಹಿನಿ ಬೀದರ

ಮನ್ನಾಏಖೇಳ್ಳಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜನರ ಅನುಕೂಲಕ್ಕಾಗಿ ರೂ.4.5 ಕೋಟಿ ವೆಚ್ಚದಲ್ಲಿ 50 ಹಾಸಿಗೆಯ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ನಿಮ್ಮೆಲ್ಲರ ಅಪಾರ ಪ್ರೀತಿ, ವಿಶ್ವಾಸ ಮತ್ತು ಆಶೀರ್ವಾದದಿಂದ ಇಂದು ನಾನು ನಿಮ್ಮ ಸೇವೆ ಮಾಡುವ ಅಮೂಲ್ಯ ಅವಕಾಶ ಪಡೆದಿದ್ದೇನೆ. ಜನಸೇವೆ ಎನ್ನುವುದು ನನಗೆ ಕೇವಲ ಒಂದು ಹುದ್ದೆಯಲ್ಲ ಅದು ಒಂದು ಪವಿತ್ರ ಜವಾಬ್ದಾರಿ ನಿಮ್ಮ ನಿರೀಕ್ಷೆಗಳನ್ನು ಈಡೇರಿಸುವುದು, ನಿಮ್ಮ ಕನಸುಗಳಿಗೆ ನೆರವಾಗುವುದು ಮತ್ತು ಕ್ಷೇತ್ರವನ್ನು ಅಭಿವೃದ್ಧಿಯ ಶಿಖರಕ್ಕೇರಿಸುವುದು ನನ್ನ ಪ್ರಧಾನ ಗುರಿಯಾಗಿದೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಮನ್ನಾಎಖೇಳ್ಳಿ ಗ್ರಾಮದಲ್ಲಿರುವ 30 ಹಾಸಿಗೆಯ ಸಮುದಾಯ ಆರೋಗ್ಯ ಕೇಂದ್ರವನ್ನು ಜನರ ಅನುಕೂಲಕ್ಕಾಗಿ ರೂ.4.5 ಕೋಟಿ ವೆಚ್ಚದಲ್ಲಿ 50 ಹಾಸಿಗೆಯ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸುವ ನಿಟ್ಟಿನಲ್ಲಿ ಇಂದು ಹೊಸ ಕಟ್ಟಡ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಯೋಜನೆಯಿಂದ ಪ್ರದೇಶದ ಜನತೆಗೆ ಉತ್ತಮ ಆರೋಗ್ಯ ಸೇವೆಗಳು ಲಭ್ಯವಾಗಲಿದ್ದು, ತುರ್ತು ಚಿಕಿತ್ಸೆ ಸೇರಿದಂತೆ ವಿವಿಧ ವೈದ್ಯಕೀಯ ಸೌಲಭ್ಯಗಳು ಇನ್ನಷ್ಟು ಸುಲಭವಾಗಿ ದೊರೆಯಲಿವೆ.



ಉದಯವಾಹಿನಿ ಚಿತ್ರ

**ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಮೂಲಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಆರೋಗ್ಯ, ಉತ್ತಮ ಬೀದಿ-ರಸ್ತೆಗಳು, ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆಯ ಸುಧಾರಣೆ ಹಾಗೂ ವಿದ್ಯುತ್ ಸೌಲಭ್ಯಗಳ ವಿಸ್ತರಣೆ ಮೂಲಕ ಗ್ರಾಮೀಣ ಭಾಗಗಳಲ್ಲಿ ಸಮತೋಲನಾಭಿವೃದ್ಧಿಗೆ ಒತ್ತು ನೀಡಲಾಗಿದೆ. -ಡಾ.ಶೈಲೇಂದ್ರ ಬೆಲ್ದಾಳೆ**

ಕಾಮಗಾರಿಯನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಪ್ರತಿಯೊಬ್ಬ ನಾಗರಿಕನ ಜೀವನಮಟ್ಟವನ್ನು ಸುಧಾರಿಸುವ ದೃಢ ಸಂಕಲ್ಪದೊಂದಿಗೆ ನಾನು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ಬಲವರ್ಧನೆ ನಮ್ಮ ಪ್ರಮುಖ ಗುರಿಗಳಾಗಿವೆ. ಸರ್ಕಾರಿ ಶಾಲೆಗಳ ಅಭಿವೃದ್ಧಿ, ಮೂಲಸೌಕರ್ಯ ಸುಧಾರಣೆ, ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯಗಳ ಒದಗಿಕೆ ಹಾಗೂ ಗುಣಮಟ್ಟದ ಬೋಧನೆಗೆ ಕ್ರಮ ಕೈಗೊಳ್ಳಲಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಆಸ್ಪತ್ರೆಗಳ ಸೌಲಭ್ಯಗಳನ್ನು ವಿಸ್ತರಿಸಿ, ಬಡ ಮತ್ತು ಹಿಂದುಳಿದ ವರ್ಗದ ಜನರಿಗೆ ಸಮರ್ಪಕ ಚಿಕಿತ್ಸೆ ಸಿಗುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಸರ್ಕಾರದ ಪ್ರತಿಯೊಂದು ಜನಪರ ಯೋಜನೆ ಕೂಡ ನಿಜವಾದ ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಪಾರದರ್ಶಕ ವ್ಯವಸ್ಥೆ ರೂಪಿಸಲಾಗಿದೆ.

ಯಾವುದೇ ಜಾತಿ, ಧರ್ಮ, ವರ್ಗ ಅಥವಾ ರಾಜಕೀಯ ಭೇದಭಾವವಿಲ್ಲದೆ ಎಲ್ಲರಿಗೂ ನ್ಯಾಯ ಸಿಗುವಂತೆ ಕಾರ್ಯನಿರ್ವಹಿಸುವುದು ನನ್ನ ಬದ್ಧತೆ. ಜನರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುವ ವ್ಯವಸ್ಥೆಯನ್ನು ಬಲಪಡಿಸಲಾಗಿದೆ.

## ವಾರಾಹಿ ಬಲದಂಡೆ ಯೋಜನೆ ತ್ವರಿತ ಅನುಷ್ಠಾನಕ್ಕೆ ಆಗ್ರಹಿಸಿ ಬೃಹತ್ ಪಾದಯಾತ್ರೆ

• ಉದಯವಾಹಿನಿ ಕುಂದಾಪುರ

240 ಹೆಕ್ಟೇರ್ ಅರಣ್ಯ ಪ್ರದೇಶಗಳಿಗೆ ಅನುಮತಿ ದೊರಕಿದ್ದರೆ ವಾರಾಹಿ ಸಮಸ್ಯೆ ಎಂದೋ ಬಗೆಹರಿಯುತ್ತಿತ್ತು. ಮೂಲ ಯೋಜನೆಯ ಬದಲಾವಣೆಯಲ್ಲಿ ಸಂಸದ ರಾಘವೇಂದ್ರ ಅವರ ಕೊಡುಗೆಯೂ ಇದೆ. ಚುನಾವಣೆಯಲ್ಲಿ ಸೋತರೂ ಕಾಂಗ್ರೆಸ್ ನಾಯಕರಿಗೆ ಜನಸೇವೆಯಲ್ಲಿ ಬದ್ಧತೆ ಇದೆ. ಬಲದಂಡೆ ಯೋಜನೆ ಅನುಷ್ಠಾನವಾಗುವ ವಿಶ್ವಾಸವಿದೆ. ಚಡ್ಡಿ ಹಾಕಿ ದೊಣ್ಣೆ ಬೀಸುವವರಿಗೆ ನೀರಾವರಿ ಬಗ್ಗೆ ಏನು ಗೊತ್ತಿದೆ ಎಂದು ಮಾಜಿ ಸಚಿವ ವಿನಯ ಕುಮಾರ್ ಸೊರಕೆ ಬಿಜೆಪಿ ನಾಯಕರ ವಿರುದ್ದ ವಾಗ್ದಾಳಿ ನಡೆಸಿದರು.ಬೈಂದೂರು, ಬ್ಲಾಕ್ ಕಾಂಗ್ರೆಸ್ ಸಮಿತಿ ಹಾಗೂ ಇತರ ಸಮಾನ ಮನಸ್ಕ ಸಂಘಟನೆಗಳ ಸಹಕಾರದಲ್ಲಿ ಕಾಂಗ್ರೆಸ್ ಮುಖಂಡ ಕೆ. ಗೋಪಾಲ ಪೂಜಾರಿ ನೇತೃತ್ವದಲ್ಲಿ ಕಂಡ್ಲೂರಿನಿಂದ ಸಿದ್ದಾಪುರದವರೆಗೆ ನಡೆದ 'ನೀರಿಗಾಗಿ ನಡಿಗೆ' ಪಾದಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.ಜಿಲ್ಲೆಯಲ್ಲಿ ಹರಿಯುವ 13 ನದಿಗಳನ್ನು ಸದ್ಬಳಕೆ ಮಾಡಿಕೊಳ್ಳುವುದರಿಂದ ನೀರಿನ ಬವಣೆ ನೀಗಿಸುವ ಸಾಕಷ್ಟು ಯೋಜನೆಗಳಿಗೆ ಅವಕಾಶವಿದೆ. ಜಾತಿ-ಧರ್ಮಗಳ ಭೇದವಿಲ್ಲದೆ ಮನುಕುಲದ ಸೇವೆ ಮಾಡುತ್ತಿರುವ ಜಿ.ಶಂಕರ್ ಅವರ ಬಗ್ಗೆ ಅಪಸ್ವರದ ಮಾತು ಸರಿಯಲ್ಲ ಎಂದರು. ಪಾದಯಾತ್ರೆಯ ನೇತೃತ್ವ ವಹಿಸಿದ ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ ಅವರು, ಏತ ನೀರಾವರಿ ಯೋಜನೆಯ ವಿರುದ್ಧ ನಾನಿದ್ದೇನೆ ಎನ್ನುವುದನ್ನು ಸಾಬೀತು ಮಾಡಬೇಕು ಇಲ್ಲವಾದಲ್ಲಿ ಒಂದು ತಿಂಗಳ ಒಳಗೆ ಸಾರ್ವಜನಿಕ ಕ್ಷಮೆ ಕೇಳುವಂತೆ ಬಹಿರಂಗವಾಗಿ ಆಗ್ರಹಿಸಿದ್ದೆ. ಇಲ್ಲಿಯವರೆಗೂ ಮೌನವಾಗಿರುವ ಬಿಜೆಪಿ ಪರೋಕ್ಷವಾಗಿ ತಪ್ಪನ್ನು ಒಪ್ಪಿಕೊಂಡಿದೆ ಎಂದರು.

# ತಾಪಮಾನ: ಸಾರ್ವಜನಿಕರಿಗೆ ಜಿಲ್ಲಾಧಿಕಾರಿ ಸಲಹೆ, ಸೂಚನೆ

### ಬಿಸಿಲಿನಿಂದ ಬಳಲಿಕೆ, ನಿರ್ಜಲೀಕರಣ ಮತ್ತು ಹೀಟ್ ಸ್ಟ್ರೋಕ್ ತಡೆಗಟ್ಟಲು ಮತ್ತು ತಗ್ಗಿಸಲು ಸಾರ್ವಜನಿಕರು ಗಮನ ಹರಿಸಬೇಕು

• ಉದಯವಾಹಿನಿ ವಿಜಯಪುರ

ಅತೀ ಹೆಚ್ಚು ತಾಪಮಾನ ಸಮಯದಲ್ಲಿ ಪ್ರತಿಕೂಲ ಪರಿಣಾಮವನ್ನು ಕಡಿಮೆ ಮಾಡಲು ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ನೀಡಲಾದ ಸಲಹೆ ಸೂಚನೆಗಳನ್ನು ಪಾಲಿಸುವ ನಿಟ್ಟಿನಲ್ಲಿ ಸಾರ್ವಜನಿಕರು ಮುನ್ನೆಚ್ಚರಿಕಾ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಮನವಿ ಮಾಡಿದ್ದಾರೆ.

ರಾಜ್ಯದ ಕೆಲ ಜಿಲ್ಲೆಗಳಲ್ಲಿ 3 ರಿಂದ 6 ದಿನಗಳವರೆಗೆ ಬಿಸಿಗಾಳಿಯ ಪ್ರಭಾವ ಕಂಡುಬರುವ ಸಾಧ್ಯತೆಯಿದೆ. ತೀವ್ರ ತಾಪಮಾನವು ಸಾರ್ವಜನಿಕರ ಆರೋಗ್ಯದ ಮೇಲೆ, ವಿಶೇಷವಾಗಿ ಮಕ್ಕಳು, ವೃದ್ಧರು ಮತ್ತು ಅನಾರೋಗ್ಯ ಪೀಡಿತರ ಮೇಲೆ ಗಂಭೀರ ಪರಿಣಾಮ ಬೀರಬಹುದು. ಬಿಸಿಲಿನಿಂದ ಉಂಟಾಗುವ ಬಳಲಿಕೆ, ನಿರ್ಜಲೀಕರಣ ಮತ್ತು ಹೀಟ್ ಸ್ಟ್ರೋಕ್ ತಡೆಗಟ್ಟಲು ಮತ್ತು ತಗ್ಗಿಸಲು ಸಾರ್ವಜನಿಕರು ಗಮನ ಹರಿಸಬೇಕು ಎಂದವರು ತಿಳಿಸಿದ್ದಾರೆ.

ಗರಿಷ್ಠ ತಾಪಮಾನದ ಅವಧಿಯಲ್ಲಿ ಅದರಲ್ಲೂ ಮಧ್ಯಾಹ್ನ 12 ರಿಂದ 3 ರವರೆಗೆ ಬಿಸಿಲಿನಲ್ಲಿ ಹೊರಗೆ ಹೋಗುವುದನ್ನು ತಪ್ಪಿಸಬೇಕು ಎಂದವರು ತಿಳಿಸಿದ್ದಾರೆ. ಪೂರ್ವಾಹ್ನ 11 ರಿಂದ ಸಂಜೆ 4 ಗಂಟೆ ಅವಧಿಯಲ್ಲಿ ಹೊರಾಂಗಣ ಸಭೆಗಳು, ಚಟುವಟಿಕೆಗಳು ನಡೆಯುವ ಪ್ರದೇಶದಲ್ಲಿ ಸಾರ್ವಜನಿಕರಿಗೆ ಬಿಸಿಲಿನಿಂದ ರಕ್ಷಣೆ ನೀಡಲು ಅಗತ್ಯ ಶಾಮಿಯಾನ, ಪೆಂಡಾಲ್ ವ್ಯವಸ್ಥೆ ಮಾಡಬೇಕು. ಉತ್ತಮ ಗಾಳಿಯ ವ್ಯವಸ್ಥೆ ಖಚಿತಪಡಿಸಿಕೊಳ್ಳಬೇಕು. ಸಭಿಕರಿಗೆ ಕಡ್ಡಾಯವಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಸಲಹೆ ಮಾಡಿದ್ದಾರೆ. ಪ್ರಯಾಣದೊಟ್ಟಿಗೆ ಸಾಕಷ್ಟು ನೀರಿರಲಿ. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಪಿ ಮತ್ತು ಕಾರ್ಬೋನೇಟೆಡ್ ತಂಪು ಪಾನೀಯ ಸೇವಿಸುವುದು ಬೇಡ. ಸಾಧ್ಯವಾದಷ್ಟು ಬಿಸಿ ಆಹಾರವನ್ನು ಸೇವಿಸಬೇಕು ಎಂದವರು ತಿಳಿಸಿದ್ದಾರೆ.

**ಅನಾರೋಗ್ಯ ಪೀಡಿತರ ಮೇಲೆ ಗಂಭೀರ ಪರಿಣಾಮ**



ನಿಲ್ಲಿಸಿದ ವಾಹನಗಳಲ್ಲಿ ಮಕ್ಕಳು ಹಾಗೂ ಸಾಕುಪ್ರಾಣಿಗಳನ್ನು ಬಿಡಬೇಡಿ. ಮೂರ್ಛೆ ಅಥವಾ ಅನಾರೋಗ್ಯ ಎನಿಸಿದರೆ, ತಕ್ಷಣ ವೈದ್ಯರನ್ನು ಭೇಟಿ ಮಾಡಬೇಕು. ನಿಂಬೆ ನೀರು, ಮಜ್ಜಿಗೆ ಮುಂತಾದ ಮನೆಯಲ್ಲಿ ತಯಾರಿಸಿದ ಪಾನೀಯಗಳು ಮತ್ತು ಓಆರ್ ಎಸ್ ಸೇವಿಸಬೇಕು. ಹೆಚ್ಚಿನ ನೀರಿನಂಶ ಹೊಂದಿರುವ ಕಲ್ಲಂಗಡಿ, ಕರಬೂಜ, ಕಿತ್ತಳೆ, ದ್ರಾಕ್ಷಿ, ಅನಾನಸ್, ಸೌತೆಕಾಯಿ, ತರಕಾರಿ ಸೊಪ್ಪು, ಎಳೆನೀರು ಹೆಚ್ಚಾಗಿ ಸೇವಿಸಬೇಕು ಎಂದವರು ತಿಳಿಸಿದ್ದಾರೆ.

ಜೊತೆಗೆ ಸಾಕು ಪ್ರಾಣಿಗಳನ್ನು ನೆರಳಿನಲ್ಲಿ ಇರಿಸಿ ಮತ್ತು ಅವುಗಳಿಗೆ ಕುಡಿಯಲು ಸಾಕಷ್ಟು ನೀರು ಕಲ್ಪಿಸಬೇಕು ಎಂದೂ ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಇಡೀ ಮನೆ ತಂಪಾಗಿರಿಸಲು ಪರದೆ, ಶಟರ್‌ಗಳು ಅಥವಾ ಸನ್‌ಶೇಡ್‌ಗಳನ್ನು ಬಳಸಬೇಕು. ಹೊರಗೆ ಹೋಗುವಾಗ ನೀರಿನ ಬಾಟಲಿ, ಛತ್ರಿ, ಟೋಪಿ, ಕ್ಯಾಪ್, ಹೆಡ್ ಕವರ್, ಹ್ಯಾಂಡ್ ಟವೆಲ್, ಹ್ಯಾಂಡ್ ಫ್ಯಾನ್, ಎಲೆಕ್ಟ್ರೋಲೈಟ್/ಗ್ಲೋಕೋಸ್, ಓಆರ್ ಎಸ್ ಒಳಗೊಂಡಿರುವ ಕಿಟ್ ಒಯ್ಯಬೇಕು. ಅತೀ ಹೆಚ್ಚು ತಾಪಮಾನದಿಂದ ಸಾಮಾನ್ಯವಾಗಿ ನಿರ್ಜಲೀಕರಣ, ಶಾಖ ಸೆಳೆತ, ಶಾಖದ ಬಳಲಿಕೆ ಅಥವಾ ಶಾಖದ ಆಘಾತದಂತಹ ದುಷ್ಪರಿಣಾಮಗಳು ಉಂಟಾಗುವ ಸಾಧ್ಯತೆಯಿದೆ. ತಾಪಮಾನಕ್ಕೆ ತುತ್ತಾದ ವ್ಯಕ್ತಿಯನ್ನು ನೆರಳಿನಡಿ ತಂಪಾದ ಸ್ಥಳಕ್ಕೆ ಸ್ಥಳಾಂತರಿಸಬೇಕು. ಒದ್ದೆ ಬಟ್ಟೆಯಿಂದ ಮೈ ಒರೆಸುವುದು ಹಾಗೂ ದೇಹದ ಉಷ್ಣತೆಯನ್ನು ತಗ್ಗಿಸಲು ತಲೆಯ ಮೇಲೆ ನೀರನ್ನು ಹಾಕಬೇಕು ಎಂದವರು ತಿಳಿಸಿದ್ದಾರೆ. ರೋಗ ಲಕ್ಷಣಗಳು ಉಲ್ಬಣಗೊಂಡರೆ ಅಥವಾ ದೀರ್ಘಕಾಲದವರೆಗೆ ಇದ್ದರೆ ಅಥವಾ ವ್ಯಕ್ತಿಯು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರೆ ವೈದ್ಯರನ್ನು ಸಂಪರ್ಕಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ.ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಬಾಯಾರಿಕೆ ಇಲ್ಲದಿದ್ದರೂ ಸಾಕಷ್ಟು ನೀರು ಕುಡಿಯಬೇಕು. ಹಗುರವಾದ, ತಿಳಿ ಬಣ್ಣದ ಸಡಿಲವಾದ ಮತ್ತು ಹತ್ತಿ ಬಟ್ಟೆಗಳನ್ನು ಧರಿಸಬೇಕು. ಬಿಸಿಲಿನಲ್ಲಿ ಹೊರಗೆ ಹೋಗುವ ಅನಿವಾರ್ಯತೆಯಿದ್ದರೆ ರಕ್ಷಣೆಗಾಗಿ ಕನ್ನಡಕ, ಛತ್ರಿ, ಟೋಪಿ, ಬೂಟುಗಳು ಅಥವಾ ಚಪ್ಪಲಿಗಳನ್ನು ಬಳಸಬೇಕು. ಹೊರಗಿನ ಉಷ್ಣತೆ ಅಧಿಕವಾಗಿರುವಾಗ ಶ್ರಮದಾಯಕ ಚಟುವಟಿಕೆಗಳನ್ನು ನಿಲ್ಲಿಸಬೇಕು. -ಜಿಲ್ಲಾಧಿಕಾರಿ**

## ಮಿನಿ ನ್ಯೂಸ್

### ಆನ್‌ಲೈನ್ ಶಿಕ್ಷಣ ಮಕ್ಕಳ ಮೇಲೆ ದುಷ್ಪರಿಣಾಮ

• ಉದಯವಾಹಿನಿ ಕಮಲನಗರ

ಮಕ್ಕಳಿಗೆ ಶಿಕ್ಷಣದ ಜೊತೆ, ಕ್ರೀಡೆ, ನೈತಿಕ ಶಿಕ್ಷಣವನ್ನು ಕಲಿಸಿದಲ್ಲಿ ಮಾತ್ರ, ಬಹುಮುಖ ಪ್ರತಿಭಾವಂತರಾಗಿ ಹೊರಹೊಮ್ಮುತ್ತಾರೆಂದು ಔರಾದ್ ಬಿಜೆಪಿ ತಾಲ್ಲೂಕು ಮಂಡಲ ಘಟಕ ಅಧ್ಯಕ್ಷ ರಾಮಶೆಟ್ಟಿ ಪನ್ನಾಳೆ ಹೇಳಿದರು. ಪಟ್ಟಣದ ಶಾಸ್ತ್ರೀ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ನಡೆಯುತ್ತಿರುವ ಭಾಗಿರಥಿ ಪಬ್ಲಿಕ್ ಶಾಲೆಯಲ್ಲಿ ಈಚೆಗೆ ಹಮ್ಮಿಕೊಂಡ ಶಾಲಾ ಮಟ್ಟದ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ವಿಜೇತ ಮಕ್ಕಳಿಗೆ ಪ್ರಶಸ್ತಿ ಪತ್ರ ವಿತರಿಸಿದ ಅವರು ಮಾತನಾಡಿದರು.

ಆನ್‌ಲೈನ್ ಶಿಕ್ಷಣದಿಂದ ಯೋಚನೆ, ಆಲೋಚನೆ ಮರೆಯುತ್ತಿದ್ದು ಇದರಿಂದ ಮಕ್ಕಳ ಮನಸ್ಸಿನಲ್ಲಿನ ಯೋಚನಾ ಶಕ್ತಿಯು ಕುಗ್ಗುತ್ತಿದೆ. ಅಲ್ಲದೆ ಗಂಭೀರ ಪರಿಣಾಮ ಬೀರುತ್ತಿದೆ. ಸರ್ಕಾರ ಈ ನೀತಿಯನ್ನು ಕೈ ಬಿಡುವ ಯೋಚನೆ ಮಾಡುತ್ತಿದ್ದು ಆದಷ್ಟು ಶೀಘ್ರವಾಗಿ ಜಾರಿಯಾದರೆ ಉತ್ತಮ. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಅನೇಕ ಪೋಷಕರು ಮಕ್ಕಳನ್ನು ವಸತಿಯುತ ಪದ್ಧತಿಯ ಶಿಕ್ಷಣಕ್ಕೆ ಚಿಕ್ಕ ವಯಸ್ಸಿನಲ್ಲಿಯೇ ಸೇರಿಸುತ್ತಿದ್ದಾರೆ. ಆದರಿಂದ ಮಕ್ಕಳು ಮಾನಸಿಕ ಒತ್ತಡಕ್ಕೆ ಒಳಗಾಘುತ್ತಾರೆ ಎನ್ನುವುದನ್ನು ಯಾರು ಮರೆಯಬಾರದು ಎಂದರು. 18ನೇ ವಯಸ್ಸಿನವರೆಗೂ ಮಕ್ಕಳನ್ನು ತಮ್ಮ ಜೊತೆಯಲ್ಲಿಟ್ಟುಕೊಂಡು ಶಿಕ್ಷಣ ಕೊಡಿಸುತ್ತಾ, ದಿನ ನಿತ್ಯ ಅವರೊಂದಿಗೆ ಕೆಲಸಮಯ ಕಳೆದರೆ ಮಾನಸಿಕವಾಗಿ ಸದೃಢವಾಗಿ ಬೆಳೆದು ಭವಿಷ್ಯದಲ್ಲಿ ಎಂತಹದೆ ಸಮಸ್ಯೆಯನ್ನು ಸಮರ್ಥವಾಗಿ ನಿಭಾಯಿಸುತ್ತಾರೆ ಎಂದು ಜಾಗೃತಿ ಮೂಡಿಸಿದರು.

### ಭೂಮಿ ಅತಿಕ್ರಮಣದ ಆರೋಪ ರಸ್ತೆಯಲ್ಲೇ ರೈತನ ಧರಣಿ

• ಉದಯವಾಹಿನಿ ಕೊಪ್ಪಳ

ತಾಲ್ಲೂಕಿನ ಹಿರೇಬಗನಾಳದಿಂದ ಕುಣಿಕೇರಿ ಗ್ರಾಮಕ್ಕೆ ತೆರಳುವ ಮಾರ್ಗದಲ್ಲಿರುವ ಐಎಲ್.ಸಿ. ಕಾರ್ಖಾನೆಯವರು ರಸ್ತೆಗಾಗಿ ಭೂಮಿ ಅತಿಕ್ರಮಣ ಮಾಡಿ ಪೂರ್ಣ ಪ್ರಮಾಣದಲ್ಲಿ ಪರಿಹಾರ ಕೊಟ್ಟಿಲ್ಲ ಎಂದು ಆರೋಪಿಸಿ ಸ್ಥಳೀಯ ರೈತ ರಾಮಪ್ಪ ಮುಕ್ಕುಂಪಿ ರಸ್ತೆಯಲ್ಲಿಯೇ ಪ್ರತಿಭಟನೆ ನಡೆಸಿದರು. ಈ ಮಾರ್ಗದಲ್ಲಿ ಎಲ್ಲೆಂದರಲ್ಲಿ ರಸ್ತೆಯಲ್ಲಿ ಗುಂಡಿಗಳಾಗಿದ್ದು, ಅವುಗಳನ್ನು ಮುಚ್ಚಲು ಗಟ್ಟಿಯಾಗಿಲ್ಲದ, ವಿಪರೀತ ದೂಳು ಬರುವ ಕಪ್ಪು ಮಣ್ಣು ಹಾಗೂ ಕಲ್ಲುಗಳನ್ನು ರಾಮಪ್ಪ ಹೊಲದ ಸಮೀಪದಲ್ಲಿಯೇ ಹಾಕಲಾಗಿತ್ತು. ಈ ಮಣ್ಣಿನ ಗುಂಪಿನ ಮೇಲೆ ರೈತರ ಹೋರಾಟದ ಸಂಕೇತವಾಗಿ ಹಸಿರು ಧ್ವಜ ನೆಟ್ಟು ರಾಮಪ್ಪ ಪ್ರತಿಭಟನೆ ನಡೆಸುತ್ತಿದ್ದರು.

ಕಾರ್ಖಾನೆಯವರು ಕಳೆದುಕೊಂಡ ನನ್ನ ಭೂಮಿಗೆ ಪೂರ್ಣ ಪರಿಹಾರ ಕೊಟ್ಟಿಲ್ಲ. ಕೇಳಲು ಹೋದರೆ ದೌರ್ಜನ್ಯ ಮಾಡುತ್ತಾರೆ' ಎಂದು ಆರೋಪಿಸಿದರು. ಇದರಿಂದಾಗಿ ಕಾರ್ಖಾನೆಗೆ ತೆರಳಬೇಕಾದ ಸರಕು ಲಾರಿಗಳು ರಸ್ತೆಯಲ್ಲಿಯೇ ನಿಂತುಕೊಂಡಿದ್ದವು. ಸ್ಥಳಕ್ಕೆ ಬಂದ ಮುನಿರಾಬಾದ್ ಠಾಣೆಯ ಪಿಎಸ್‌ಐ ಸುನಿಲ್ ಈ ವಿಷಯ ನನ್ನ ಗಮನಕ್ಕೆ ತಂದಿದ್ದರೆ ಸಮಸ್ಯೆ ಪರಿಹರಿಸುತ್ತಿದ್ದೆ. ನೇರವಾಗಿ ಪ್ರತಿಭಟನೆಗೆ ಕುಳಿತರೆ ಹೇಗೆ ಎಂದು ಪ್ರಶ್ನಿಸಿದರು. ಪ್ರತಿಭಟನಾ ನಿರತರನ್ನು ಸಮಾಧಾನಪಡಿಸಿ ವಾಹನಗಳ ಸಂಚಾರಕ್ಕೆ ಪಿಐ ಅನುಕೂಲ ಮಾಡಿಕೊಟ್ಟರು.

### ಕಡಲೆ ಖರೀದಿ ಕೇಂದ್ರ ಆರಂಭ

• ಉದಯವಾಹಿನಿ ರೋಣ

ತಾಲ್ಲೂಕಿನ ಯಾವಗಲ್ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಗುರುವಾರದಿಂದ ಸರ್ಕಾರದ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಕಡಲೆ ಖರೀದಿ ಕೇಂದ್ರಕ್ಕೆ ಚಾಲನೆ ನೀಡಲಾಯಿತು. ಖರೀದಿ ಕೇಂದ್ರಕ್ಕೆ ಚಾಲನೆ ನೀಡಿದ ಸಿದ್ದಯ್ಯ ಹಿರೇಮಠ ಸರ್ಕಾರ ರೈತರ ಅನುಕೂಲಕ್ಕಾಗಿ ಬೆಂಬಲ ಬೆಲೆ ಯೋಜನೆ ಅಡಿ ಖರೀದಿ ಕೇಂದ್ರ ಆರಂಭಿಸಿದ್ದು ಯಾವಗಲ್ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ರೈತರು ಇದರ ಸದುಪಯೋಗ ಪಡಿಸಿಕೊಳ್ಳಬೇಕು. ತಾಲ್ಲೂಕಿನಾದ್ಯಂತ ಹವಾಮಾನ ವೈಪರಿತ್ಯದಿಂದ ಇಳುವರಿ ಕುಂಠಿತವಾಗಿದ್ದು ಸಂಕಷ್ಟದಲ್ಲಿರುವ ರೈತರಿಗೆ ಕಡಲೆ ಖರೀದಿಯಾದ ತಕ್ಷಣ ಸರ್ಕಾರ ಹಣ ಜಮೆ ಮಾಡುವ ಮೂಲಕ ಅನುಕೂಲ ಕಲ್ಪಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಸೋಮಶೇಖರಗೌಡ ಮುಲ್ಕಿಪಾಟೀಲ, ಪ್ರಸಕ್ತ ವರ್ಷದ ಹಿಂಗಾರು ಕಡಲೆ ಖರೀದಿ ಕೇಂದ್ರ ಗ್ರಾಮದಲ್ಲಿ ಇಂದಿನಿಂದ ಆರಂಭಗೊಂಡಿದ್ದು 350ಕ್ಕೂ ಹೆಚ್ಚು ರೈತರು ಈಗಾಗಲೇ ನೋಂದಣಿ ಮಾಡಿಕೊಂಡಿದ್ದಾರೆ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ ಪ್ರತಿ ಕ್ವಿಂಟಲ್‌ಗೆ ರೂ. 5875 ರಂತೆ ಕಡಲೆ ಖರೀದಿಸಲಾಗುವುದು. ರೈತರ ಆಧಾರ್ ಸಂಖ್ಯೆ ಜೋಡಣೆಗೊಂಡ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಹಣ ಜಮೆ ಮಾಡಲಾಗುವುದು ಪ್ರತಿ ಎಕರೆಗೆ 4 ಕ್ವಿಂಟಲ್ ನಂತೆ ಗರಿಷ್ಠ ಒಬ್ಬ ರೈತರಿಂದ 40 ಕ್ವಿಂಟಲ್ ವರೆಗೆ ಖರೀದಿಸಲು ಅವಕಾಶ ನೀಡಲಾಗಿದೆ ಎಂದು ಹೇಳಿದರು.

### ಮೂಲ ಸೌಕರ್ಯ ಕಲ್ಪಿಸಲು ಒತ್ತಾಯ

• ಉದಯವಾಹಿನಿ ಸಾಗರ

ತಾಲ್ಲೂಕಿನ ಭಾರಂಗಿ ಹೋಬಳಿ ಸೇರಿದಂತೆ ತಾಲ್ಲೂಕು ಕೇಂದ್ರದಿಂದ ದೂರದ ಪ್ರದೇಶದಲ್ಲಿರುವ ಗ್ರಾಮಗಳಿಗೆ ಮೂಲ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಕರ್ನಾಟಕ ಅರಣ್ಯಮೂಲ ಬುಡಕಟ್ಟು ಒಕ್ಕೂಟ ಹಾಗೂ ರೈತ ಸಂಘದ ವತಿಯಿಂದ ಉಪವಿಭಾಗಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಯಿತು. ಭಾರಂಗಿ ಹೋಬಳಿ ಇಂದ್ರೋಡಿ ಮನೆ ಶಾಲೆಯಿಂದ ಕುಡುಗುಂಜಿಯವರೆಗೆ 10 ಕಿ.ಮೀ. ದೂರದ ರಸ್ತೆ ಡಾಂಬರೀಕರಣಗೊಳಿಸುವಂತೆ ದೀರ್ಘಕಾಲದಿಂದ ಒತ್ತಾಯಿಸುತ್ತಿದ್ದರೂ ತಾಲ್ಲೂಕು ಆಡಳಿತ ಅದಕ್ಕೆ ಸ್ಪಂದಿಸಿಲ್ಲ ಎಂದು ಪ್ರತಿಭಟನಾಕಾರರು ದೂರಿದರು.

ಕುಡುಗುಂಜಿ, ಸುಂಕದಮನೆ, ಕೆರೋಡಿ, ಐತಾಳಮನೆ, ವಟ್ಟಕ್ಕಿ, ಹೆನ್ನಿ ಮೊದಲಾದ ಗ್ರಾಮಗಳು ರಸ್ತೆ, ಕುಡಿಯುವ ನೀರು, ವಿದ್ಯುತ್ ಮೊದಲಾದ ಮೂಲ ಸೌಕರ್ಯಗಳ ಕೊರತೆಯಿಂದ ಬಳಲುತ್ತಿವೆ. ಈ ಹಿಂದೆ ಶಂಕುಸ್ಥಾಪನೆ ನೆರವೇರಿಸಿದ ರಸ್ತೆ ಕಾಮಗಾರಿ ಇನ್ನೂ ಆರಂಭಗೊಂಡಿಲ್ಲ ಎಂದು ಪ್ರತಿಭಟನಾಕಾರರು ದೂರಿದರು. ಹಿಂದಿನ ಶಾಸಕರು ಶಂಕುಸ್ಥಾಪನೆ ನೆರವೇರಿಸಿದ್ದಾರೆ ಎಂದು ಈಗಿನ ಶಾಸಕರು ಕಾಮಗಾರಿ ನಡೆಸಲು ಆಸಕ್ತಿ ತೋರುತ್ತಿಲ್ಲ. ಇದರಿಂದಾಗಿ ಭಾರಂಗಿ ಹೋಬಳಿಯ ಅನೇಕ ಗ್ರಾಮಗಳ ಜನರು ಮೂಲ ಸೌಕರ್ಯಗಳ ಕೊರತೆಯಿಂದ ನಲುಗಿ ಹೋಗಿದ್ದಾರೆ ಎಂದು ಪ್ರತಿಭಟನಾಕಾರರು ತಮ್ಮ ಅಹವಾಲು ಮಂಡಿಸಿದರು.



ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನೀವು ದೀರ್ಘಕಾಲೀನ ಅನಾರೋಗ್ಯದ ಚೇತರಿಸಿಕೊಳ್ಳುತ್ತೀರಿ. ಆದರೆ ಸ್ವಾರ್ಥಿಗಳಾದ, ಮುಂಗೋಪಿ ವ್ಯಕ್ತಿಯ ಸಹವಾಸವನ್ನು ತಪ್ಪಿಸಿ – ಅವರು ನಿಮ್ಮ ಮೇಲೆ ಒತ್ತಡ ಹಾಕಬಹುದು.

**ವೃಷಭ** ನಿಮ್ಮ ಗೌಪ್ಯ ಮಾಹಿತಿಯನ್ನು ನಿಮ್ಮ ಸಂಗಾತಿಯ ಜೊತೆ ಹಂಚಿಕೊಳ್ಳುವ ಮೊದಲು ಯೋಚಿಸಿ. ಅವಳು ಅದನ್ನು ಬೇರೆಯವರಿಗೆ ಹೇಳಬಹುದಾದ್ದರಿಂದ ಸಾಧ್ಯವಾದರೆ ಅದನ್ನು ತಪ್ಪಿಸಲು ಪ್ರಯತ್ನಿಸಿ.

**ಮಿಥುನ** ನಿಮ್ಮ ಸಂಗಾತಿಯ ಅಹ್ಲಾದಕರ ಮನಸ್ಥಿತಿ ನಿಮ್ಮ ದಿನವನ್ನು ಉಜ್ವಲವಾಗಿಸಬಹುದು. ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು.

**ಕರ್ಕಾಟಕ** ನಿಮ್ಮ ಪ್ರಚಂಡ ಬೌದ್ಧಿಕ ಸಾಮರ್ಥ್ಯ ಅಂಗವೈಕಲ್ಯದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಕೇವಲ ಸಕಾರಾತ್ಮಕ ಆಲೋಚನೆಗಳ ಜೊತೆ ಮಾತ್ರ ನೀವು ಈ ಸಮಸ್ಯೆಯ ವಿರುದ್ಧ ಹೋರಾಡಬೇಕು.

**ಸಿಂಹ** ಮನೆಯಲ್ಲಿ ಸಮಸ್ಯೆಗಳು ಉದ್ಭವವಾಗುವಂತೆ ತೋರುತ್ತಿರುವುದರಿಂದ ನಿಮ್ಮ ಮಾತುಗಳ ಬಗ್ಗೆ ಎಚ್ಚರ ವಹಿಸಿ. ನಿಮ್ಮ ಕಣ್ಣೀರನ್ನು ಒಬ್ಬ ವಿಶೇಷ ಸ್ನೇಹಿತ ಒರೆಸಬಹುದು. ಇಂದು ಜನರು ಹೊಗಳಿಕೆಗಳನ್ನು ನೀಡುತ್ತಾರೆ.

**ಕನ್ಯಾ** ನಿಮ್ಮ ಶಾಂತತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಚಟುವಟಿಕೆಗಳಲ್ಲಿ ನಿಮ್ಮನ್ನು ತೊಡಗಿಸಿಕೊಂಡಿರಿ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು.

**ತುಲಾ** ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಆರ್ಥಿಕ ಭಾಗವು ಬಲಗೊಳ್ಳುವ ಪೂರ್ಣ ಸಾಧ್ಯತೆ ಇದೆ.

**ವೃಶ್ಚಿಕ** ಒಬ್ಬ ಸಂತನಿಂದ ಆಧ್ಯಾತ್ಮಿಕ ಜ್ಞಾನ ಸಾಂತ್ವನ ಮತ್ತು ಆರಾಮವನ್ನು ಒದಗಿಸುತ್ತದೆ. ತಮ್ಮ ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ಇಂದು ನಷ್ಟ ಅನುಭವಿಸುವ ಸಾಧ್ಯತೆಯಿದೆ.

**ಧನಸ್ಸು** ನಿಮ್ಮ ನಿರಂತರ ಸಕಾರಾತ್ಮಕ ಚಿಂತನೆಯನ್ನು ಪ್ರಶಂಸಿಸಲಾಗುತ್ತದೆ. ನಿಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗಬಹುದು. ವ್ಯಾಪಾರವನ್ನು ಬಲಪಡಿಸಲು ನೀವು ಯಾವುದೇ ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಬಹುದು.

**ಮಕರ** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಜೀವನ ಸಂಗಾತಿಯೊಂದಿಗೆ ಸೇರಿ ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು.

**ಕುಂಭ** ಒಂದು ಲಾಭಕರ ದಿನ ಮತ್ತು ನೀವು ದೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ನಿಧಿಗಳ ಹಠಾತ್ ಒಳಹರಿವು ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ.

**ಮೀನ** ನೀವು ಇದು ಒಳ್ಳೆಯ ಆರೋಗ್ಯ ಹೊಂದಿರುವುದರಿಂದ ಅದು ನಿಮಗೆ ಯಶಸ್ಸು ನೀಡುವ ಸಾಧ್ಯತೆಯಿದೆ. ಆದರೆ ನಿಮ್ಮ ಶಕ್ತಿಯನ್ನು ನಾಶಪಡಿಸುವ ಎಲ್ಲವನ್ನೂ ನೀವು ಇಂದು ತಪ್ಪಿಸಬೇಕು.

# ರಿಯಲ್ ಎಸ್ಟೇಟ್ ಕ್ಷೇತ್ರದಿಂದ ಶಿಕ್ಷಣ ಕ್ಷೇತ್ರದತ್ತ ಮಹತ್ವದ ಮೊದಲ ಹೆಜ್ಜೆಯಿಟ್ಟ ರಿಚರ್ ಲ್ಯಾಂಡ್ ಸಂಸ್ಥೆಯ ಅಧ್ಯಕ್ಷ ರವಿಕುಮಾರ

• **ಉದಯವಾಹಿನಿ, ಚಿಂಚೋಳಿ**

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸ್ಥಳೀಯವಾಗಿ ಮೌಲ್ಯಾಧಾರಿತ ಶಿಕ್ಷಣ ಒದಗಿಸಲು ಮತ್ತು ವಿದ್ಯಾರ್ಥಿಗಳು ನಗರ ಪ್ರದೇಶಗಳಿಗೆ ವಲಸೆ ಹೋಗದಂತೆ ಉತ್ತಮ ಗುಣಮಟ್ಟದ ಶಿಕ್ಷಣದ ಜೋತೆ ಉದ್ಯೋಗಾವಕಾಶ ಸೃಷ್ಟಿ ಮಾಡಿ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ರಿಚರ್ ಎಜ್ಯುಕೇಷನ್ ಸೂಸೈಟಿಯ ಅಧ್ಯಕ್ಷ ರವಿಕುಮಾರ ವೀಪನಗಂಡ್ಲ ಹೈದರಾಬಾದ್ ತಿಳಿಸಿದ್ದಾರೆ.

**ಎಲ್.ಕೆ.ಜಿ ಯಿಂದ ಪಿಜಿವರೆಗೆ ಶಿಕ್ಷಣ**

ಪಟ್ಟಣದ ಹೊರವಲಯದ ಪೋಲಕಪಳ್ಳಿ ಸಮೀಪ ರಿಚರ್ ಲ್ಯಾಂಡ್ ರಿಯಲ್ ಎಸ್ಟೇಟ್ ವತಿಯಿಂದ ರಿಚರ್ ಎಜ್ಯೂಕೇಷನ್ ಸೂಸೈಟಿ ಸ್ಥಾಪಿಸಿ ವಿಜಯ ಗಣಪತಿ ಮೂರ್ತಿ ಪ್ರತಿಸ್ಥಾಪನೆ,ಗಣಪತಿ ಹೋಮ, ಲಕ್ಷ್ಮಿ ಕಬೇರ ಹೋಮ, ಸೌಭಾಗ್ಯ ಲಲಿತಾ ಹೋಮ, ಮನ್ಯು ಹೋಮ, ರುದ್ರ ಹೋಮ ವಿಧಿವಿಧಾನಗಳು ನಡೆಸಿ ಚಾಲನೆ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಇದು ಒಂದು ಶಿಕ್ಷಣ ಸಂಸ್ಥೆ ಆರಂಭವಲ್ಲ ಭವಿಷ್ಯದ ತಲೆಮಾರುಗಳನ್ನು ಶಕ್ತಿವಂತರಾಗಿಸುವ ದೀರ್ಘಕಾಲಿಕ ಶಿಕ್ಷಣ ಚಳುವಳಿಗೆ ದುಮುಕಿದ್ದೇವೆ.

ಈಗಾಗಲೇ ಎಲ್.ಕೆ.ಜಿ,ಯುಕೆಜಿಯಿಂದ ಹಿಡಿದು ಪ್ರಾಥಮಿಕ 05ತರಗತಿ ಹಂತದವರೆಗೆ ಶಿಕ್ಷಣ ಜೂನ್ ತಿಂಗಳಿಂದ ಪ್ರಾರಂಭಿಸಲಾಗುತ್ತಿದೆ,ಬರುವ ದಿನಗಳಲ್ಲಿ ಹೈಸ್ಕೂಲ್, ಪಿಯುಸಿ,ಡಿಗ್ರಿ ಕಾಲೇಜು, ವೃತ್ತಿಪರ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರಗಳ ಆರಂಭಿಸಲಾಗುವುದು ಇದರಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಬಡವರಿಗೆ ಮಧ್ಯಮ ವರ್ಗದವರಿಗೆ ಬಹಳಷ್ಟು ಅನುಕೂಲವಾಗಲಿದೆ, ಚಿಂಚೋಳಿ ಪಟ್ಟಣದಲ್ಲಿ ರಿಚರ್ ಲ್ಯಾಂಡ್ ರಿಯಲ್ ಎಸ್ಟೇಟ್ ವತಿಯಿಂದ ಕಡಿಮೆ ದರದಲ್ಲಿ ಮನೆಗಳ ನಿವೇಶನಗಳು ಅಭಿವೃದ್ಧಿಪಡಿಸಿ ಈಗ ಶಿಕ್ಷಣ ಕ್ಷೇತ್ರದಲ್ಲಿಯೂ ದೀರ್ಘದೃಷ್ಠಿಯ ನಿರ್ಧಾರಕ್ಕೆಗೊಂಡಿದೆ. ತಾಲ್ಲೂಕಿನಲ್ಲಿ ಕಿಂಡರ್ ಗಾರ್ಡನ್ ನಿಂದ ಪೋಸ್ಟ್ ಗ್ರಾಜ್ಯುಯೇಷನ್ ವರೆಗೆ ಸಂಪೂರ್ಣ ಶಿಕ್ಷಣ ವ್ಯವಸ್ಥೆ ನಿರ್ಮಿಸುವ ಗುರಿಯೋಂದಿಗೆ ರಿಚರ್ ಎಜ್ಯೂಕೇಷನ್ ಸೂಸೈಟಿ ಮುಂದಾಗಿದೆ ಎಂದರು. ಇದಕ್ಕೂ ಮುಂಚೆ ಆಧ್ಯಾತ್ಮಿಕ ಮಹತ್ವವನ್ನು ಹೆಚ್ಚಿಸುವ ಸಲೂವಾಗಿ ವಿಜಯ ಗಣಪತಿ ಮೂರ್ತಿ ಪ್ರತಿಷ್ಠಾಪನೆ ಜೊತೆಗೆ ಹಲವು ಮಹಾ ಹೋಮಗಳು ನಡೆಸಿ ವಿದ್ಯೆ,ಐಶ್ವರ್ಯ, ರಕ್ಷಣೆಯೋಂದಿಗೆ ಸಂಸ್ಥೆಯ ಯಶಸ್ಸಿಗೆ ದೈವ ಆಶೀರ್ವಾದ ದೊರಕಲಿವೆಂಬ ಸಂಕಲ್ಪದೊಂದಿಗೆ ಅನೇಕ ವಿಧಿ ವಿಧಾನಗಳು ನೇರವೇರಿಸಿ ಹೋಮುಹವಾನ ಮಾಡಲಾಯಿತು. ಶಿಕ್ಷಣ ಸಮಿತಿ ಸದಸ್ಯರು,ಸಹಭಾಗಿಗಳಾದ ಶಿವರಾಜ ಪಾಟೀಲ,ಗೌತಮ್ ಬೋಮ್ನಳ್ಳಿ,ಜಾಕೀರಸಾಬ, ನೀಲಕಂಠ ಸೀಳಿನ,ಹಾಗೂ ಕಾರ್ಯಕ್ರಮದಲ್ಲಿ ಶೇಖ್ ಮುಸ್ತಫಾ, ಸಾಭೀರ್ ಖುರೇಷಿ,ಜಿ.ಅಚ್ಯುತರೆಡ್ಡಿ,ರಾಜೇಂದ್ರ ಪ್ರಸಾದ್,ನವೀನಗೌಡ,ಬಾಲಾಜೀರೆಡ್ಡಿ, ಸಂಜೀವಕುಮಾರ ಮೇತ್ರಿಕರ್, ಶ್ರೀಕಾಂತ ವೀಪನಗಂಡ್ಲ,ಅಶೋಕರೆಡ್ಡಿ, ರಾಜಶೇಖರ ಹಿತ್ತಲ,ಅನೇಕರಿದ್ದರು.



ಉದಯವಾಹಿನಿ ಚಿತ್ರ

> ಈ ಭಾಗದ ಭವಿಷ್ಯವನ್ನು ರೂಪಿಸುವ ಮಹತ್ವದ ಐತಿಹಾಸಿಕ ಬೆಳವಣಿಗೆಯಾಗಿ ರಿಚರ್ ಎಜ್ಯೂಕೇಷನ್ ಸೂಸೈಟಿ ಸಂಪೂರ್ಣ ಎಲ್.ಕೆ.ಜಿ ಯಿಂದ ಹಿಡಿದು ಪಿಜಿವರೆಗೆ ಶಿಕ್ಷಣ ಕೇಂದ್ರವಾಗಿ ಅಭಿವೃದ್ಧಿಪಡಿಸುವ ಮಹತ್ತರದ ದೃಷ್ಟಿಯೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ತನ್ನ ಅಧಿಕೃತ ಪ್ರವೇಶವನ್ನು ಎಲ್ಲಾ ರಿಚರ್ ಲ್ಯಾಂಡ್ಸ್ ನಿರ್ದೇಶಕರ ಮಂಡಳಿ ಬೆಂಬಲದೊಂದಿಗೆ ಅಭಿಪ್ರಾಯ ಪಡೆದು ಶಿಕ್ಷಣ ಸಂಸ್ಥೆಯಲ್ಲಿ ಮೊದಲ ಹೆಜ್ಜೆ ಹಾಕಿದ್ದೇವೆ. -ರವಿಕುಮಾರ ವೀಪನಗಂಡ್ಲ ಹೈದ್ರಾಬಾದ್ ಅಧ್ಯಕ್ಷರು,ರಿಚರ್ ಎಜ್ಯೂಕೇಷನ್ ಸೂಸೈಟಿ



ಉದಯವಾಹಿನಿ ಚಿತ್ರ

# ರಾಷ್ಟ್ರೀಯ ಹೆದ್ದಾರಿ ತಡೆದು ನಡೆಸಿದ ಕೋಲಿ ಸಮಾಜದ ಮುಖಂಡರಿಂದ ಪ್ರತಿಭಟನೆ

• **ಉದಯವಾಹಿನಿ, ಚಿತ್ತಾಪುರ**

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಮಹಲರೋಜ ಗ್ರಾಮದ ಶ್ರೀ ಮಲ್ಲಿಕಾರ್ಜುನ ಮುತ್ಯಾ ಅವರ ವಿರುದ್ಧ ದಾಖಲಾದ ಸುಳ್ಳು ಪೋಕ್ಸೋ ಪ್ರಕರಣ ಹಿಂದಕ್ಕೆ ಪಡೆದು ರದ್ದು ಪಡಿಸಬೇಕು, ಸುಳ್ಳು ಪ್ರಕರಣ ದಾಖಲಿಸಿದ,ಮತ್ತು ಅದಕ್ಕೆ ಪ್ರೋತ್ಸಾಹಿಸಿರುವ ಅಧಿಕಾರಿಗಳ, ಬಾಲಕಿಯ ಮತ್ತು ಬಾಲಕಿಯ ಕುಟುಂಬದ ಮಾನ ಹರಾಜು ಮಾಡಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ತಹಶೀಲ್ದಾರ್ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲಿಸಿದರು.

ಚಿತ್ತಾಪುರ ತಾಲ್ಲೂಕಿನ ಹಲಕರ್ಟಿ ಗ್ರಾಮದಲ್ಲಿ ಕೋಲಿ ಸಮಾಜದ ಗ್ರಾಮ ಘಟಕದ ವತಿಯಿಂದ ರಾಷ್ಟ್ರೀಯ ಹೆದ್ದಾರಿ ತಡೆದು ನಡೆಸಿದ ಪ್ರತಿಭಟನೆಯನ್ನುದ್ದೇಶಿಸಿ ಹಲಕರ್ಟಿ ಮುನಿಂದ್ರ ಶಿವಾಚಾರ್ಯರು,ಗ್ರಾಮ ಘಟಕದ ಅಧ್ಯಕ್ಷ ದೊಡ್ಡಪ್ಪ ಕಟ್ಟಿಮನಿ, ಉಪಾಧ್ಯಕ್ಷ ನಿಂಗಪ್ಪ ನೆಲೋಗಿ, ಕಾರ್ಯದರ್ಶಿ ಭೀಮಣ್ಣ ಕೋಲಕುಂದಿ, ಚಿತ್ತಾಪುರ ತಾಲ್ಲೂಕ ಉಪಾಧ್ಯಕ್ಷ ಭಾಗಣ್ಣ ಹೊನಗುಂಟಿ,ತಾಲ್ಲೂಕ ಯುವ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಅಲ್ಲೂರಕರ್, ರಾಮಲಿಂಗ ಬಾನರ್,ಹಣಮಂತ ಸಂಕನೂರ್,ದೇವಿಂದ್ರ ಅಣಕಲ್,ರಾಘವೇಂದ್ರ ಹಲಕರ್ಟಿ, ಸಿದ್ದು ಹಲಕರ್ಟಿ,ಭೀಮು ಹಲಕರ್ಟಿ ಮಾತನಾಡಿದರು.



ಉದಯವಾಹಿನಿ ಚಿತ್ರ

ಸುಮಾರು ಒಂದು ಗಂಟೆಗೂ ಹೆಚ್ಚುಕಾಲ ನಡೆದ ಪ್ರತಿಭಟನೆಯಲ್ಲಿ ನೂರಾರು ಸಂಖ್ಯೆಯಲ್ಲಿ ಅಭಿಮಾನಿಗಳು, ಭಕ್ತಾದಿಗಳು,ವಿವಿಧ ಸಮಾಜದ ಮುಖಂಡರು ಭಾಗವಹಿಸಿದ್ದರು.

ಪ್ರತಿಭಟನೆಗೆ ಪೊಲೀಸ್ ಇಲಾಖೆಯಿಂದ ಬಿಗಿ ಬಂದೋಬಸ್ತ ವಹಿಸಿದರು. ಸಾಲು ನಿಂತ ವಾಹನಗಳು ಸುಮಾರು ಒಂದು ಗಂಟೆಗೂ ಹೆಚ್ಚು ಸಮಯ ನಡೆಸಿದ ಪ್ರತಿಭಟನೆಯಿಂದಾಗಿ ಎರಡು ಬದಿಯಲ್ಲಿ ಸುಮಾರು ಐದು ಕಿಲೋಮೀಟರ್ ದೂರದಲ್ಲಿ ಸಾಲು ಸಾಲು ವಾಹನಗಳು ನಿಂತಿದ್ದವು, ಪ್ರತಿಭಟನೆ ಮುಗಿದ ನಂತರ ಪೊಲೀಸ್ ಇಲಾಖೆಯ ಅಧಾಕಿರಿಗಳು ನಿಬ್ಬಂಧಿಗಳು ವಾಹನ ದಟ್ಟನೆಯನ್ನು ಸರಾಗ ಗೊಳಿಸಿದರು.

# ಯುದ್ಧ ಬೇಡ ಬುದ್ಧ ಬೇಕು: ರಣಧೀರ

• **ಉದಯವಾಹಿನಿ, ಜೇವರ್ಗಿ**

ಯುದ್ಧ ಬೇಡ ಬುದ್ಧ ಬೇಕು. ಗೌತಮ ಬುದ್ಧರ ತತ್ವ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಬೌದ್ಧ ಉಪಾಸಕ ರಣಧೀರ ಕನಗನಹಳ್ಳಿ ಹೇಳಿದರು. ನಂತರ ಧರ್ಮದ ಕುರಿತು ವಿಷ್ಣು ಊಡುಗಿಕರ ಉಪಬೌದ್ಧನ್ಯಾಸ ನೀಡಿದರು. ಪಾಳಿ ಭಾಷೆಯಿಂದ ಕನ್ನಡಕ್ಕೆ ಅನುವಾದವಾದ ಚಿತ್ರಪಟವನ್ನು ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಭಾರತೀಯ ಬೌದ್ಧ ಮಹಾಸಭಾ ವತಿಯಿಂದ ಬಿಡುಗಡೆ ಮಾಡಲಾಯಿತು. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಚಂದ್ರಶೇಖರ್ ಹರವಾಳ, ಭೀಮರಾಯ ನಗನೂರ್, ಪುಂಡಲಿಕ ಗಾಯಕವಾಡ, ಬೌದ್ಧ ಮಹಾಸಭಾ ಅಧ್ಯಕ್ಷ ಮಲ್ಲಣ್ಣ ಕೊಡಚಿ, ತಾಲ್ಲೂಕು ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ರಾಜಶೇಖರ್ ಶಿಲ್ಪಿ, ದಲಿತ ಮುಖಂಡರಾದ ಮಲ್ಲಿಕಾರ್ಜುನ್ ಕೆಲ್ಲೂರು ಅನೇಕರಿದ್ದರು.

# ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆಯಾಗದಂತೆ ಕ್ರಮವಹಿಸಿ: ತಹಶೀಲ್ದಾರ್

• **ಉದಯವಾಹಿನಿ, ಸಿರುಗುಪ್ಪ**

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳು ಕೊರತೆಯಾಗದಂತೆ ಕ್ರಮವಹಿಸಬೇಕು ಎಂದು ತಹಶೀಲ್ದಾರ್ ಗೌಸಿಯಾ ಬೇಗಂ ಹೇಳಿದರು. ತಾಲ್ಲೂಕಿನ ಕರೂರು ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ಆಸ್ಪತ್ರೆಯ ಔಷಧ ದಾಸ್ತಾನು ಪರಿಶೀಲಿಸಿ ಔಷಧ ಕೊರತೆಗೆ ಸಂಬಂಧಿಸಿದಂತೆ ತಾಲ್ಲೂಕು ಆರೋಗ್ಯಾಧಿಕಾರಿ ಜೊತೆಗೆ ಚರ್ಚಿಸಿ ಪರಿಹರಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಅಸ್ಪತ್ರೆಯಲ್ಲಿ ಔಷಧ ಕೊರತೆ ಇದೆ. ಔಷಧಕ್ಕಾಗಿ ತೆಕ್ಕಲಕೋಟೆ, ಸಿರುಗುಪ್ಪ ಇಲ್ಲವೇ ಬಳ್ಳಾರಿಗೆ ಅಲೆದಾಡುವಂತಾಗಿದೆ ಎಂದು ಅಳಲು ತೋಡಿಕೊಂಡರು. ನಂತರ ನಾಡಕಚೇರಿಯಲ್ಲಿ ಕರೂರು ಹೋಬಳಿ ವ್ಯಾಪ್ತಿಯ ಕಂದಾಯ ನಿರೀಕ್ಷಣಾಧಿಕಾರಿ ಹಾಗೂ ಗ್ರಾಮ ಆಡಳಿತ ಅಧಿಕಾರಿಗಳೊಂದಿಗೆ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದರು. ವೈದ್ಯಾಧಿಕಾರಿ ಡಾ. ಬಾಲಾಜಿ, ಕಂದಾಯ ಹನುಮಂತಪ್ಪ, ನಿರೀಕ್ಷಣಾಧಿಕಾರಿ ಗ್ರಾಮ ಆಡಳಿತ ಅಧಿಕಾರಿಗಳಾದ ಕರೂರಿನ ಕೊಟ್ರೇಶ್, ಕೆ.ಬೆಳಗಲ್ಲ ಮಂಜುನಾಥ, ಗುರುರಾಜ ಇದ್ದರು.

# ಆಸ್ಪತ್ರೆ ಮೂಲ ಸೌಲಭ್ಯಕ್ಕೆ ಆದ್ಯತೆ ನೀಡಿ: ಶಾಸಕ ಆರ್.ವಿ. ದೇಶಪಾಂಡೆ

• **ಉದಯವಾಹಿನಿ, ಹಳಿಯಾಳ**

ಸರ್ಕಾರಿ ಆಸ್ಪತ್ರೆಗೆ ಅಂಗವಿಕಲರು, ಗರ್ಭಿಣಿಯರು ಆಗಮಿಸಿದಾಗ ಪ್ರಾಧ್ಯಾನ್ಯತೆಯ ಮೇಲೆ ಚಿಕಿತ್ಸೆ ನೀಡಿ, ಎಲ್ಲರೊಂದಿಗೆ ಸರದಿಯಲ್ಲಿ ನಿಲ್ಲಿಸಬೇಡಿ ಎಂದು ಶಾಸಕ ಆರ್.ವಿ. ದೇಶಪಾಂಡೆ ಹೇಳಿದರು. ಇಲ್ಲಿನ ತಾಲ್ಲೂಕು ಆಸ್ಪತ್ರೆಯಲ್ಲಿ ನಡೆದ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಆಸ್ಪತ್ರೆಯಲ್ಲಿ ಯಾವುದೇ ಮೂಲ ಸೌಕರ್ಯ ಕೊರತೆಯಾಗದಂತೆ ನೋಡಿಕೊಳ್ಳಿ. ರೋಗಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಸೇವೆಗಳನ್ನು ಒದಗಿಸಿ. ಆಸ್ಪತ್ರೆಯಲ್ಲಿ ಕೆಲ ವೈದ್ಯರ, ತಜ್ಞ ವೈದ್ಯರ ಕೊರತೆ ಇದೆ ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ತಿಳಿಸಿದಾಗ, ಕೂಡಲೇ ಗುತ್ತಿಗೆ ಆಧಾರದ ಮೇಲೆ ಜಿಲ್ಲಾ ವೈದ್ಯಾಧಿಕಾರಿಗಳ ಮುಖಾಂತರ ವೈದ್ಯರನ್ನು ನೇಮಕಾತಿ ಮಾಡಿಕೊಳ್ಳಿ ಎಂದರು.

ಆಸ್ಪತ್ರೆಯಲ್ಲಿ ಔಷಧಿಗಳ ವಿತರಣೆಗಾಗಿ ಮೂರು ಬಾರಿ ಟೆಂಡರ್‌ಗೆ ಕರೆದರೂ ಯಾರು ಭಾಗಿಯಾಗದೆ ಇರುವ ಕಾರಣ ಬೇರಡೆಯಿಂದ ಔಷಧಿಗಳನ್ನು ತರಿಸಲಾಗುತ್ತಿದೆ ಎಂದು ತಾಲ್ಲೂಕು ಆರೋಗ್ಯ ಆಡಳಿತ ಅಧಿಕಾರಿಗಳ ತಿಳಿಸುತ್ತಿದ್ದಂತೆ, ಯಾರು ಆರ್ಥಿಕವಾಗಿ ಸಂಪನ್ನರಿದ್ದಾರೆ ಸರ್ಕಾರಿ ಆಸ್ಪತ್ರೆಗೆ ಔಷಧಿ ಹಾಗೂ ಆಸ್ಪತ್ರೆ ಸಲಕರಣೆಗಳನ್ನು ಪೂರೈಸಿರಿ. ಹಾಗೂ ಸ್ಥಳೀಯ ತಾಲ್ಲೂಕು ಆಸ್ಪತ್ರೆಗೆ ಔಷಧಿ ವಿತರಿಸಲು ರೂ.1 ಲಕ್ಷ ಔಷಧಿಗಳ ನೆರವು ನೀಡುತ್ತೇನೆ ಎಂದರು. ಆಯುಷ್ಮಾನ್ ಭಾರತ್ ಸ್ಕಿಮ್ ನಿಂದ ಸುಮಾರು 2699 ರೋಗಿಗಳಿಗೆ ಪ್ರಸಕ್ತ ಸಾಲಿನಲ್ಲಿ ಚಿಕಿತ್ಸೆ ನೀಡಲಾಗಿದೆ ಎಂದರು.

# ಉಡುಪಿ ಜಿಲ್ಲೆ 93 ಗ್ರಾಪಂಗಳಲ್ಲಿ ನೀರಿನ ಕೊರತೆ ಸಾಧ್ಯತೆ: ಡಿಸಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಉಡುಪಿ**

ಉಡುಪಿ ಜಿಲ್ಲೆಯಲ್ಲಿ ಕಾರ್ಕಳದ 14, ಕುಂದಾಪುರದ 36, ಬೈಂದೂರಿನ 15, ಉಡುಪಿಯ 9, ಬ್ರಹ್ಮಾವರದ 13, ಕಾಪುವಿನ 4 ಹಾಗೂ ಹೆಬ್ರಿ ತಾಲ್ಲೂಕಿನಲ್ಲಿ 2 ಪಂಚಾಯಿತಿ ಮತ್ತು ಸಾಲಿಗ್ರಾಮದ 5, ಬೈಂದೂರಿನ 19 ವಾರ್ಡ್‌ಗಳಲ್ಲಿ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬರುವ ಸಾಧ್ಯತೆಗಳಿರುವುದಾಗಿ ಗುರುತಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ. ಹೇಳಿದ್ದಾರೆ.

ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜೂನ್‌ನಲ್ಲಿ ಮುಂಗಾರು ಮಳೆ ಆರಂಭವಾಗುವವರೆಗೆ ಜನರಿಗೆ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ ಅವರು, ಪ್ರಸ್ತುತ ಜಿಲ್ಲೆಯಲ್ಲಿ ಎಲ್ಲಿಯೂ ಕುಡಿಯುವ ನೀರಿನ ಸಮಸ್ಯೆಯಾಗಿಲ್ಲ. ತಾಲ್ಲೂಕುವಾರು ವರದಿಯಂತೆ ಮೇ 15 ರ ವರೆಗೆ ನೀರಿನ ಸಮಸ್ಯೆಯಾಗಿರುವುದಿಲ್ಲ, ಆದರೂ ಈಗಿನಿಂದಲೇ ನೀರಿನ ಸರಬರಾಜಿಗೆ ಯೋಜನೆ ರೂಪಿಸಿಕೊಳ್ಳಬೇಕು ಎಂದು ತಹಶೀಲ್ದಾರ್, ತಾಪಂ ಕಾರ್ಯನಿರ್ವಹಣಾಧಿಕಾರಿ ಹಾಗೂ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರಿಗೆ ಸೂಚನೆ ನೀಡಿದರು. ಜಿಲ್ಲೆಯಲ್ಲಿರುವ ಕುಡಿಯುವ ನೀರಿನ ಮೂಲಗಳಲ್ಲಿ ನೀರು ಎಷ್ಟು ದಿನಗಳಿಗೆ ಸಾಕಾಗಬಹುದು ಎಂಬ ಬಗ್ಗೆ 2 ದಿನಗಳ ಒಳಗಾಗಿ ಪರಿಶೀಲಿಸಿ ವರದಿ ನೀಡಬೇಕೆಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಭಿಯಂತರರಿಗೆ ಸೂಚನೆ ನೀಡಿದ ಅವರು, ಬಾವಿಗಳನ್ನು ಗುರುತಿಸಿ ತಕ್ಷಣಕ್ಕೆ ನೀರು ನೀಡುವ ವ್ಯವಸ್ಥೆ ಮಾಡಬೇಕು, ಸರ್ಕಾರಿ ಬಾವಿಗಳು, ಕೆರೆಗಳು ಸ್ವಚ್ಛವಾಗಿಟ್ಟು, ಪ್ರಾಣಿ, ಪಕ್ಷಿಗಳಿಗೆ ನೀರನ್ನು ಕುಡಿಯಲು ಅನುಕೂಲ ಮಾಡಿಕೊಡಬೇಕು ಎಂದರು.

# ಅಕ್ರಮ ಅಕ್ಕಿ ಸಾಗಾಟ:ಆಹಾರ ಇಲಾಖೆ ದಾಳಿ, ಅಕ್ಕಿ ವಶ

• **ಉದಯವಾಹಿನಿ, ವಿಜಯಪುರ**

ನಗರದ ಆರ್ ಎನ್ ಎಸ್ ಶೋ ರೂಮ್ ಹತ್ತಿರ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ ಮಾಡುತ್ತಿದ್ದ ಸಂದರ್ಭದಲ್ಲಿ ಆಹಾರ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ,ಅಕ್ರಮವಾಗಿ ಸಾಗಿಸುತ್ತಿದ್ದ ಅಕ್ಕಿ ವಶಕ್ಕೆ ಪಡೆದಿದ್ದಾರೆ.

ಆರ್ ಎನ್ ಎಸ್ ಶೋ ರೂಮ್ ಹತ್ತಿರ ಲಾರಿಯಲ್ಲಿ ಅಕ್ರಮವಾಗಿ ಅಕ್ಕಿ ಸಾಗಾಟ ಮಾಡುತ್ತಿರುವ ಸಂದರ್ಭದಲ್ಲಿ ಆಹಾರ ಇಲಾಖೆ , ಪೊಲೀಸ್ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ, 35,060 ಕೆಜಿ ಅಕ್ಕಿ ಹಾಗೂ ಲಾರಿ ವಶಕ್ಕೆ ಪಡೆದು ಟಿ.ರಾಜು ಎಂಬುವವರ ಮೇಲೆ ಜಲ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ದಾಳಿಯಲ್ಲಿ ಆಹಾರ ಇಲಾಖೆಯ ಸಹಾಯಕ ನಿರ್ದೇಶಕ ಅಮರೇಶ ತಾಂಡೂರ, ಆಹಾರ ನಿರೀಕ್ಷಕ ವಿಜಯಕುಮಾರ ಗುಮಶೆಟ್ಟಿ, ಜಲನಗರ ಪಿ ಎಸ್ ಐ ಮಹೇಶ ಸಂಖ, ಪೊಲೀಸ್ ಸಿಬ್ಬಂದಿಗಳಾದ ವೈ.ಎ. ರಾಥೋಡ, ಎಚ್. ಎನ್. ಪೂಜಾರಿ ಹಾಗೂ ಎಂ.ಆರ್ ಶಿಂಧೆ ಇದ್ದರು.



ಉದಯವಾಹಿನಿ ಚಿತ್ರ

# ನೀರು ಕೊರತೆ ಆಗದಂತೆ ಕ್ರಮಕ್ಕೆ ದಿನೇಶ್ ಗುಂಡೂರಾವ್

• **ಉದಯವಾಹಿನಿ, ಮಂಗಳೂರು**

ಜೂನ್ ತಿಂಗಳವರೆಗೆ ಮಂಗಳೂರು ನಗರಕ್ಕೆ ನೀರಿನ ಕೊರತೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.ನಗರಕ್ಕೆ ನೀರು ಪೂರೈಕೆಯಾಗುವ ತುಂಬೆ ಕಿಂಡಿ ಅಣೆಕಟ್ಟಿನ ಬಳಿ ಗಂಗಾಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈ ಬಾರಿ ಮಳೆ ವಿಳಂಬವಾಗಿ ಶುರುವಾಗಲಿದ್ದು, ಬೇಸಗೆ ಅವಧಿ ಏರಿಕೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಈ ಹಿನ್ನೆಲೆಯಲ್ಲಿ ಮಂಗಳೂರು ನಗರಕ್ಕೆ ನೀರು ಪೂರೈಕೆ ಮಾಡುವ ತುಂಬೆ ಅಣೆಕಟ್ಟು ಹಾಗೂ ಅದರ ಮೇಲಿನ ಎಎಂಆರ್ ಡ್ಯಾಂನಲ್ಲಿ ಮಳೆಗಾಲದವರೆಗೆ ನೀರಿನ ಲಭ್ಯತೆ ಕಾಪಾಡಿಕೊಳ್ಳಬೇಕು ಎಂದು ಹೇಳಿದರು. ತುಂಬೆ ಕಿಂಡಿ ಅಣೆಕಟ್ಟಿನ ನೀರಿನ ಗರಿಷ್ಠ ಮಟ್ಟ 6 ಮೀ. ಆಗಿದ್ದು, 10.42 ಎಂಸಿಎಂ ಸಂಗ್ರಹ ಸಾಮರ್ಥ್ಯ ಹೊಂದಿದೆ. ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ, ತುಂಬೆ, ಪುದು, ಅಡ್ಯಾರ್ ಗ್ರಾಮ ಪಂಚಾಯಿತಿಗಳು, ಮೂಲ್ಕಿ ಹಾಗೂ ಉಳ್ಳಾಲ ಪ್ರದೇಶಗಳಿಗೆ ಪ್ರತಿದಿನ ಸುಮಾರು 0.26 ಎಂಸಿಎಂ ನೀರನ್ನು ಅಣೆಕಟ್ಟಿನಿಂದ ಎತ್ತಲಾಗುತ್ತಿದೆ. ಅಣೆಕಟ್ಟಿನ ಹಿನ್ನೀರಿನಲ್ಲಿ ಜ್ಯಾಕ್‌ವೆಲ್ ಪಂಪ್ ಹೌಸ್ ಮೂಲಕ ಐದು ಶುದ್ಧೀಕರಣ ಘಟಕಗಳಿಗೆ ನೀರು ಹರಿಸಿ ಶುದ್ಧೀಕರಿಸಿ ಪಂಪುಗಳ ಮೂಲಕ ಓವರ್ ಹೆಡ್ ಮತ್ತು ಜಿಎಲ್‌ಎಸ್ ಆರ್ ಟ್ಯಾಂಕ್‌ಗಳಿಗೆ ಹರಿಸಿ ಪೂರೈಕೆ ಮಾಡಲಾಗುತ್ತಿದೆ. ಸಮಾರಂಭದಲ್ಲಿ ಮಾಜಿ ಸಚಿವ ಬಿ. ರಮಾನಾಥ ರೈ, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಮಂಗಳೂರು ಮಹಾನಗರ ಪಾಲಿಕೆ ಉಪ ಆಯುಕ್ತ ನರೇಶ್ ಶೆಣೈ, ಪಾಲಿಕೆಯ ಮಾಜಿ ಸದಸ್ಯರು ಹಾಗೂ ಅಧಿಕಾರಿಗಳು ಇದ್ದರು.



ಉದಯವಾಹಿನಿ ಚಿತ್ರ

# ಪಾಲಿಕೆಯಿಂದ ಕಾಮಗಾರಿಗಳ ಬಿಲ್ ಪಾವತಿಯಲ್ಲಿ ವಿಳಂಬ: ಗುತ್ತಿಗೆದಾರರ ಸಂಘದ ಆಕ್ರೋಶ

• **ಉದಯವಾಹಿನಿ, ಬೀದರ್**

ಮಹಾನಗರ ಪಾಲಿಕೆ ಅಡಿಯಲ್ಲಿ ವಿವಿಧ ಯೋಜನೆಗಳಡಿ ಪೂರ್ಣಗೊಳಿಸಿದ ಕಾಮಗಾರಿಗಳ ಬಿಲ್ ಪಾವತಿಯನ್ನು ಹಲವು ತಿಂಗಳಿನಿಂದ ನೀಡದೆ ವಿಳಂಬ ಮಾಡಲಾಗುತ್ತಿದೆ ಎಂದು ಬೀದರ್ ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘ ಆರೋಪಿಸಿದೆ. ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ, ಪಾಲಿಕೆ ಅಡಿಯಲ್ಲಿ ನಡೆಯುತ್ತಿರುವ ವಿವಿಧ



ಉದಯವಾಹಿನಿ ಚಿತ್ರ

ಅಭಿವೃದ್ಧಿ ಯೋಜನೆಗಳ ಕಾಮಗಾರಿಗಳನ್ನು ಸಂಪೂರ್ಣವಾಗಿ ಮುಗಿಸಿ ಬಿಲ್ ಸಲ್ಲಿಸಿದ್ದರೂ ಸಹ ಸುಮಾರು ಆರು ತಿಂಗಳಿಂದ ಒಂದು ವರ್ಷವಾದರೂ ಪಾವತಿ ಮಾಡಲಾಗಿಲ್ಲ ಎಂದು ತಿಳಿಸಿದ್ದಾರೆ.

ಸಣ್ಣ ಗುತ್ತಿಗೆದಾರರು ಸಾಲ ಪಡೆದು ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ಈಗ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ರಂಜಾನ್ ಹಬ್ಬ ಹಾಗೂ ಏಪ್ರಿಲ್ 14ರಂದು ನಡೆಯುವ ಹಬ್ಬದ ಹಿನ್ನೆಲೆ ಗುತ್ತಿಗೆದಾರರಿಗೆ ತೀವ್ರ ತೊಂದರೆ ಉಂಟಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಆದ್ದರಿಂದ ಜಿಲ್ಲಾಧಿಕಾರಿಗಳು ಮಹಾನಗರ ಪಾಲಿಕೆ ಆಯುಕ್ತರಿಗೆ ಸೂಚನೆ ನೀಡಿ ಸಾಧ್ಯವಾದಷ್ಟು ಬೇಗ ಕಾಮಗಾರಿಗಳ ಬಿಲ್ ಪಾವತಿಯನ್ನು ಮಾಡಿಸುವಂತೆ ಗುತ್ತಿಗೆದಾರರ ಸಂಘ ಮನವಿ ಮಾಡಿದೆ. ಒಂದು ವೇಳೆ 8 ದಿನಗಳೊಳಗೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳದಿದ್ದರೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಸಾಂಕೇತಿಕ ಸತ್ಯಾಗ್ರಹ ಧರಣಿ ನಡೆಸಲಾಗುವುದು ಎಂದು ಸಂಘ ಎಚ್ಚರಿಕೆ ನೀಡಿದೆ.

# ಸಂತ ಸೇವಾಲಾಲರ ತತ್ವಾದರ್ಶಗಳನ್ನು ಪಾಲಿಸಿ: ಚವ್ಹಾಣ

• **ಉದಯವಾಹಿನಿ, ಕಮಲನಗರ**

ತಾಲ್ಲೂಕಿನ ಮಾಳೆಗಾಂವ ಗ್ರಾಮದ ವ್ಯಾಪ್ತಿಯ ಲಷ್ಕರ್ ನಾಯಕ್ ತಾಂಡಾದಲ್ಲಿ ಬಂಜಾರಾ ಸಮಾಜದ ಕುಲಗುರು, ಸಮಾಜ ಸುಧಾರಕರಾದ ಸಂತ ಶ್ರೀ ಸೇವಾಲಾಲ್ ಮಹಾರಾಜರ ಮೂರ್ತಿಯನ್ನು ಮಾ.5 ರಂದು ಅನಾವರಣಗೊಳಿಸಲಾಯಿತು.

ಮಹಾರಾಷ್ಟ್ರ ವಿಧಾನ ಪರಿಷತ್ ಸದಸ್ಯರೂ ಆದ ಪೌರಾದೇವಿಯ ಪೂಜ್ಯ ಶ್ರೀ ಬಾಬುಸಿಂಗ್ ಮಹಾರಾಜರ ದಿವ್ಯ ಸಾನ್ನಿಧ್ಯದಲ್ಲಿ ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಶಾಸಕರು, ಸಂತ ಸೇವಾಲಾಲ್ ಮಹಾರಾಜರು ಬಂಜಾರ ಸಮಾಜದ ಧರ್ಮಗುರುಗಳು, ಅಜ್ಞಾನ, ಮೂಢನಂಬಿಕೆ, ದುಶ್ಚಟಗಳು ಒಳಗೊಂಡು ನಾನಾ ರೀತಿಯ ಸಮಸ್ಯೆಗಳಿಂದ ಕೂಡಿದ್ದ ಸಮಾಜವನ್ನು ಸರಿದಾರಿಗೆ ತಂದಿದ್ದಾರೆ.

ಸಮಾನತೆ, ಸೌಹಾರ್ದತೆ ಮತ್ತು ಸತ್ಯನಿಷ್ಠೆಯ ಸಂದೇಶವನ್ನು ನೀಡಿದ ಮಹಾನ್ ಸಂತರಾಗಿದ್ದಾರೆ. ಅವರ ತತ್ವಾದರ್ಶಗಳು ಇಂದಿನ ಯುವಜನತೆಗೆ ದಾರಿದೀಪವಾಗಿದ್ದು, ಅವುಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು. ಸಂತ ಸೇವಾಲಾಲರ ತತ್ವಗಳು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ, ಎಲ್ಲರಿಗೂ ಮಾರ್ಗದರ್ಶನ ನೀಡುವಂತಿವೆ. ಮಹಾರಾಜರ ಮೂರ್ತಿ ಸ್ಥಾಪಿಸಿದರೆ ಮಾತ್ರ ಸಾಲದು. ಅವರ ಅವರ ತತ್ವ ಸಂದೇಶಗಳನ್ನು ಪಾಲಿಸಬೇಕು. ಸಮಾಜದ ಒಳಿತಿಗಾಗಿ ಪ್ರತಿಯೊಬ್ಬರೂ ಕೈಜೋಡಿಸಬೇಕೆಂದು ಶಾಸಕರು ಕರೆ ನೀಡಿದರು.

ಈ ಸಂದರ್ಭದಲ್ಲಿ ಪೂಜ್ಯ ಸಂಗ್ರಾಮ್ ಮಹಾರಾಜರು, ಪೂಜ್ಯ ದೇವಿದಾಸ ಮಹಾರಾಜರು, ಗೋವಿಂದ ಮಹಾರಾಜರು, ಮುಖಂಡರಾದ ಶಿವರಾಜ ಅಲ್ಮಾಜೆ, ಬಾಬುರಾವ ತೋರ್ಣಾವಾಡಿ, ಅನೀಲ ಬಿರಾದಾರ, ಉಮಾಕಾಂತ ದೇಶಮುಖ, ಧನಾಜಿ ರಾಠೋಡ, ಪ್ರತೀಕ ಚವ್ಹಾಣ, ಸಚಿನ ರಾಠೋಡ, ಸುಜಿತ ರಾಠೋಡ, ಪ್ರದೀಪ ಪವಾರ, ಸಂಜು ಜಾಧವ, ಜಾಧವ, ವಸಂತ ರಾಠೋಡ ಹುಲ್ಯಾಳ ಸೇರಿದಂತೆ ಗ್ರಾಮಸ್ಥರು, ಸಮಾಜದ ಮುಖಂಡರು ಹಾಗೂ ಗಣ್ಯರು ಭಾಗವಹಿಸಿ ಸಂತ ಸೇವಾಲಾಲ್ ಮಹಾರಾಜರಿಗೆ ಪುಷ್ಪನಮನ ಸಲ್ಲಿಸಿದರು. ಕಾರ್ಯಕ್ರಮಕ್ಕೂ ಮುನ್ನ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಕಳಸ ಹೊತ್ತ ಮಹಿಳೆಯರು ಡೊಂಗರಗಾಂವ ಕ್ರಾಸ್‌ನಿಂದ ಲಷ್ಕರ್ ನಾಯಕ್ ತಾಂಡಾವರೆಗೆ ಭವ್ಯ ಮೆರವಣಿಗೆ ನಡೆಸಿ ಗಮನ ಸೆಳೆದರು.



ಉದಯವಾಹಿನಿ ಚಿತ್ರ

> ಇಂದಿಗೂ ಸಮಾಜದಲ್ಲಿ ಬಹಳಷ್ಟು ಸಮಸ್ಯೆಗಳಿವೆ. ಕೆಲವರು ಇಂದಿಗೂ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಹಿಂದೇಟು ಹಾಕುತ್ತಿರುವುದು ಕಾಣಿಸುತ್ತಿದೆ. ಎಲ್ಲರೂ ತಮ್ಮ ಮಕ್ಕಳಿಗೆ ತಪ್ಪದೇ ಶಾಲೆಗೆ ಕಳುಹಿಸಬೇಕು. ಉತ್ತಮ ಶಿಕ್ಷಣ ಕೊಡಿಸಬೇಕು. ಅವರಲ್ಲಿ ಉತ್ತಮ ಸಂಸ್ಕಾರಗಳನ್ನು ಬೆಳೆಸಲು ಪ್ರಯತ್ನಿಸಬೇಕು. ಮಕ್ಕಳ ಉಜ್ವಲ ಭವಿಷ್ಯದ ಹಿತೃಷ್ಟಿಯಿಂದ ಯೋಚಿಸಬೇಕು ಎಂದು ಹೇಳಿದ ಅವರು, ನಮ್ಮ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಸಂಕಲ್ಪ ತೊಡಬೇಕು. ಸಮಾಜದ ಶಿಕ್ಷಣ ಪ್ರಮಾಣ ಮತ್ತಷ್ಟು ಸುಧಾರಿಸಬೇಕು. ಈ ದಿಶೆಯಲ್ಲಿ ಎಲ್ಲರೂ ಪ್ರಮಾಣಿಕವಾಗಿ ಪ್ರಯತ್ನಿಸಬೇಕು. -ಪ್ರಭು ಬಿ.ಚವ್ಹಾಣ

# ಮಕ್ಕಳ ರಕ್ಷಣಾ ನೀತಿ ಸಮರ್ಪಕ ಅನುಷ್ಠಾನ ಕಡ್ಡಾಯ

## ತರಬೇತಿ ಕಾರ್ಯಾಗಾರದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಾ. ಕೆ.ಟಿ.ತಿಪ್ಪೇಸ್ವಾಮಿ

• **ಉದಯವಾಹಿನಿ, ಚಿತ್ರದುರ್ಗ**

**ಒಂದು ದಿನದ ತರಬೇತಿ**

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ-2016 ಜಾರಿಗೆ ಬಂದು 10 ವರ್ಷಗಳೇ ಕಳೆದಿದ್ದರೂ, ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಸರಿಯಾಗಿ ಅನುಷ್ಠಾನಗೊಂಡಿಲ್ಲದಿರುವುದು ವಿಷಾಧನೀಯ ಸಂಗತಿ. ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ 18 ವರ್ಷದೊಳಗಿನ ಮಕ್ಕಳ ಸುರಕ್ಷತೆಗಾಗಿ ಜಾರಿಗೆ ತರಲಾಗಿರುವ ಮಕ್ಕಳ ರಕ್ಷಣಾ ನೀತಿ ಕಡ್ಡಾಯವಾಗಿ ಅನುಷ್ಠಾನಗೊಳ್ಳಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಡಾ. ತಿಪ್ಪೇಸ್ವಾಮಿ ಕೆ.ಟಿ. ಅವರು ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಮಿನಿ ಸಭಾಂಗಣದಲ್ಲಿ ಗುರುವಾರ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ-2016 (ಪರಿಷ್ಕರಣೆ-2023) ಹಾಗೂ ಮಕ್ಕಳ ರಕ್ಷಣೆ ಕಾಯ್ದೆ ಕುರಿತು ಡಿಪ್ಲೊಮೋ, ಪಾಲಿಟೆಕ್ನಿಕ್, ಐಟಿಐ ಮತ್ತು ಪ್ಯಾರಾಮೆಡಿಕಲ್ ಕಾಲೇಜು ಪ್ರಾಂಶುಪಾಲರಿಗೆ ಒಂದು ದಿನದ ತರಬೇತಿ ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯದ ವಿವಿಧ ಜಿಲ್ಲೆಗಳ ಐಟಿಐ, ಪ್ಯಾರಾಮೆಡಿಕಲ್ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಭೇಟಿ ನೀಡಿದಾಗ, ಮಕ್ಕಳ ರಕ್ಷಣಾ ನೀತಿಯ ಬಗ್ಗೆ ಅನೇಕ ಪ್ರಾಂಶುಪಾಲರಿಗೆ ಮಾಹಿತಿಯೇ ಇಲ್ಲದಿರುವುದು ಗಮನಕ್ಕೆ ಬಂದಿದೆ. ಈ ರಕ್ಷಣಾ ನೀತಿಯು ಕೇವಲ ಸರ್ಕಾರಿ ಶಾಲೆಗಳಿಗೆ ಮಾತ್ರವಲ್ಲದೆ, ಅನುದಾನಿತ, ಅನುದಾನರಹಿತ ಸಂಸ್ಥೆಗಳು ಹಾಗೂ ಖಾಸಗಿ ಟ್ಯೂಷನ್ ಕೇಂದ್ರಗಳಿಗೂ ಅನ್ವಯಿಸುತ್ತದೆ. ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಕಡ್ಡಾಯವಾಗಿ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸಬೇಕು ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ


> 18 ವರ್ಷದೊಳಗಿನ ಎಲ್ಲಾ ಮಕ್ಕಳ ಸುರಕ್ಷತೆಯು ಶಿಕ್ಷಣ ಸಂಸ್ಥೆಗಳ ಆದ್ಯತೆಯಾಗಬೇಕು. ವಿಶೇಷವಾಗಿ ವಿದ್ಯಾರ್ಥಿನಿಲಯ ಮತ್ತು ಕಾಲೇಜುಗಳಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ಎಚ್ಚರ ವಹಿಸಬೇಕು ಎಂದು ತಿಳಿಸಿದರು. ಇತ್ತೀಚೆಗೆ ಭರಮಸಾಗರದ ವಿದ್ಯಾರ್ಥಿಯೊಬ್ಬನ ಆತ್ಮಹತ್ಯೆ ಪ್ರಕರಣ ಉಲ್ಲೇಖಿಸಿ, ಅನಾಹುತಗಳು ಸಂಭವಿಸಿದ ನಂತರ ಎಚ್ಚೆತ್ತುಕೊಳ್ಳುವ ಬದಲು, ಮುನ್ನೆಚ್ಚರಿಕೆಯಾಗಿ ಮಕ್ಕಳ ರಕ್ಷಣಾ ಕಾಯ್ದೆ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಶಾಲಾ-ಕಾಲೇಜುಗಳಲ್ಲಿ ಮಕ್ಕಳ ಸುರಕ್ಷತೆಗಾಗಿ ಇರುವ ಸಮಿತಿಗಳು ಕೇವಲ ಕಡತಕ್ಕೆ ಸೀಮಿತವಾಗದೆ, ನಿಯಮಿತವಾಗಿ ಸಭೆ ನಡೆಸಿ, ಸಕ್ರಿಯವಾಗಿ ಕೆಲಸ ಮಾಡಬೇಕು. -ಕೆ.ಎಚ್.ವಿಜಯಕುಮಾರ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ

ಈ ಹಿಂದೆ ಕೇವಲ ಶಿಕ್ಷಣ ಇಲಾಖೆಗೆ ಸೀಮಿತವಾಗಿದ್ದ ಮಕ್ಕಳ ರಕ್ಷಣಾ ನೀತಿ, ಈಗ ಆಯೋಗದ ಕ್ರಮದಿಂದಾಗಿ 11 ವಿವಿಧ ಇಲಾಖೆಗಳ ಮೂಲಕ 30 ಪುಟಗಳ ಸಮಗ್ರ ಸುತ್ತೋಲೆಯಾಗಿ ಹೊರಬಂದಿದೆ. ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಗಟ್ಟಲು ಮತ್ತು ಅವರಿಗೆ ಸುರಕ್ಷಿತ ವಾತಾವರಣ ಒದಗಿಸಲು ಅಧಿಕಾರಿಗಳು ಹಾಗೂ ಶಿಕ್ಷಣ ಸಂಸ್ಥೆಗಳು ಸಮನ್ವಯದಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು. ಇಂದಿನ ಡಿಜಿಟಲ್ ಯುಗದಲ್ಲಿ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯ ಪ್ರಭಾವದಿಂದಾಗಿ ಮಕ್ಕಳ ಸಮಸ್ಯೆಗಳು ಜಟಿಲವಾಗುತ್ತಿವೆ. ಇಂತಹ ಸಂದರ್ಭದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರೂಪಿಸಲಾಗಿರುವ ಪಾಲಿಸಿಗಳನ್ನು ಕೇವಲ ದಾಖಲೆಗೆ ಸೀಮಿತಗೊಳಿಸದೆ, ಪ್ರಾಯೋಗಿಕವಾಗಿ ಜಾರಿಗೆ ತರುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ನಿರೂಪಣಾಧಿಕಾರಿ ಡಿ.ಮಂಜುನಾಥ್, ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಾದ ಜಗದೀಶ್, ರಂಗನಾಥ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎ.ಎಂ. ವೀಣಾ, ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಜಿಲ್ಲೆಯ ಡಿಪ್ಲೊಮೋ, ಪಾಲಿಟೆಕ್ನಿಕ್, ಐಟಿಐ ಮತ್ತು ಪ್ಯಾರಾಮೆಡಿಕಲ್ ಕಾಲೇಜು ಪ್ರಾಂಶುಪಾಲರು ಇದ್ದರು.

ನೀಲು ಗುಬ್ಬಚ್ಚಿ ಅಥವಾ ಬ್ಲೂ ಸ್ಪ್ಯಾರೋ ಎಂಬುದು ಇಸ್ರೇಲ್‌ನ ಅತ್ಯಾಧುನಿಕ ಮತ್ತು ಅಷ್ಟೇ ಡೇಂಜರ್ ಮಿಸೈಲ್

# ಖಮೇನಿ ಹತ್ಯೆಗೈದ ಇಸ್ರೇಲ್‌ನ ನೀಲಿ ಗುಬ್ಬಚ್ಚಿ ಎಷ್ಟು ಘಾತಕ?



**ಟೆಲ್ ಅವಿವ್:** ಅದು ಫೆಬ್ರವರಿ 28, ಶನಿವಾರದ ಬೆಳಗಿನ ಜಾವ. ಇರಾನ್ ರಾಜಧಾನಿ ಟೆಹ್ರಾನ್ ಆಗಷ್ಟೇ ಎಚ್ಚರಗೊಂಡಿತ್ತು. ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ, ಇರಾನ್ ರಾಜಧಾನಿಯ ಹೃದಯ ಭಾಗದಲ್ಲಿರುವ ಪಾಶ್ಚರ್ ಸ್ಟ್ರೀಟ್‌ನಲ್ಲಿರುವ ಬಿಗಿ ಭದ್ರತೆಯ ಆವರಣಕ್ಕೆ ಆಗಷ್ಟೇ ಆಗಮಿಸಿದ್ದರು. ಇಸ್ರೇಲಿ ದಾಳಿಯ ಭಯದಿಂದಾಗಿ ಹಿಂದಿನ ವಾರ ಅವರು ಆಳವಾದ ಭೂಗತ ಬಂಕರ್‌ನಲ್ಲಿ ಆಶ್ರಯ ಪಡೆದಿದ್ದರು. ಆದರೆ ಉನ್ನತ ಮಟ್ಟದ ಭದ್ರತಾ ಸಭೆಯಲ್ಲಿ ಭಾಗವಹಿಸಲು 86 ವರ್ಷದ ಖಮೇನಿ ಹೊರ ಜಗತ್ತಿಗೆ ಬಂದಿದ್ದರು. ಆದರೆ ಹೀಗೆ ಹೊರಬಂದ ಕೇವಲ ಒಂದೇ ಗಂಟೆಯಲ್ಲಿ ಖಮೇನಿ ತಮ್ಮ ಕುಟುಂಬದ ಪ್ರಮುಖ ಸದಸ್ಯರ ಜೊತೆ ಭೀಕರವಾಗಿ ಹತ್ಯೆಗೀಡಾದರು. ಆಗಸದಿಂದ ಹಾರಿಬಂದ ನೀಲಿ ಗುಬ್ಬಚ್ಚಿಯೊಂದು, ಖಮೇನಿ ಸಭೆ ನಡೆಸುತ್ತಿದ್ದ ಕಟ್ಟಡವನ್ನು ಸರ್ವನಾಶ ಮಾಡಿತ್ತು.

**ಅರೆ! ಗುಬ್ಬಚ್ಚಿ, ಅದೂ ನೀಲಿ ಬಣ್ಣದ್ದು?** ಎಂದು ನೀವು ಆಶ್ಚರ್ಯಪಡುವ ಮುನ್ನ, ನೀಲು ಗುಬ್ಬಚ್ಚಿ ಅಥವಾ ಬ್ಲೂ ಸ್ಪ್ಯಾರೋ ಎಂಬುದು ಇಸ್ರೇಲ್‌ನ ಅತ್ಯಾಧುನಿಕ ಮತ್ತು ಅಷ್ಟೇ ಡೇಂಜರ್ ಮಿಸೈಲ್ ಎಂಬುದು ನಿಮ್ಮ ಗಮನಕ್ಕಿರಲಿ. ಅಷ್ಟೇ ಅಲ್ಲದೇ ಬ್ಲೂ ಸ್ಪ್ಯಾರೋ ಕ್ಷಿಪಣಿಯನ್ನು ಇಸ್ರೇಲ್‌ನ ಯಾವುದೋ ಸೇನಾ ನೆಲೆಯಿಂದಾಗಲಿ ಅಥವಾ ಇರಾನ್ ಹತ್ತಿರದ ಯುದ್ಧಭೂಮಿಯಿಂದಾಗಿ ಉಡಾಯಿಸಲಾಗಿರಲಿಲ್ಲ. ಬದಲಿಗೆ ಈ ನೀಲಿ ಗುಬ್ಬಚ್ಚಿ ಹೆಚ್ಚು-ಕಡಿಮೆ ಬಾಹ್ಯಾಕಾಶದ ಅಂಚಿನಿಂದ ಹಾರಿಬಂದು ಖಮೇನಿ ಅವರನ್ನು ಬಲಿಪಡಿದೆ. ಇಸ್ರೇಲ್‌ನ ಯುದ್ಧ ವಿಮಾನ ಮುಗಿಲೆತ್ತರಕ್ಕೆ ತಲುಪಿ ಅಲ್ಲಿಂದ ಈ ಖತರ್ನಾಕ್ ಬ್ಲೂ ಸ್ಪ್ಯಾರೋ ಕ್ಷಿಪಣಿಯನ್ನು ನಿಗದಿತ ಗುರಿಯತ್ತ ಹಾರಿಸಿತ್ತು. ಈ ಕ್ಷಿಪಣಿಗೆ ಖಮೇನಿ, ಅವರ ಕುಟುಂಬದ ಸದಸ್ಯರು ಸೇರಿದಂತೆ ಇರಾನ್‌ನ ಡಜನ್‌ಗಟ್ಟಲೇ ಉನ್ನತ ಅಧಿಕಾರಿಗಳು ಬಲಿಯಾದರು.

ಬ್ಲೂ ಸ್ಪ್ಯಾರೋ ಕ್ಷಿಪಣಿ ಆಧುನಿಕ ಮಧ್ಯಪ್ರಾಚ್ಯ ಇತಿಹಾಸದ ಅತ್ಯಂತ ಪ್ರಮುಖ ವ್ಯಕ್ತಿಯ ಹತ್ಯಾ ಯೋಜನೆಯನ್ನು ಅತ್ಯಂತ ಕರಾರುವಕ್ಕಾಗಿ ಯಶಸ್ವಿಗೊಳಿಸಿದೆ. ಇಸ್ರೇಲ್‌ನಲ್ಲಿ ಉತ್ಪಾದಿಸಲಾದ ಈ ಕ್ಷಿಪಣಿ ಸರಿಸುಮಾರು 1,240 ಮೈಲುಗಳು ಅಥವಾ 1,995 ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ. ಅನೇಕ ಸಾಂಪ್ರದಾಯಿಕ ಯುದ್ಧಸಾಮಗ್ರಿಗಳಿಗಿಂತ ಭಿನ್ನವಾಗಿ, ಇದು ಅರೆ-ಬ್ಯಾಲಿಸ್ಟಿಕ್ ಪಥವನ್ನು ಅನುಸರಿಸುತ್ತದೆ. ಉಡಾವಣೆಯ ನಂತರ, ಕ್ಷಿಪಣಿ ವೇಗವಾಗಿ ಮೇಲೇರುತ್ತದೆ ಮತ್ತು ಭೂಮಿಯ ವಾತಾವರಣವನ್ನು ಬಿಟ್ಟು ಬಹುತೇಕ ಬಾಹ್ಯಾಕಾಶದ ಅಂಚನ್ನು ತಲುಪುತ್ತದೆ. ಅಲ್ಲಿಂದ ಮತ್ತೆ ಭೂಮಿಯನ್ನು ಪ್ರವೇಶಿಸಿ ಅದರ ನಿರ್ದಿಷ್ಟ ಗುರಿಯತ್ತ ವೇಗವಾಗಿ ಇಳಿಯುತ್ತದೆ. ಭೂ ವಾತಾವರಣದಿಂದ ನಿರ್ಗಮಿಸುವ ಮತ್ತು ಅದಕ್ಕೆ ಮರುಪ್ರವೇಶ ಪಡೆಯುವ ಈ ಸಾಮರ್ಥ್ಯವು, ವಾಯು-ರಕ್ಷಣಾ ವ್ಯವಸ್ಥೆಗಳ ಪ್ರತಿಬಂಧವನ್ನು ಸಂಕೀರ್ಣಗೊಳಿಸುತ್ತದೆ. ಕಡಿದಾದ ಪಥವು ನೆಲದ ಮೇಲಿರುವವರಿಗೆ ಲಭ್ಯವಿರುವ ಪ್ರತಿಕ್ರಿಯೆ ಸಮಯವನ್ನು ಸಹ ಗಣನೀಯವಾಗಿ ಕಡಿಮೆ ಮಾಡುತ್ತದೆ.

ಸ್ಪ್ಯಾರೋ ಮಾದರಿಯ ಕ್ಷಿಪಣಿ ವ್ಯವಸ್ಥೆಯನ್ನು ಆರಂಭದಲ್ಲಿ ವಾಯು ರಕ್ಷಣಾ ವ್ಯವಸ್ಥೆಗಳನ್ನು ಪರೀಕ್ಷಿಸಲು ಗುರಿ ಕ್ಷಿಪಣಿಯಾಗಿ ಅಭಿವೃದ್ಧಿಪಡಿಸಲಾಗಿತ್ತು. ಆದಾಗ್ಯೂ, ಕಾಲಾನಂತರದಲ್ಲಿ, ಬ್ಲೂ ಸ್ಪ್ಯಾರೋವನ್ನು ಆಕ್ರಮಣಕಾರಿ ಗಾಳಿಯಿಂದ ಮೇಲ್ಮೈಗೆ ಆಯುಧವಾಗಿ ಇಸ್ರೇಲ್ ತನ್ನ ಅಸ್ತ್ರ ಬತ್ತಳಿಕೆಗೆ ಸೇರಿಸಿಕೊಂಡಿತು. ಈ ಕ್ಷಿಪಣಿ 6.5 ಮೀಟರ್ ಉದ್ದ ಮತ್ತು ಸುಮಾರು 1.9 ಟನ್ ತೂಕವಿದೆ. ಇದನ್ನು ಸಾಮಾನ್ಯವಾಗಿ ಇಸ್ರೇಲಿ ಈ-15 ಜೆಟ್‌ಗಳು ಸೇರಿದಂತೆ, ಇತರ ಯುದ್ಧ ವಿಮಾನಗಳಿಂದ ಉಡಾಯಿಸಲಾಗುತ್ತದೆ, ಇದರ ಬೂಸ್ಟರ್ ರಾಕೆಟ್‌ಗಳು ಕ್ಷಿಪಣಿಯನ್ನು ಆಗಸದ ಹೆಚ್ಚಿನ ಎತ್ತರಕ್ಕೆ ತಳ್ಳುತ್ತವೆ. ಈ ರಾಕೆಟ್‌ಗಳ ವೇಗ ಮತ್ತು ಪಥದಿಂದಾಗಿ ,ಶಸ್ತ್ರಾಸ್ತ್ರಗಳು ಪೈಲಟ್‌ಗಳನ್ನು ಗಮನಾರ್ಹ ಅಪಾಯಕ್ಕೆ ತಳ್ಳದೇ, ಹೆಚ್ಚು ರಕ್ಷಿತ ಪರಿಸರದಲ್ಲಿ ಹೆಚ್ಚಿನ ಮೌಲ್ಯದ ಸೂಕ್ಷ್ಮ ಗುರಿಗಳನ್ನು ಹೊಡೆಯಲು ಅವಕಾಶ ಕಲ್ಪಿಸುತ್ತದೆ.

**ಹತ್ಯೆ ಪ್ಲ್ಯಾನ್‌ಗೆ ಬೇಕಾಯ್ತು 2 ದಶಕ:** ಎರಡು ದಶಕಗಳಿಗೂ ಹೆಚ್ಚು ಕಾಲ ಇಸ್ರೇಲ್‌ನ ಸಿಗ್ನಲ್ ಗುಪ್ತಚರ ಘಟಕವಾದ ಯುನಿಟ್ 8200, ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಭದ್ರತಾ ಉಪಕರಣದ ಚಲನವಲನಗಳನ್ನು ಮೇಲ್ವಿಚಾರಣೆ ಮಾಡಿತ್ತು. ವರದಿಗಳ ಪ್ರಕಾರ, ಘಟಕವು ಅಂಗರಕ್ಷಕರ ವೇಳಾಪಟ್ಟಿಗಳನ್ನು ಟ್ರ್ಯಾಕ್ ಮಾಡಿದ್ದಲ್ಲದೇ, ಸಂವಹನಗಳನ್ನು ತಡೆಹಿಡಿದು ಕಾಂಪೌಂಡ್ ಬಳಿ ಇರುವ ಕಣ್ಗಾವಲು ಕ್ಯಾಮೆರಾಗಳನ್ನು ನಿಯಂತ್ರಿಸಿತು. ಪಾಶ್ಚರ್ ಸ್ಟ್ರೀಟ್‌ನಲ್ಲಿರುವ ಕಾಂಪೌಂಡ್ ಸುತ್ತಲಿನ ಸಂಚಾರ ಕ್ಯಾಮೆರಾಗಳು, ಖಮೇನಿ ಚಲನವಲನದ ಮೇಲೆ ನಿಗಾ ಇಡಲು ವಿಶೇಷವಾಗಿ ಉಪಯುಕ್ತವೆಂದು ಸಾಬೀತಾಯಿತು. ಹ್ಯಾಕಿಂಗ್ ಕಾರ್ಯಾಚರಣೆಗಳು ಮತ್ತು ನಿರಂತರ ಮೇಲ್ವಿಚಾರಣೆಯ ಮೂಲಕ, ಇಸ್ರೇಲಿ ಗುಪ್ತಚರ ಸಂಸ್ಥೆಗಳು ಭದ್ರತಾ ಸಿಬ್ಬಂದಿಯ ಆಗಮನದ ಮಾದರಿಗಳನ್ನು ಮತ್ತು ಆವರಣಕ್ಕೆ ಭೇಟಿ ನೀಡುವ ಹಿರಿಯ ಇರಾನ್‌ನ ಅಧಿಕಾರಿಗಳ ಚಲನವಲನಗಳ ಮೇಲೆ ನಿಗಾ ಇಡಲು ಸಾಧ್ಯವಾಯಿತು. ಈ ಎಲ್ಲಾ ಗುಪ್ತಚರ ಮಾಹಿತಿಗಳನ್ನು ಸಂಗ್ರಹಿಸಿ, ಟೆಲ್ ಅವೀವ್‌ನಲ್ಲಿರುವ ಕಮಾಂಡ್ ಕೇಂದ್ರಗಳಿಗೆ ರವಾನಿಸಲಾಯಿತು. ಖಮೇನಿ ಸಭೆ ನಡಸುತಿದ್ದ ಆವರಣದ ಚಟುವಟಿಕೆಯ ವಿವರವಾದ ಚಿತ್ರವನ್ನು ಪಡೆದುಕೊಂಡ ಇಸ್ರೇಲ್ ವಾಯುಸೇನೆ, ತನ್ನ ಈ-15 ಯುದ್ಧ ವಿಮಾನದ ಮೂಲಕ ಬ್ಲೂ ಸ್ಪ್ಯಾರೋ ಕ್ಷಿಪಣಿಯನ್ನು ನಭಕ್ಕೆ ಚಿಮ್ಮಿಸಿತು. ಯುದ್ಧ ವಿಮಾನದಿಂದ ಬೇರ್ಪಟ್ಟ ಬ್ಲೂ ಸ್ಪ್ಯಾರೋ ಕ್ಷಿಪಣಿ, ಬಹುತೇಕ ಆಗಸದ ಅಂಚಿಗೆ ಹೋಗಿ ಅಲ್ಲಿಂದ ನೇರವಾಗಿ ನಿಗದಿತ ಗುರಿಗೆ ಅಪ್ಪಳಿಸಿತು. ಕ್ಷಣಾರ್ಧದಲ್ಲಿ ಆಯತೊಲ್ಲಾ ಅಲಿ ಖಮೇನಿ ಮತ್ತು ಅವರ ಕುಟುಂಬದ ಸದಸ್ಯರು ಹಾಗೂ ಇರಾನ್‌ನ ಅನೇಕ ಹಿರಿಯ ಅಧಿಕಾರಿಗಳು ಸಾವನ್ನಪ್ಪಿದ್ದರು. ಹೀಗೆ ಬ್ಲೂ ಸ್ಪ್ಯಾರೋ ಕ್ಷಿಪಣಿ ತನ್ನ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದೆ.

### ನೀಲಿ ಗುಬ್ಬಚ್ಚಿ ಎಷ್ಟು ಡೇಂಜರ್?

**ಇಸ್ರೇಲಿ ಅಧಿಕಾರಿಗಳು ಮತ್ತು ಕಾರ್ಯಾಚರಣೆಯ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿರುವವರ ಪ್ರಕಾರ, ಈ ಬ್ಲೂ ಸ್ಪ್ಯಾರೋ ಕ್ಷಿಪಣಿ ದಾಳಿಯು ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆ ಮಾಡಲು ಮತ್ತು ಇಸ್ಲಾಮಿಕ್ ಗಣರಾಜ್ಯದ ಕಮಾಂಡ್ ರಚನೆಯನ್ನು ದುರ್ಬಲಗೊಳಿಸಲು ವಿನ್ಯಾಸಗೊಳಿಸಲಾದ, ಇಸ್ರೇಲ್-ಅಮೆರಿಕ ಜಂಟಿ ದಾಳಿಯಾದ ಆಪರೇಷನ್ ಎಪಿಕ್ ಫ್ಯೂರಿಯ ಭಾಗವಾಗಿತ್ತು. ಈ ದಾಳಿಯು ತಿಂಗಳುಗಳ ಗುಪ್ತಚರ ಸಂಗ್ರಹಣೆ, ವರ್ಷಗಳ ಕಣ್ಗಾವಲು ಮತ್ತು ಖಮೇನಿಯ ಸ್ಥಳದ ಬಗ್ಗೆ ಪಡೆದುಕೊಂಡ ಹೊಸ ಮಾಹಿತಿಯ ಕೊನೆಯ ನಿಮಿಷದ ಹೊಂದಾಣಿಕೆಯನ್ನು ಸಂಯೋಜಿಸಿತ್ತು.**

- **ಆಯತೊಲ್ಲಾ ಅಲಿ ಖಮೇನಿ ಹೊಡೆದು ಹಾಕಿತು ಕದ್ದುಮುಚ್ಚಿ!**
- **ಇಸ್ರೇಲ್‌ನ ಬ್ಲೂ ಸ್ಪ್ಯಾರೋ ಕ್ಷಿಪಣಿ ಬಗ್ಗೆ ಸಂಪೂರ್ಣ ಮಾಹಿತಿ.**
- **ಆಗಸದ ಅಂಚಿನಿಂದ ನಿರ್ದಿಷ್ಟ ಗುರಿ ಹೊಡೆಯುವ ಖತರ್ನಾಕ್ ಕ್ಷಿಪಣಿ.**




### ಇರಾಕ್‌ನಲ್ಲಿ ಪತ್ತೆಯಾದ ಅವಶೇಷ:

**ಇನ್ನು ಬ್ಲೂ ಸ್ಪ್ಯಾರೋ ಕ್ಷಿಪಣಿಗೆ ಸೇರಿದ್ದೆಂದು ನಂಬಲಾದ ಅವಶೇಷಗಳು ಪಶ್ಚಿಮ ಇರಾಕ್‌ನಲ್ಲಿ ಪತ್ತೆಯಾಗಿವೆ. ಟೆಲಿಗ್ರಾಫ್ ವರದಿಯ ಪ್ರಕಾರ, ಮರುಭೂಮಿ ಭೂಪ್ರದೇಶದಲ್ಲಿ ಹರಡಿರುವ ಉದ್ದವಾದ ಮತ್ತು ಬೂದು ಬಣ್ಣದ, ಸಿಲಿಂಡರಾಕಾರದ ತುಣುಕುಗಳು, ಖಮೇನಿ ಹತ್ಯೆಗೈದ ಬ್ಲೂ ಸ್ಪ್ಯಾರೋ ಕ್ಷಿಪಣಿಯ ಅವಶೇಷಗಳಾಗಿವೆ. ಬ್ಲೂ ಸ್ಪ್ಯಾರೋ ಇಸ್ರೇಲಿ ಕ್ಷಿಪಣಿ ಕುಟುಂಬದ ಭಾಗವಾಗಿದ್ದು, ಇದರಲ್ಲಿ ಬ್ಲ್ಯಾಕ್ ಸ್ಪ್ಯಾರೋ ಮತ್ತು ಸಿಲ್ವರ್ ಸ್ಪ್ಯಾರೋ ಕ್ಷಿಪಣಿಗಳು ಸೇರಿವೆ. ಈ ಕ್ಷಿಪಣಿಗಳನ್ನು ಮೂಲತಃ ಸ್ಕಡ್ ಮಾದರಿಯ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಅನುಕರಿಸಲು ವಿನ್ಯಾಸಗೊಳಿಸಲಾಗಿತ್ತು. ಇದು 1991ರ ಪರ್ಷಿಯನ್ ಕೊಲ್ಲಿ ಯುದ್ಧದ ಸಮಯದಲ್ಲಿ, ಇಸ್ರೇಲ್ ಮೇಲೆ ಇರಾಕ್ ಹಾರಿಸಿದ್ದ ಕ್ಷಿಪಣಿಗಳ ಮಾದರಿಯಲ್ಲೇ ಇದೆ. ಇರಾನ್ ಸಂಘರ್ಷದ ನೆರಳಲ್ಲಿ ಅಮೆರಿಕ ಡೂಮ್ಸ್ ಡೇ ಕ್ಷಿಪಣಿ ಪರೀಕ್ಷೆ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು.**

## ಅಸ್ಸಾಂನಲ್ಲಿ ಸುಖೋಯ್ 30 ಎಂಕೆಐ ಯುದ್ಧ ವಿಮಾನ ಪತನ

**ನವದೆಹಲಿ:** ಅಸ್ಸಾಂನ ಕರ್ಬಿ ಅಂಗ್ಲಾಂಗ್ ಜಿಲ್ಲೆಯಲ್ಲಿ ಭಾರತೀಯ ವಾಯುಪಡೆಯ (ಐಎಎಫ್) ಸುಖೋಯ್ -30 ಎಂಕೆಐ ಯುದ್ಧ ವಿಮಾನ ಪತನಗೊಂಡಿದೆ. ವಿಮಾನದಲ್ಲಿದ್ದ ಇಬ್ಬರು ಪೈಲಟ್‌ಗಳು ಸಾವನ್ನಪ್ಪಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾರ್ಯಾಚರಣೆಯಲ್ಲಿದ್ದ ಯುಧ ವಿಮಾನ ಜೋರ್ಹತ್‌ನಿಂದ ಸುಮಾರು 60 ಕಿ.ಮೀ ದೂರದಲ್ಲಿರುವ ಕರ್ಬಿ ಅಂಗ್ಲಾಂಗ್ ಪ್ರದೇಶದಲ್ಲಿ ಪತನಗೊಂಡಿದೆ ಎಂದು ಐಎಎಫ್ ಸಂಕ್ಷಿಪ್ತ ಹೇಳಿಕೆಯಲ್ಲಿ ತಿಳಿಸಿದೆ.ದುರಂತದಲ್ಲಿ ಸ್ಕ್ವಾಡ್ರನ್ ಲೀಡರ್ ಅನುಜ್ ಮತ್ತು ಫ್ಲೈಟ್ ಲೆಫ್ಟಿನೆಂಟ್ ಪೂರ್ವೇಶ್ ದುರಾಗ್ಕರ್ ಮೃತಪಟ್ಟಿದ್ದಾರೆ.

ಜೋರ್ಹತ್ ವಾಯುನೆಲೆಯಿಂದ ಹಾರಿದ ಸ್ವಲ್ಪ ಸಮಯದ ನಂತರ ವಿಮಾನ ಕಾಣೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಸುಖೋಯ್ -30 ಎಂಕೆಐ ರಷ್ಯಾದ ವಿಮಾನ ತಯಾರಕ ಸುಖೋಯ್ ಅಭಿವೃದ್ಧಿಪಡಿಸಿದ ಎರಡು ಆಸನಗಳ ಬಹುಪಾತ್ರದ ದೀರ್ಘ-ಶ್ರೇಣಿಯ ಯುದ್ಧ ವಿಮಾನವಾಗಿದೆ.



ಇದನ್ನು ಈಗ ಭಾರತೀಯ ವಾಯುಪಡೆ (ಐಎಎಫ್) ಗಾಗಿ ಎಚ್‌ಎಎಲ್ ಪರವಾನಗಿ ಅಡಿಯಲ್ಲಿ ನಿರ್ಮಿಸಲಾಗಿದೆ. ಐಎಎಫ್ 260 ಕ್ಕೂ ಹೆಚ್ಚು ಸುಖೋಯ್ -30ಎಂಕೆಐ ಜೆಟ್‌ಗಳ ಫ್ಲೀಟ್ ಅನ್ನು ನಿರ್ವಹಿಸುತ್ತದೆ. ಈ ದುಃಖದ ಸಮಯದಲ್ಲಿ ಐಎಎಫ್‌ನ ಎಲ್ಲಾ ಸಿಬ್ಬಂದಿ ಸಂತಾಪ ವ್ಯಕ್ತಪಡಿಸುತ್ತಾರೆ ಮತ್ತು ದುಃಖಿತ ಕುಟುಂಬದೊಂದಿಗೆ ದೃಢವಾಗಿ ನಿಲ್ಲುತ್ತಾರೆ ಎಂದು ಐಎಎಫ್‌ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದೆ. ಗುವಾಹಟಿಯಲ್ಲಿ ರಕ್ಷಣಾ ವಕ್ತಾರರು ವಿಮಾನದ ಅವಶೇಷಗಳು ಮುಂಜಾನೆ ಪತ್ತೆಯಾಗಿವೆ ಎಂದು ಹೇಳಿದರು.ಪೊಲೀಸರು,ಸ್ಥಳೀಯ ಆಡಳಿತ ಮತ್ತು ಗ್ರಾಮಸ್ಥರ ಸಹಾಯದಿಂದ ಐಎಎಫ್ ಶೋಧ ಮತ್ತು ರಕ್ಷಣಾ ತಂಡವು ಅವಶೇಷಗಳನ್ನು ಪತ್ತೆಹಚ್ಚಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

## ಬಿಹಾರದಲ್ಲಿ ಶೀಘ್ರದಲ್ಲೇ ಬಿಜೆಪಿಗೆ ಸಿಎಂ ಸ್ಥಾನ

**ಪಾಟ್ನಾ:** ಬಿಹಾರದಲ್ಲಿ ಹೊಸ ರಾಜ್ಯ ಸರ್ಕಾರ ರಚನೆ ಕುರಿತು ಚರ್ಚೆಗಳು ತೀವ್ರಗೊಳ್ಳುತ್ತಿದ್ದಂತೆ ಬಿಜೆಪಿ ಮುಖ್ಯಮಂತ್ರಿ ಹುದ್ದೆಯನ್ನು ಭದ್ರಪಡಿಸಿಕೊಳ್ಳಲು ಸಜ್ಜಾಗಿದೆ. ಮೂಲಗಳ ಪ್ರಕಾರ, ಮುಖ್ಯಮಂತ್ರಿ ನಿತೀಶ್ ಕುಮಾರ್ ತಕ್ಷಣ ರಾಜೀನಾಮೆ ನೀಡುವ ಸಾಧ್ಯತೆಯಿಲ್ಲ. ಏಪ್ರಿಲ್ 10ರವರೆಗೆ ಅವರು ಅಧಿಕಾರದಲ್ಲಿ ಮುಂದುವರಿಯಬಹುದು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ನಿತೀಶ್ ಕುಮಾರ್ ನಡುವೆ ರಾಜಕೀಯ ಪರಿವರ್ತನೆಯ ಕುರಿತು ಚರ್ಚೆಗಳು ನಡೆದಿವೆ ಎನ್ನಲಾಗಿದೆ. ನಿತೀಶ್ ಕುಮಾರ್ ರಾಜ್ಯಸಭೆಗೆ ಆಯ್ಕೆಯಾದ ನಂತರವೇ ಸಿಎಂ ಸ್ಥಾನದ ಬದಲಾವಣೆಯಾಗುವ ನಿರೀಕ್ಷೆಯಿದೆ.

ರಾಜ್ಯಸಭೆಯ ಅವಧಿ ಪ್ರಾರಂಭವಾಗುವ ಏಪ್ರಿಲ್ 10ರವರೆಗೆ ನಿತೀಶ್ ಕುಮಾರ್ ಬಿಹಾರದ ಮುಖ್ಯಮಂತ್ರಿಯಾಗಿ ಉಳಿಯುತ್ತಾರೆ ಎಂದು ಮೂಲಗಳು ಸೂಚಿಸಿವೆ. ಆ ಸಮಯದಲ್ಲಿ ಹೊಸ ಸರ್ಕಾರದ ರಚನೆಯೂ ನಡೆಯುವ ನಿರೀಕ್ಷೆಯಿದೆ. ನಿತೀಶ್ ಕುಮಾರ್ ಗುರುವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಮ್ಮುಖದಲ್ಲಿ ರಾಜ್ಯಸಭೆಗೆ ನಾಮಪತ್ರ ಸಲ್ಲಿಸಿದ್ದರು. ಬಿಹಾರದಲ್ಲಿ ಸುಮಾರು 2 ದಶಕಗಳ ಕಾಲ ಅಧಿಕಾರದಲ್ಲಿದ್ದ ನಿತೀಶ್ ಕುಮಾರ್ ಕ್ರಮೇಣ ರಾಷ್ಟ್ರೀಯ ರಾಜಕೀಯದತ್ತ ಗಮನ ಹರಿಸಬಹುದೆಂಬ ಊಹಾಪೋಹಗಳಿಗೆ ಈ ಬೆಳವಣಿಗೆ ಪುಷ್ಟಿ ನೀಡಿದೆ. ಆದರೆ, ನಿತೀಶ್ ಕುಮಾರ್ ಕೇಂದ್ರ ಸಚಿವ ಸಂಪುಟಕ್ಕೆ ಸೇರುವ ಬಗ್ಗೆ ಮೈತ್ರಿಕೂಟದೊಳಗೆ ಯಾವುದೇ ಚರ್ಚೆಗಳು ನಡೆದಿಲ್ಲ.

ಹೊಸ ಸಂಪುಟ ರಚನೆಯಲ್ಲಿ, ಜೆಡಿಯು 14 ಸಚಿವ ಸ್ಥಾನಗಳನ್ನು ಪಡೆಯುವ ಸಾಧ್ಯತೆಯಿದೆ. ಬಿಜೆಪಿಗೆ ಮುಖ್ಯಮಂತ್ರಿ ಸೇರಿದಂತೆ 13 ಸಚಿವ ಸ್ಥಾನಗಳು ಸಿಗುವ ನಿರೀಕ್ಷೆಯಿದೆ.

## 13 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ: ಆಂಧ್ರ ಸರ್ಕಾರದಿಂದ ಮಹತ್ವದ ಘೋಷಣೆ

**ಅಮರಾವತಿ:** ಕರ್ನಾಟಕ ಬಜೆಟ್ ಭಾಷಣದ ವೇಳೆ ಸಿಎಂ ಸಿದ್ದರಾಮಯ್ಯ ಅವರು 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮ ಬಳಕೆ ನಿಷೇಧ ಘೋಷಣೆ ಮಾಡಿದ್ದರು. ಇದಾದ ಕೆಲವೇ ಹೊತ್ತಲ್ಲಿ ಆಂಧ್ರಪ್ರದೇಶ ಸರ್ಕಾರ 13 ವರ್ಷದ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧಿಸಿ ಘೋಷಣೆ ಮಾಡಿದೆ.

ವಿಧಾನಸಭೆಯಲ್ಲಿ ಈ ಬಗ್ಗೆ ಮಾತನಾಡಿದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು, 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮವನ್ನು ನಿಷೇಧಿಸುವ ಬಗ್ಗೆ ಬಂದಿರುವ ಸಲಹೆಗಳನ್ನು ನಾವು ಸ್ವೀಕರಿಸಿದ್ದೇವೆ. ಖಂಡಿತವಾಗಿಯೂ, ಮುಂಬರುವ 90 ದಿನಗಳಲ್ಲಿ ಇದನ್ನೂ ನಾವು ಜಾರಿಗೆ ತರುತ್ತೇವೆ ಎಂದಿದ್ದಾರೆ.

ಸಾಮಾಜಿಕ ಜಾಲತಾಣ ನಿಷೇಧ 13 ವರ್ಷ ಅಥವಾ 16 ವರ್ಷವಾಗಿರಬೇಕೆ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಎಲ್ಲರೂ ಒಪ್ಪಿದರೆ, ಈ ಬಗ್ಗೆ ನಾವು ನಿರ್ಧರಿಸುತ್ತೇವೆ ಎಂದು ಅವರು ಮಾಹಿತಿ ಹಂಚಿಕೊಂಡಿದ್ದಾರೆ. ಕರ್ನಾಟಕದಲ್ಲಿ 16 ವರ್ಷದೊಳಗಿನ ಮಕ್ಕಳಿಗೆ ಕರ್ನಾಟಕದಲ್ಲಿ ಸಾಮಾಜಿಕ ಜಾಲತಾಣ ನಿಷೇಧಿಸಿ ಸಿಎಂ ಸಿದ್ದರಾಮಯ್ಯ ಬಜೆಟ್ ಭಾಷಣದಲ್ಲಿ ಘೋಷಿಸಿದರು. 2026-27ನೇ ಸಾಲಿನ ಬಜೆಟ್ ಮಂಡನೆ ವೇಳೆ ಮಾತನಾಡಿದ ಅವರು, ಹೆಚ್ಚುತ್ತಿರುವ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಬೀರುವ ಅಡ್ಡಪರಿಣಾಮಗಳನ್ನು ತಡೆಗಟ್ಟುವ ಉದ್ದೇಶದಿಂದ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣದ ಬಳಕೆಯನ್ನು ನಿಷೇಧಿಸಲಾಗುವುದು ಎಂದು ತಿಳಿಸಿದರು.



ವಿದ್ಯಾರ್ಥಿಗಳ ಆರೋಗ್ಯ, ಭವಿಷ್ಯ ಮತ್ತು ವ್ಯಕ್ತಿತ್ವ ರೂಪಿಸುವ ಸ್ಥಳವಾಗಿರುವ ಶಾಲಾ-ಕಾಲೇಜುಗಳು, ವಿಶ್ವಿದ್ಯಾಲಯಗಳಲ್ಲಿ ಮಾದಕ ವಸ್ತುಗಳ ಬಳಕೆಯನ್ನು ತಡೆಯಲು ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮ, ಕಠಿಣ ನಿಯಮ ಸಹಾಯ ಕೇಂದ್ರಗಳ ಮೂಲಕ ಮಾದಕ ವಸ್ತುಗಳ ಮೇಲೆ ಕಟ್ಟುನಿಟ್ಟಿನ ನಿರ್ಬಂಧ ಹೇರಲಾಗುವುದು ಎಂದಿದ್ದರು. ಇದರ ಬೆನ್ನಲ್ಲೇ ಆಂಧ್ರದಲ್ಲಿ ಸಹ ಇದೇ ಕ್ರಮಕ್ಕೆ ಅಲ್ಲಿನ ಸರ್ಕಾರ ಮುಂದಾಗಿದೆ.

## ಇರಾನ್ ದಾಳಿಗೆ ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಭಾರೀ ಹಾನಿ

**ಜೆರುಸಲೆಮ್:** ಇರಾನ್ ಯುದ್ಧವು ಈ ಪ್ರದೇಶ ಮತ್ತು ಅದರಾಚೆಗೆ ತೀವ್ರವಾಗಿ ಹರಡಿದೆ, ಮಧ್ಯಪ್ರಾಚ್ಯದ ಬಹುತೇಕ ಎಲ್ಲಾ ದೇಶಗಳು ಕ್ಷಿಪಣಿ ದಾಳಿಗಳು, ಡ್ರೋನ್ ದಾಳಿಗಳು ಅಥವಾ ಚೂರುಗಳಿಂದ ಹಾನಿಗೊಳಗಾಗಿವೆ, ಅನೇಕ ಸಾವುನೋವುಗಳು ವರದಿಯಾಗಿವೆ ಮತ್ತು ಪ್ರಮುಖ ರಾಯಭಾರ ಕಚೇರಿಗಳು, ಆರ್ಥಿಕ ಇಂಜಿನ್‌ಗಳು ಮತ್ತು ಮಾರ್ಗಗಳು ಮುಚ್ಚಲ್ಪಟ್ಟಿವೆ.

ಶ್ರೀಲಂಕಾದ ಕರಾವಳಿಯಲ್ಲಿ, ಯುದ್ಧವು ತೀವ್ರಗೊಂಡಾಗ ಮತ್ತು ಅದರ ಹೆಜ್ಜೆಗುರುತು ಬೆಳೆಯುತ್ತಿದ್ದಂತೆ ಯುಎಸ್ ಜಲಾಂತರ್ಗಾಮಿ ಇರಾನಿನ ಯುದ್ಧನೌಕೆಯನ್ನು ಮುಳುಗಿಸಿತು. ಗಲ್ಫ್ ವಾಯುಪ್ರದೇಶಗಳು ಹೆಚ್ಚಾಗಿ ಮುಚ್ಚಲ್ಪಟ್ಟಿರುವುದರಿಂದ, ಕ್ರೂಸ್ ಹಡಗುಗಳು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು ಸಾಧ್ಯವಿಲ್ಲ ಮತ್ತು ಪ್ರಮುಖ ವಿಮಾನಯಾನ ಸಂಸ್ಥೆಗಳು ವಿಮಾನಗಳನ್ನು ರದ್ದುಗೊಳಿಸುವುದರಿಂದ, ಲಭ್ಯವಿರುವ ಯಾವುದೇ ವಾಣಿಜ್ಯ ವಿಮಾನದಲ್ಲಿ ಮಧ್ಯಪ್ರಾಚ್ಯ ದೇಶಗಳನ್ನು ತೊರೆಯುವಂತೆ ವಿದೇಶಿ ಸರ್ಕಾರಗಳು ತಮ್ಮ ನಾಗರಿಕರನ್ನು ಒತ್ತಾಯಿಸುತ್ತಿವೆ. ಆರು ರಾಷ್ಟ್ರಗಳಲ್ಲಿ ತುರ್ತು ಸಿಬ್ಬಂದಿ ಮತ್ತು ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ ಎಂದು ಅಮೆರಿಕ ಹೇಳಿದೆ. ಒಂದು ಡಜನ್‌ಗಿಂತಲೂ ಹೆಚ್ಚು ದೇಶಗಳ ನಾಗರಿಕರಿಗೆ ಹೊರಹೋಗುವಂತೆ ಅದು ಸಲಹೆ ನೀಡಿದೆ. ರಷ್ಯಾದಿಂದ ಜರ್ಮನಿ ಮತ್ತು ಭಾರತಕ್ಕೆ ಸರ್ಕಾರಗಳು ಸಹ ವಾಪಸಾತಿ ವಿಮಾನಗಳನ್ನು ನಡೆಸಲು ಪರದಾಡಿದವು. ಇರಾನ್‌ನ ಹುತಾತ್ಮರು ಮತ್ತು ಮಾಜಿ ಸೈನಿಕರ ವ್ಯವಹಾರಗಳ ಪ್ರತಿಷ್ಠಾನದ ಪ್ರಕಾರ, ಕನಿಷ್ಠ 1,045 ಜನರು ಸಾವನ್ನಪ್ಪಿದ್ದಾರೆ. ಮಿನಾಬ್‌ನ ಪ್ರಾಥಮಿಕ ಶಾಲೆಯ ಮೇಲೆ ನಡೆದ ದಾಳಿಯಲ್ಲಿ 160 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ಸರ್ಕಾರಿ ಸ್ವಾಮ್ಯದ ಐಆರ್‌ಎನ್‌ಎ ಸುದ್ದಿ ಸಂಸ್ಥೆ ತಿಳಿಸಿದೆ. ಈ ಘಟನೆಯಲ್ಲಿ ತಾನು ಭಾಗಿಯಾಗಿಲ್ಲ ಎಂದು ಇಸ್ರೇಲ್ ಹೇಳುತ್ತದೆ. ಇದರ ಬಗ್ಗೆ ವರದಿಗಾರರು ಕೇಳಿದಾಗ, ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ತಮ್ಮ ಬಳಿ ವಿವರಗಳಿಲ್ಲ ಆದರೆ ಯುಎಸ್ ಉದ್ದೇಶಪೂರ್ವಕವಾಗಿ ಶಾಲೆಯನ್ನು ಗುರಿಯಾಗಿಸಿ ಕೊಂಡಿಲ್ಲ ಎಂದು ಹೇಳಿದರು.



**ಹಾನಿ ಮತ್ತು ಪರಿಣಾಮ:** ಯುಎಸ್-ಇಸ್ರೇಲಿ ದಾಳಿಗಳು ಪರಮಾಣು ಮೂಲಸೌಕರ್ಯ, ಕ್ಷಿಪಣಿ ಉಡಾವಣಾ ಯಂತ್ರಗಳು, ಟೆಹ್ರಾನ್‌ನಲ್ಲಿರುವ ಸರ್ಕಾರಿ ಕಟ್ಟಡಗಳು ಮತ್ತು ನಾಯಕತ್ವದ ಸಂಯುಕ್ತಗಳನ್ನು ಗುರಿಯಾಗಿ ಸಿಕೊಂಡಿವೆ, ಸುಪ್ರೀಂ ಲೀಡರ್ ಅಲಿ ಖಮೇನಿ ಮತ್ತು ಇತರ ಉನ್ನತ ಮಿಲಿಟರಿ ಅಧಿಕಾರಿಗಳನ್ನು ಕೊಂದಿವೆ. ಇರಾನಿನವರು ತಮ್ಮ ಮನೆಗಳಿಗೆ ಹಾನಿಯಾಗಿದೆ ಎಂದು ರಾಜ್ಯ ಟಿವಿಯಲ್ಲಿ ವರದಿಗಳು ಉಲ್ಲೇಖಿಸಿವೆ. ಬೀಟ್ ಶೆಮೆಶ್‌ನಲ್ಲಿ ನಡೆದ ದಾಳಿಯಲ್ಲಿ ಒಂಬತ್ತು ಮಂದಿ ಸಾವನ್ನಪ್ಪಿದರು. ಬೀಟ್ ಶೆಮೆಶ್‌ನಲ್ಲಿರುವ ಸಿನಗಾಗ್ ಮತ್ತು ಸಾರ್ವಜನಿಕ ಆಶ್ರಯ, ಟೆಲ್ ಅವಿವ್‌ನಲ್ಲಿರುವ ಅಪಾರ್ಟ್ಮೆಂಟ್ ಕಟ್ಟಡ, ಜೆರುಸಲೆಮ್‌ನ ರಸ್ತೆ ಇರಾನಿನ ಕ್ಷಿಪಣಿಗಳು ಹೊಡೆದವು. ಇರಾನಿನ ಸಿಡಿತಲೆ ಜೆರುಸಲೆಮ್‌ನ ಹಳೆಯ ನಗರದ ಹತ್ತಿರ, ಅನೇಕ ಪವಿತ್ರ ಸ್ಥಳಗಳಿಗೆ ಹತ್ತಿರದಲ್ಲಿ ಬಿದ್ದಿದೆ ಎಂದು ಇಸ್ರೇಲಿ ಪೊಲೀಸರು ಹೇಳುತ್ತಾರೆ.

**ಇಸ್ರೇಲಿ ಮಿಲಿಟರಿ ನೆಲೆಗಳು ಮತ್ತು ಇತರ ಸೂಕ್ಷ್ಮ ಸ್ಥಳಗಳಿಗೆ ಹಾನಿಯ ಪ್ರಮಾಣ ತಿಳಿದಿಲ್ಲ;** ಮಿಲಿಟರಿ ಆ ಮಾಹಿತಿಯನ್ನು ಬಹಿರಂಗಪಡಿಸುವುದಿಲ್ಲ. ಲೆಬನಾನ್‌ನಲ್ಲಿ ಏಳು ಮಕ್ಕಳು ಸೇರಿದಂತೆ ಎಪ್ಪತ್ತೆರಡು ಜನರು ಸಾವನ್ನಪ್ಪಿದ್ದಾರೆ ಮತ್ತು 437 ಮಂದಿ ಗಾಯಗೊಂಡಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.


ಇರಾನಿನ ಬೆಂಬಲಿತ ಲೆಬನಾನಿನ ಉಗ್ರಗಾಮಿ ಗುಂಪು ಹೆಜ್ಬೊಲ್ಲಾ ಮತ್ತು ಪ್ಯಾಲೆಸ್ಟೀನಿಯನ್ ಇಸ್ಲಾಮಿಕ್ ಜಿಹಾದ್ ಉಗ್ರಗಾಮಿ ಗುಂಪಿನ ಅಧಿಕಾರಿಗಳು ಸಹ ಸಾವನ್ನಪ್ಪಿದ್ದಾರೆ. ಈ ಸಂಘರ್ಷದಲ್ಲಿ ಹಿಜ್ಬೊಲ್ಲಾ ಸಂಘಟನೆಯು ತಮ್ಮ ಶ್ರೇಣಿಯಲ್ಲಿ ಯಾರನ್ನೂ ಕೊಂದಿರುವುದಾಗಿ ಇನ್ನೂ ದೃಢಪಡಿಸಿಲ್ಲ, ಆದರೂ ಇಸ್ರೇಲ್ ಹೆಜ್ಬೊಲ್ಲಾ ಸಂಬಂಧಿತ ಗುರಿಗಳನ್ನು ಮಾತ್ರ ಹೊಡೆದಿದೆ ಎಂದು ಹೇಳುತ್ತದೆ.

# ಚುನಾವಣೆ ಹೊಸ್ತಿಲಲ್ಲಿ ರಾಜ್ಯಪಾಲರ ಬದಲಾವಣೆ

## ದಿಗ್ಭ್ರಮೆಯಾಗಿದೆ ಎಂದ ಮಮತಾ ಬ್ಯಾನರ್ಜಿ, ಎಂಕೆ ಸ್ಟಾಲಿನ್ ಚುನಾವಣೆಗೂ ಮುನ್ನ ಕೇಂದ್ರದ ಮಾಸ್ಟರ್ ಸ್ಟ್ರೋಕ್

**ಹೊಸದಿಲ್ಲಿ :** ಚುನಾವಣಾ ಹೊಸ್ತಿಲಲ್ಲಿರುವ ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶಗಳ ಪೈಕಿ, ಎರಡು ರಾಜ್ಯಗಳನ್ನೂ ಒಳಗೊಂಡಂತೆ, ಹಲವು ಕಡೆ ರಾಜ್ಯಪಾಲರನ್ನು ಬದಲಾಯಿಸಿ, ಕೇಂದ್ರ ಗೃಹ ಇಲಾಖೆ ಆದೇಶ ಹೊರಡಿಸಿದೆ. ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ರಾಜ್ಯಗಳ ಗವರ್ನರ್ ಅನ್ನು ಬದಲಾಯಿಸಲಾಗಿದೆ. ಎರಡೂ ರಾಜ್ಯಗಳಲ್ಲಿ ಲೋಕಭವನ ಮತ್ತು ಸರ್ಕಾರದ ನಡುವೆ ಹೊಂದಾಣಿಕೆ ಇರುತ್ತಿರಲಿಲ್ಲ. ಸಡನ್ ಆಗಿ ರಾಜ್ಯಪಾಲರನ್ನು ಬದಲಾಯಿಸಿರುವುದಕ್ಕೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ತಮಿಳುನಾಡಿನಲ್ಲಿ ಎಂಕೆ ಸ್ಟಾಲಿನ್ ಸರ್ಕಾರದ ಜೊತೆ ಮುನಿಸಿಕೊಂಡು ಬರುತ್ತಲೇ ಇದ್ದ ಆರ್‌ಎನ್ ರವಿ ಅವರನ್ನು ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ನಿಯೋಜಿಸಲಾಗಿದೆ.

ತಮಿಳುನಾಡಿನ ರಾಜ್ಯಪಾಲರಾಗಿದ್ದ ರವಿ, ಪಶ್ಚಿಮ ಬಂಗಾಳದ ಗವರ್ನರ್ ಆಗಿ, ಕೋಲ್ಕತ್ತದಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ. ಬಂಗಾಳದ ರಾಜ್ಯಪಾಲರಾಗಿದ್ದ ಸಿವಿ ಆನಂದ್ ಭೋಸ್, ರಾಜೀನಾಮೆ ನೀಡಿದ ಹಿನ್ನಲೆಯಲ್ಲಿ ಈ ಬದಲಾವಣೆಯಾಗಿದೆ. ಯಾವ ಕಾರಣಕ್ಕೆ ರಾಜೀನಾಮೆ ನೀಡಿದರು ಎನ್ನುವ ಮಾಹಿತಿಯಿಲ್ಲ ಎಂದ ಮಮತಾ ಬ್ಯಾನರ್ಜಿ ನಮ್ಮ ರಾಜ್ಯದಲ್ಲಿ ರಾಜ್ಯಪಾಲರನ್ನು ಬದಲಾಯಿಸುವ ಯಾವುದೇ ಮಾಹಿತಿ ನನಗಿಲ್ಲ. ಆನಂದ್ ಭೋಸ್ ಅವರು ಯಾವ ಕಾರಣಕ್ಕಾಗಿ ರಾಜೀನಾಮೆ ನೀಡಿದರು ಎನ್ನುವುದು ಗೌಪ್ಯವಾಗಿದೆ. ಈ ವಿದ್ಯಮಾನ ನನಗೆ ದಿಗ್ಭ್ರಮೆಯನ್ನು ತಂದಿದೆ. ಕೇಂದ್ರ ಸರ್ಕಾರದ ಗೃಹ ಇಲಾಖೆಯಿಂದ ಒತ್ತಡ ಇದ್ದರೂ ಇರಬಹುದು. ಈ ರಾಜೀನಾಮೆಯ ಹಿಂದೆ, ರಾಜಕೀಯ ಲಾಭ ನಷ್ಟಗಳ ಲೆಕ್ಕಾಚಾರ ಇರಬಹುದು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಭಿಪ್ರಾಯ ಪಟ್ಟಿದ್ದಾರೆ.



**ರವಿ ಮತ್ತು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಸರ್ಕಾರದ ನಡುವೆ ತಾಳಮೇಳಗಳ ಕೊರತೆ**

ಸೆಪ್ಟಂಬರ್ 18, 2021ರಲ್ಲಿ ತಮಿಳುನಾಡಿನ ರಾಜ್ಯಪಾಲರಾಗಿ ನಿಯುಕ್ತಿಗೊಂಡಿದ್ದ ಆರ್‌ಎನ್ ರವಿ ಮತ್ತು ಮುಖ್ಯಮಂತ್ರಿ, ಎಂಕೆ ಸ್ಟಾಲಿನ್ ಸರ್ಕಾರದ ನಡುವೆ ತಾಳಮೇಳಗಳ ಕೊರತೆ ಆವಾಗಾವಾಗ ದೊಡ್ಡ ಸುದ್ದಿಯಾಗಿತ್ತು.

ಅಜಯ್ ಕುಮಾರ್ ಭಲ್ಲಾ ಅವರನ್ನು ತಮಿಳುನಾಡು ರಾಜ್ಯದ ರಾಜ್ಯಪಾಲರನ್ನಾಗಿ ನೇಮಿಸುವ ಸಾಧ್ಯತೆಯಿದೆ. ಸದ್ಯಕ್ಕೆ, ಕೇರಳದ ರಾಜ್ಯಪಾಲರಾಗಿರುವ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರಿಗೆ ಹೆಚ್ಚುವರಿ ಜವಾಬ್ದಾರಿಯನ್ನು ನೀಡಲಾಗಿದೆ. ಚುನಾವಣೆಯ ಹೊಸ್ತಿಲಲ್ಲಿ ಈ ಎರಡು ರಾಜ್ಯಗಳ ರಾಜ್ಯಪಾಲರ ಬದಲಾವಣೆ ದೊಡ್ಡ ಚರ್ಚೆಯ ವಿಷಯವಾಗಿದೆ.

ತಮಿಳುನಾಡಿನಲ್ಲಿ ರಾಜ್ಯಪಾಲರನ್ನು ಬದಲಾಯಿಸುವ ನಿರ್ಧಾರವನ್ನು ಸಿಎಂ ಸ್ಟಾಲಿನ್‌ಗೆ ತಿಳಿಸಲಾಗಿದೆ ಎಂದು ಹೇಳಲಾಗುತ್ತಿದೆ. ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗದ ನಡುವೆ ಮನಸ್ತಾಪವನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಮಮತಾ ಬ್ಯಾನರ್ಜಿ, ಕೇಂದ್ರ ಗೃಹ ಇಲಾಖೆಯ ರಾಜ್ಯಪಾಲರ ಬದಲಾವಣೆ ನಿರ್ಧಾರದಿಂದ ವಿಚಲಿತರಾಗಿದ್ದೇನೆ ಎಂದು ಹೇಳಿದ್ದಾರೆ.

### ಒಕ್ಕೂಟ ವ್ಯವಸ್ಥೆಗೆ ಪೆಟ್ಟು

**ರಾಜ್ಯಪಾಲರು ಆಯಾಯ ರಾಜ್ಯದ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಹಾಗಾಗಿ, ರಾಜ್ಯ ಸರ್ಕಾರ ಮತ್ತು ರಾಜಭವನದ ಹೊಂದಾಣಿಕೆ ಅತ್ಯಗತ್ಯ. ಕೇಂದ್ರ ಸರ್ಕಾರ ಏಕಾಏಕಿ ಗವರ್ನರ್ ಅನ್ನು ಬದಲಾಯಿಸಿ, ಸಂವಿಧಾನದ ಆಶಯಕ್ಕೆ ವಿರುದ್ದವಾಗಿ ಸಾಗುತ್ತಿದೆ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.**

### ಹಲವು ರಾಜ್ಯಗಳ ರಾಜ್ಯಪಾಲರ ಬದಲಾವಣೆ, ಎಲ್ಲೆಲ್ಲಿ?

- **ಬಿಹಾರದ ರಾಜ್ಯಪಾಲರಾಗಿದ್ದ ಆರಿಫ್ ಮೊಹಮ್ಮದ್ ಖಾನ್ ಅವರ ಜಾಗಕ್ಕೆ ಸಯ್ಯದ್ ಅತಾ ಹಸ್ನೇನೇಯಿನ್ ಅವರನ್ನು ನೇಮಿಸಲಾಗಿದೆ.**
- **ಬಿಜೆಪಿ ನಾಯಕ ನಂದ ಕಿಶೋರ್ ರೆಡ್ಡಿಯವರನ್ನು ನಾಗಾಲ್ಯಾಂಡ್ ರಾಜ್ಯಪಾಲರನ್ನಾಗಿ ನಿಯೋಜಿಸಲಾಗಿದೆ.**
- **ಲಡಾಖ್ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ಕವೀಂದರ್ ಗುಪ್ತಾ ಅವರನ್ನು ಹಿಮಾಚಲ ಪ್ರದೇಶದ ಗವರ್ನರ್ ಆಗಿ ನೇಮಿಸಲಾಗಿದೆ.**
- **ವಿನಯ್ ಕುಮಾರ್ ಸಕ್ಸೇನಾ, ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಲಿದ್ದಾರೆ.**
- **ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿದ್ದ ಶಿವ್ ಪ್ರತಾಪ್ ಶುಕ್ಲಾ ಅವರನ್ನು ತೆಲಂಗಾಣದ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ.**

## ಮಿನಿ ನ್ಯೂಸ್

### ಭಾರತದೊಂದಿಗಿನ ಸಂಬಂಧ ಹಾಳಾಗಲು ಬಿಡುವುದಿಲ್ಲ: ಅಬ್ದುಲ್ ಮಜೀದ್ ಹಕಿಮೆಲಾಹಿ

**ಇರಾನ್:** ಅಮೆರಿಕ ಇಸ್ರೇಲ್ ಇರಾನ್ ಮೇಲೆ ಕಳೆದ ಒಂದು ವಾರದಿಂದ ದಾಳಿ ನಡೆಸುತ್ತಿದೆ. ಇರಾನ್ ಕೂಡ ಪ್ರತಿದಾಳಿ ನಡೆಸುತ್ತಿದೆ. ಇದರಿಂದ ಭಾರತಕ್ಕೆ ಸೇರಿದಂತೆ ಹಲವು ದೇಶಗಳಿಗೆ ತೈಲ ಪೂರೈಕೆಯಲ್ಲಿ ವ್ಯತ್ತಿಯ ಉಂಟಾಗುವ ಸಾಧ್ಯತೆ ಇದೆ. ನಮ್ಮದು ಇಂದು ನಿನ್ನೆಯ ಸಂಬಂಧವಲ್ಲ, ಭಾರತದೊಂದಿಗಿನ ಸಂಬಂಧ ಎಂದೂ ಹಾಳಾಗಲು ಬಿಡುವುದಿಲ್ಲ ಎಂದು ಇರಾನ್‌ನ ಪ್ರತಿನಿಧಿ ಡಾ. ಅಬ್ದುಲ್ ಮಜೀದ್ ಹಕಿಮೆಲಾಹಿ ಹೇಳಿದ್ದಾರೆ. ಈಗ 30 ದಿನಗಳ ಕಾಲ ರಷ್ಯಾದಿಂದ ಭಾರತ ತೈಲ ಖರೀದಿ ಮಾಡಬಹುದು ಎಂದು ಅಮೆರಿಕ ಹೇಳಿದೆ. ಒಂದು ಸಮಯದಲ್ಲಿ ಭಾರತ ರಷ್ಯಾದಿಂದ ತೈಲ ಖರೀದಿ ಮಾಡುತ್ತಿದೆ ಎನ್ನುವ ಕಾರಣಕ್ಕೆ ಹೆಚ್ಚುವರಿ ಸುಂಕ ವಿಧಿಸಲಾಗಿತ್ತು. ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿಯಲ್ಲಿ ಇರಾನ್ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಹತ್ಯೆಯಾಗುತ್ತಿದ್ದಂತೆ ಮಧ್ಯಂತರ ಸರ್ವೋಚ್ಚ ನಾಯಕನನ್ನು ನೇಮಿಸಲಾಗಿತ್ತು.

### ಕುವೈತ್‌ನಲ್ಲಿರುವ ಯುಎಸ್ ನೆಲೆಗಳ ಮೇಲೆ ಇರಾನ್‌ನಿಂದ ಅಡ್ರೋನ್ ದಾಳಿ

**ಟೆಹ್ರಾನ್:** ಕುವೈತ್‌ನಲ್ಲಿರುವ ಅಮೆರಿಕದ ವಾಯುನೆಲೆಗಳ ಮೇಲಿನ ಇರಾನ್ ದಾಳಿ ಮುಂದುವರೆದಿದೆ. ಕುವೈತ್ ವಾಯುನೆಲೆಗಳ ಮೇಲಿನ ದಾಳಿಗೆ ಇರಾನ್ ಶಹೀದ್-136 ಡ್ರೋನ್‌ಗಳ ಜೊತೆಗೆ ಅಡ್ವಾನ್ಸ್ಡ ಅರಾಶ್-2 ಡ್ರೋನ್‌ಗಳನ್ನು ಬಳಸಿದೆ. ಅರಾಶ್-2 150 ಕೆಜಿ ಸಿಡಿತಲೆಯನ್ನು ಹೊತ್ತೊಯ್ಯಬಲ್ಲದು. ಕಿಯಾನ್-2 ಡ್ರೋನ್‌ನ ನವೀಕರಿಸಿದ ಆವೃತ್ತಿಯಾದ ಇದು 2,000 ಕಿಮೀ ದಾಳಿಯ ವ್ಯಾಪ್ತಿಯನ್ನು ಹೊಂದಿದೆ. ಈ ಡ್ರೋನ್‌ಗಳು ನಿಖರವಾದ ದಾಳಿಗಳು ಮತ್ತು ಸಮೂಹ ಕಾರ್ಯಾಚರಣೆಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿವೆ.

### ಖಲಿಸ್ತಾನಿ ಉಗ್ರರನ್ನು ಟೀಕಿಸುತ್ತಿದ್ದ ಪಂಜಾಬಿ ಯೂಟ್ಯೂಬರ್ ಕೆನಡಾದಲ್ಲಿ ಹತ್ಯೆ

**ಒಟ್ಟಾವಾ:** ಭಾರತದ ಪರವಾಗಿ ತೀಕ್ಷ್ಣ ಹೇಳಿಕೆಗಳು ಹಾಗೂ ಗಂಭೀರವಾದ ವಿಚಾರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತಿದ್ದ ಯೂಟ್ಯೂಬರ್ ನ್ಯಾನ್ಸಿ ಗ್ರೆವಾಲ್ ಅವರನ್ನು ಕೆನಡಾದಲ್ಲಿ ಹತ್ಯೆ ಮಾಡಲಾಗಿದೆ. ರಾತ್ರಿ ನ್ಯಾನ್ಸಿ ಅವರ ಮೇಲೆ ಹಲ್ಲೆ ನಡೆಸಲಾಗಿದೆ. ಈ ವೇಳೆ ಹರಿತವಾದ ಆಯುಧಗಳಿಂದ ಅವರನ್ನು ಇರಿಯಲಾಗಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಅಲ್ಲಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಯ ವೇಳೆ ಅವರು ಸಾವನ್ನಪ್ಪಿದ್ದಾರೆ ಎಂದು ಕೆನಡಾದ ಅಧಿಕಾರಿಗಳು ತಿಳಿಸಿದ್ದಾರೆ.

ನ್ಯಾನ್ಸಿ ಗ್ರೆವಾಲ್ ಅವರು ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ತೀಕ್ಷ್ಣ ಹೇಳಿಕೆ, ಪೋಸ್ಟ್‌ಗಳಿಂದ ಹೆಸರುವಾಸಿಯಾಗಿದ್ದರು. ಈವರೆಗೂ ಯಾವುದೇ ಶಂಕಿತನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆಯೇ ಇಲ್ಲವೇ ಎಂಬುದನ್ನು ಪೊಲೀಸರು ಇನ್ನೂ ಮಾಹಿತಿ ನೀಡಿಲ್ಲ. ಪೊಲೀಸರು ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸುತ್ತಿದ್ದಾರೆ. ಘಟನೆಯ ಸಮಯದಲ್ಲಿ ಮನೆಯ ಸುತ್ತಮುತ್ತ ಇದ್ದ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಜೊತೆಗೆ ದಾಳಿಕೋರನ ಬಗ್ಗೆ ಮಾಹಿತಿ ಸಂಗ್ರಹಿಸಲು ಪೊಲೀಸರು ಸ್ಥಳೀಯ ಜನರ ಸಹಾಯವನ್ನೂ ಕೇಳಿದ್ದಾರೆ ಎಂದು ವರದಿಯಾಗಿದೆ. ಈ ದಾಳಿಯ ಹಿಂದೆ ಉಗ್ರಗಾಮಿಗಳ ಕೈವಾಡ ಇರಬಹುದೆಂಬ ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ. ನ್ಯಾನ್ಸಿ ಗ್ರೆವಾಲ್ ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಖಲಿಸ್ತಾನಿ ಚಟುವಟಿಕೆಗಳನ್ನು ಹೆಚ್ಚಾಗಿ ಟೀಕಿಸುತ್ತಿದ್ದರು. ಈ ಕಾರಣದಿಂದಾಗಿ ಕೆಲವರಿಂದ ವಿರೋಧವೂ ಎದುರಿಸಿದ್ದರೆಂಬ ಮಾಹಿತಿ ಇದೆ.

### ಮನೆಯೊಳಗೆ ಅಕ್ಕ-ತಂಗಿಯರ ನಿಗೂಢ ಸಾವು; ಹೆತ್ತಮ್ಮನೇ ಮುಖ್ಯ ಆರೋಪಿ

**ನವದೆಹಲಿ:** ದಕ್ಷಿಣ ದೆಹಲಿಯಲ್ಲಿ 33 ಮತ್ತು 28 ವರ್ಷ ವಯಸ್ಸಿನ ಇಬ್ಬರು ಸಹೋದರಿಯರು ನಿಗೂಢವಾಗಿ ಮೃತಪಟ್ಟಿದ್ದಾರೆ. ಸಂಜೆ ಈ ಘಟನೆ ನಡೆದಿದೆ ಎನ್ನಲಾಗಿದೆ. ಪೊಲೀಸರು ಮಾಲ್ವಿಯಾ ನಗರದ ಅವರ ಮನೆಯ ಬಾಗಿಲು ಒಡೆದು ನೋಡಿದ ನಂತರ ಅವರ 55 ವರ್ಷದ ತಾಯಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಆತ್ಮಹತ್ಯೆಗೆ ಯತ್ನಿಸುವ ಮೊದಲು ತಾಯಿ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಕೊಂದಿರಬಹುದು ಎಂಬುದು ಪೊಲೀಸರ ಅನುಮಾನ. ಆದರೆ ಆ ಮಹಿಳೆಗೆ ಪ್ರಜ್ಞೆ ಬಂದ ನಂತರವೇ ನಡೆದ ಘಟನೆಗಳು ಸ್ಪಷ್ಟವಾಗುವ ನಿರೀಕ್ಷೆಯಿದೆ. ಮೃತರ ಮನೆಗೆ ಹೋಗಿದ್ದ ಸಂಬಂಧಿಕರು ಎಷ್ಟೇ ಬಾಗಿಲು ಬಡಿದರೂ ಡೋರ್ ಓಪನ್ ಆಗಲಿಲ್ಲ. ಇದರಿಂದ ಅನುಮಾಗೊಂಡ ಅವರು ಪೊಲೀಸರಿಗೆ ಮಾಹಿತಿ ನೀಡಿದ್ದರು. ದೆಹಲಿ ಪೊಲೀಸರ ತಂಡವು ಸ್ಥಳಕ್ಕೆ ತಲುಪಿ ಬಾಗಿಲು ಒಡೆದು ನೋಡಿದಾಗ, ಒಬ್ಬ ಮಹಿಳೆಯ ಶವ ಮುಖದ ಮೇಲೆ ದಿಂಬನ್ನು ಇಡಲಾಗಿತ್ತು. ಮತ್ತೊಬ್ಬಳ ಕುತ್ತಿಗೆಗೆ ಗಾಯವಾಗಿತ್ತು. ಇಬ್ಬರೂ ಬೇರೆ ಬೇರೆ ರೂಂನಲ್ಲಿ ಸತ್ತುಬಿದ್ದಿದ್ದರು. ಅವರಿಬ್ಬರೂ ಸುಮಾರು 33 ಮತ್ತು 28 ವರ್ಷ ವಯಸ್ಸಿನ ಸಹೋದರಿಯರು ಎಂದು ಗುರುತಿಸಲಾಗಿದೆ.

### ಸುರಕ್ಷಿತ ಸ್ಥಳದಲ್ಲೇ ಉಳಿಯಲು ಭಾರತೀಯ ರಾಯಭಾರಿ ಕಚೇರಿ ಸೂಚನೆ

**ಕತಾರ್:** ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯಿಂದಾಗಿ ಕತಾರ್‌ನಲ್ಲಿ ಉಂಟಾಗಿರುವ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಅಲ್ಲಿರುವ ಭಾರತೀಯ ನಾಗರಿಕರಿಗೆ ದೋಹಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಮಹತ್ವದ ಸಲಹೆ ಪ್ರಕಟಿಸಿದೆ. ಕತಾರ್ ಸರ್ಕಾರದ ಸಚಿವಾಲಯ ನೀಡಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಭಾರತೀಯರಿಗೆ ಮನವಿ ಮಾಡಿದೆ.

ಕತಾರ್‌ನಲ್ಲಿರುವ ಎಲ್ಲಾ ನಿವಾಸಿಗಳು ಸುರಕ್ಷಿತ ಸ್ಥಳಗಳಲ್ಲಿ ಇರಬೇಕು, ಅತೀ ಅಗತ್ಯವಿದ್ದಾಗ ಮಾತ್ರ ಹೊರಗೆ ಹೋಗಬೇಕು, ಕಿಟಕಿಗಳು ಮತ್ತು ಬಾಲ್ಕನಿಗಳು ಹಾಗೂ ತೆರೆದ ಪ್ರದೇಶಗಳಿಂದ ದೂರ ಇರಬೇಕು ಎಂದು ಮಾರ್ಗಸೂಚಿಯಲ್ಲಿ ಸೂಚಿಸಲಾಗಿದೆ. ಕತಾರ್ ಅಧಿಕಾರಿಗಳು ನೀಡುವ ಎಲ್ಲಾ ಸೂಚನೆಗಳನ್ನು ಪಾಲಿಸುವಂತೆ ರಾಯಭಾರಿ ಕಚೇರಿ ತಿಳಿಸಿದೆ.

**ವಾಯುಪ್ರದೇಶ ಬಂದ್;** ಅಂದ್ಹಾಗೆ, ಕತಾರ್‌ನ ವಾಯುಪ್ರದೇಶ ಇನ್ನೂ ಬಂದ್ ಆಗಿರುವುದರಿಂದ ವಿಮಾನ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಕತಾರ್ ಏರ್‌ವೇಸ್ ಮಾರ್ಚ್ 7ರಂದು ಬೆಳಗ್ಗೆ 9 ಗಂಟೆಗೆ ಮುಂದಿನ ಮಾಹಿತಿ ನೀಡುವುದಾಗಿ ತಿಳಿಸಿದೆ. ಪ್ರಯಾಣಿಕರು ತಮ್ಮ ತಮ್ಮ ವಿಮಾನ ಕಂಪನಿಗಳೊಂದಿಗೆ ಸಂಪರ್ಕದಲ್ಲಿರಬೇಕು ಎಂದು ಸೂಚಿಸಿದೆ.

**ವೀಸಾ ವಿಸ್ತರಣೆ;** ಅವಧಿ ಮುಗಿದಿರುವ ಅಥವಾ ಮುಗಿಯಲಿರುವ ಎಲ್ಲಾ ವರ್ಗದ ಪ್ರವೇಶ ವೀಸಾಗಳನ್ನು ಒಂದು ತಿಂಗಳವರೆಗೆ ವಿಸ್ತರಿಸುವುದಾಗಿ ಕತಾರ್ ಸಚಿವಾಲಯ ಘೋಷಿಸಿದೆ. ಫೆಬ್ರವರಿ 28ರಿಂದ ಈ ನಿರ್ಧಾರ ಜಾರಿಯಲ್ಲಿದ್ದು ಮುಂದಿನ ಪರಿಸ್ಥಿತಿಗೆ ಅನುಗುಣವಾಗಿ ಮತ್ತಷ್ಟು ವಿಸ್ತರಣೆಯ ಸಾಧ್ಯತೆಯೂ ಇದೆ.

ಸೌದಿ ಅರೇಬಿಯಾಕ್ಕೆ ಹೋಗಬೇಕು ಅಂದ್ರೆ, ತುರ್ತು ಪರಿಸ್ಥಿತಿಯಲ್ಲಿ ಕತಾರ್‌ನಿಂದ ಸೌದಿ ಅರೇಬಿಯಾಕ್ಕೆ ಸಲ್ವಾ ಭೂಸೀಮೆಯ ಮೂಲಕ ಹೊರಹೋಗುವ ಅವಕಾಶ ಕಲ್ಪಿಸಲಾಗಿದೆ. ಅಮೆರಿಕ, ಯುಕೆ ಅಥವಾ ಷೆಂಗೆನ್ ವೀಸಾ ಹೊಂದಿರುವ ಭಾರತೀಯರು ಸೌದಿ ಅರೇಬಿಯಾದಲ್ಲಿ 'ವೀಸಾ ಆನ್ ಅರೈವಲ್' ಪಡೆಯಬಹುದಾಗಿದೆ

# ಖುಲ್ಲಂ ಖುಲ್ಲಾ ತಿರುಗಾಡಿದ್ದು ಸರಿಯೇ




ಖ್ಯಾತ ದಳಪತಿ ವಿಜಯ್ ಅವರು ಯಾವುದೇ ಮುಚ್ಚುಮರೆ ಇಲ್ಲದೇ ನಟಿ ತ್ರಿಷಾ ಕೃಷ್ಣನ್ ಜೊತೆ ತಿರುಗಾಡುತ್ತಿದ್ದಾರೆ. ಅವರ ಈ ವರ್ತನೆಯಿಂದ ಅಭಿಮಾನಿಗಳಿಗೆ ಮುಜುಗರ ಆಗಿದೆ. ಆದರೆ ಕೆಲವು ಅಭಿಮಾನಿಗಳು ಬೆಂಬಲಕ್ಕೆ ನಿಂತಿದ್ದಾರೆ. ವಿಜಯ್ ಅವರ ರಾಜಕೀಯ ಭವಿಷ್ಯಕ್ಕೆ ತ್ರಿಷಾ ಜೊತೆಗಿನ ಒಟನಾಟದಿಂದ ತೊಂದರೆ ಆಗುವ ಸಾಧ್ಯತೆ ಇದೆ. ನಟ ದಳಪತಿ ವಿಜಯ್ ಅವರ ರಾಜಕೀಯ ಜೀವನಕ್ಕಿಂತಲೂ ವೈಯಕ್ತಿಕ ಜೀವನದ ವಿಚಾರವೇ ಹೆಚ್ಚು ಚರ್ಚೆ ಆಗುತ್ತಿದೆ. ಅದಕ್ಕೆ ಕಾರಣ ಆಗಿರುವುದು ತ್ರಿಷಾ ಜೊತೆಗಿನ ಒಡನಾಟ. ಈಗಾಗಲೇ ವಿಜಯ್ ಪತ್ನಿ ಸಂಗೀತಾ ಅವರು ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅಲ್ಲದೇ ವಿಜಯ್ ಅವರಿಗೆ ನಟಿಯೊಬ್ಬರ ಜೊತೆ ಅನೈತಿಕ ಸಂಬಂಧ ಇದೆ ಎಂದು ಕೂಡ ಸಂಗೀತಾ ಆರೋಪಿಸಿದ್ದಾರೆ. ಈ ಸಂದರ್ಭದಲ್ಲಿ ತ್ರಿಷಾ ಮತ್ತು ವಿಜಯ್ ಅವರು ಖುಲ್ಲಂ ಖುಲ್ಲಾ ಜೊತೆಯಾಗಿ ತಿರುಗಾಡಿದ್ದಾರೆ. ವಿಡಿಯೋ ವೈರಲ್ ಆಗಿದ್ದು, ಅದನ್ನು ಕಂಡು ಅಭಿಮಾನಿಗಳು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಸಿನಿಮಾ ಕಲಾವಿದರು ರಾಜಕೀಯದಲ್ಲಿ ಯಶಸ್ಸು ಕಂಡ ಸಾಕಷ್ಟು ಉದಾಹರಣೆ ತಮಿಳುನಾಡಿನಲ್ಲಿದೆ. ದಳಪತಿ ವಿಜಯ್ ಅವರು ಟಿವಿಕೆ ಪಕ್ಷ ಸ್ಥಾಪಿಸಿಕೊಂಡು ರಾಜಕೀಯಕ್ಕೆ ಇಳಿದಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಅವರು ಸ್ಪರ್ಧಿಸಲಿದ್ದಾರೆ.

ಅದಕ್ಕಾಗಿ ಅವರು ಎಲ್ಲಾ ರೀತಿಯಿಂದಲೂ ತಯಾರಿ ಮಾಡಿಕೊಂಡಿದ್ದಾರೆ. ಇಂಥ ಸಂದರ್ಭದಲ್ಲಿ ತ್ರಿಷಾ ಜೊತೆ ಕಾಣಿಸಿಕೊಂಡಿದ್ದು ಅಭಿಮಾನಿಗಳ ಕೋಪಕ್ಕೆ ಕಾರಣ ಆಗಿದೆ. ದಳಪತಿ ವಿಜಯ್ ಅವರ ಹೆಸರು ತ್ರಿಷಾ ಜೊತೆ ತಳುಕು ಹಾಕಿಕೊಂಡಾಗಲೆಲ್ಲ ಅಭಿಮಾನಿಗಳು ರಕ್ಷಣೆಗೆ ಬರುತ್ತಿದ್ದರು. ವಿಜಯ್ ಮತ್ತು ತ್ರಿಷಾ ಕೇವಲ ಸ್ನೇಹಿತರು ಎಂದು ಫ್ಯಾನ್ಸ್ ವಾದ ಮಾಡುತ್ತಿದ್ದರು. ಗಾಸಿಪ್‌ನಿಂದ ವಿಜಯ್ ಅವರ ರಾಜಕೀಯದ ಭವಿಷ್ಯಕ್ಕೆ ತೊಂದರೆ ಆಗದಿರಲಿ ಎಂದು ಅಭಿಮಾನಿಗಳು ಇಷ್ಟೆಲ್ಲ ಮಾಡುತ್ತಿದ್ದರು. ಆದರೆ ವಿಜಯ್ ಅವರು ಅದನ್ನೆಲ್ಲ ಈಗ ಗಾಳಿಗೆ ತೂರಿದ್ದಾರೆ.

# ಭರ್ಜರಿಯಾಗಿ ಬಿಡುಗಡೆ ಆಗಲಿದೆ

‘ಟಾಕ್ಸಿಕ್’ ಹಿಂದೆ ಸರಿದಿದ್ದರಿಂದ ಮಾರ್ಚ್ 19ರಂದು ‘ಉಸ್ತಾದ್ ಭಗತ್ ಸಿಂಗ್’ ಸಿನಿಮಾ ಬಿಡುಗಡೆ ಆಗಲಿದೆ. ಇದು ಪವನ್ ಕಲ್ಯಾಣ್ ಅವರ ‘ತಾತ್ಕಾಲಿಕ ಕೊನೆಯ ಸಿನಿಮಾ’ ಎಂಬ ಮಾತುಗಳು ಕೇಳಿ ಬರುತ್ತಿದ್ದು, ಇದೇ ಕಾರಣಕ್ಕೆ ಬಲು ಅದ್ದೂರಿಯಾಗಿ ಸಿನಿಮಾವನ್ನು ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಯಶ್ ನಟನೆಯ ‘ಟಾಕ್ಸಿಕ್’ ಸಿನಿಮಾದ ಬಿಡುಗಡೆ ಮುಂದೂಡಲಾಗಿದ್ದು, ಇದೀಗ ಅದೇ ದಿನಾಂಕಕ್ಕೆ ಪವನ್ ಕಲ್ಯಾಣ್ ನಟನೆಯ ‘ಉಸ್ತಾದ್ ಭಗತ್ ಸಿಂಗ್’ ಸಿನಿಮಾ ಬಿಡುಗಡೆ ಆಗಲಿದೆ. ಈ ಮೊದಲು ಮಾರ್ಚ್ 26ಕ್ಕೆ ಸಿನಿಮಾದ ಬಿಡುಗಡೆ ದಿನಾಂಕವನ್ನು ಘೋಷಿಸಲಾಗಿತ್ತು.



ಆದರೆ ‘ಟಾಕ್ಸಿಕ್’ ಹಿಂದೆ ಸರಿದಿದ್ದರಿಂದ ಆ ದಿನಾಂಕದಂದು ‘ಉಸ್ತಾದ್ ಭಗತ್ ಸಿಂಗ್’ ಸಿನಿಮಾ ಬಿಡುಗಡೆ ಆಗಲಿದೆ. ಇದು ಪವನ್ ಕಲ್ಯಾಣ್ ಅವರ ‘ತಾತ್ಕಾಲಿಕ ಕೊನೆಯ ಸಿನಿಮಾ’ ಎಂಬ ಮಾತುಗಳು ಕೇಳಿ ಬರುತ್ತಿದ್ದು, ಇದೇ ಕಾರಣಕ್ಕೆ ಬಲು ಅದ್ದೂರಿಯಾಗಿ ಸಿನಿಮಾವನ್ನು ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ಪವನ್ ಕಲ್ಯಾಣ್ ಇದೀಗ ಆಂಧ್ರದ ಡಿಸಿಎಂ ಆಗಿದ್ದು, ಅವರು ಆಂಧ್ರ ಪ್ರದೇಶ ಚುನಾವಣೆ ಘೋಷಣೆಗೆ ಮುಂಚೆ ಒಪ್ಪಿಕೊಂಡಿದ್ದ ಮೂರು ಸಿನಿಮಾಗಳಲ್ಲಿ ಕೊನೆಯ ಸಿನಿಮಾ ‘ಉಸ್ತಾದ್ ಭಗತ್ ಸಿಂಗ್’ ಆಗಿದೆ. ಈ ಸಿನಿಮಾದ ಬಳಿಕ ಅಧಿಕಾರದಲ್ಲಿದ್ದಷ್ಟು ವರ್ಷ ಅವರು ಸಿನಿಮಾಗಳಲ್ಲಿ ನಟಿಸುವುದಿಲ್ಲ ಎನ್ನಲಾಗುತ್ತಿದೆ. ಹಾಗಾಗಿ ತಾತ್ಕಾಲಿಕವಾಗಿ ಇದು ಅವರ ಕೊನೆಯ ಸಿನಿಮಾ ಎಂಬ ಮಾತುಗಳು ಕೇಳಿ ಬರುತ್ತಿವೆ. ಇದೇ ಕಾರಣಕ್ಕೆ ಸಿನಿಮಾವನ್ನು ಭಾರಿ ಅದ್ದೂರಿಯಾಗಿ ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

# ತಿರುಪತಿಯಲ್ಲಿ ಜಾನ್ವಿ ಕಪೂರ್ ಹುಟ್ಟುಹಬ್ಬ



ಖ್ಯಾತ ನಟಿ ಜಾನ್ವಿ ಕಪೂರ್ ಅವರು ಅಪಾರ ದೈವ ಭಕ್ತೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿಯಾಗಿದೆ. ಹುಟ್ಟುಹಬ್ಬದ ಪ್ರಯುಕ್ತ ಅವರು 3,550 ಮೆಟ್ಟಿಲುಗಳನ್ನು ಬರಿಗಾಲಿನಲ್ಲಿ ಹತ್ತಿ ದೇವಸ್ಥಾನ ತಲುಪಿದ್ದಾರೆ. ಜಾನ್ವಿ ಕಪೂರ್ ಅವರ ಈ ಭಕ್ತಿಗೆ ಮೆಚ್ಚಿದ ಅಭಿಮಾನಿಗಳು ಬಗೆಬಗೆಯಲ್ಲಿ ಕಮೆಂಟ್ ಮಾಡುತ್ತಿದ್ದಾರೆ. ಬಾಲಿವುಡ್ ನಟಿ ಜಾನ್ವಿ ಕಪೂರ್ ಇಂದು 29ನೇ ವಸಂತಕ್ಕೆ ಕಾಲಿಟ್ಟಿದ್ದಾರೆ. ಪ್ರತಿ ವರ್ಷದಂತೆ ಈ ಬಾರಿಯೂ ತಮ್ಮ ಹುಟ್ಟುಹಬ್ಬದ ವಿಶೇಷ ದಿನದಂದು ಆಂಧ್ರಪ್ರದೇಶದ ಪ್ರಸಿದ್ಧ ತಿರುಮಲ ವೆಂಕಟೇಶ್ವರ ಸ್ವಾಮಿಯ ದರ್ಶನ ಪಡೆಯಲು ಜಾನ್ವಿ ಆಗಮಿಸಿದ್ದರು. ಆದರೆ ಈ ಬಾರಿ ಅವರು ಕೇವಲ ದರ್ಶನ ಪಡೆಯುವುದಲ್ಲದೆ, ಬರೋಬ್ಬರಿ 3,550 ಮೆಟ್ಟಿಲುಗಳನ್ನು ಬರಿಗಾಲಿನಲ್ಲಿ ಹತ್ತುವ ಮೂಲಕ ತಮ್ಮ ಭಕ್ತಿಯನ್ನು ಮೆರೆದಿದ್ದಾರೆ. ತಿರುಪತಿ ಬೆಟ್ಟ ಹತ್ತುವಾಗ ಜಾನ್ವಿ ಅವರು ಬಿಳಿ ಬಣ್ಣದ ಫ್ಲೋರಲ್ ಕುರ್ತಾ ಧರಿಸಿದ್ದರು. ಸುಮಾರು 9ರಿಂದ 12 ಕಿಲೋಮೀಟರ್ ದೂರದ ಈ ಹಾದಿಯನ್ನು ಕ್ರಮಿಸಲು ಅವರಿಗೆ 4ರಿಂದ 5 ಗಂಟೆಗಳು ಬೇಕಾಯಿತು. ಜಾನ್ವಿ ಅವರ ಈ ಭಕ್ತಿಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ‘ಸರಳತೆಯಲ್ಲಿ ನೀವು ನಿಮ್ಮ ತಾಯಿ ಶ್ರೀದೇವಿಯಂತೆಯೇ ಕಾಣುತ್ತಿದ್ದೀರಿ’ ಎಂದು ಅಭಿಮಾನಿಗಳು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಈ ಬಾರಿ ಜಾನ್ವಿ ಕಪೂರ್ ಅವರ ಆಪ್ತ ಗೆಳೆಯನ ಅನುಪಸ್ಥಿತಿ ಕಾಣಿಸಿದೆ. ಸಾಮಾನ್ಯವಾಗಿ ಜಾನ್ವಿ ತಿರುಪತಿಗೆ ಭೇಟಿ ನೀಡುವಾಗ ಅವರ ಗೆಳೆಯ ಶಿಖರ್ ಪಹರಿಯಾ ಜೊತೆಗಿರುತ್ತಿದ್ದರು. ಆದರೆ ಈ ಬಾರಿ ಶಿಖರ್ ಬದಲಿಗೆ ಜಾನ್ವಿ ಬೇರೆ ಸ್ನೇಹಿತರೊಂದಿಗೆ ಬೆಟ್ಟ ಹತ್ತಿರುವುದು ವಿಶೇಷವಾಗಿತ್ತು. ಪ್ರತಿ ವರ್ಷ ತಮ್ಮ ತಾಯಿ ಶ್ರೀದೇವಿಯವರ ಜನ್ಮದಿನದಂದೂ ಜಾನ್ವಿ ಮಿಸ್ ಮಾಡದೆ ತಿರುಪತಿಗೆ ಭೇಟಿ ನೀಡುತ್ತಾರೆ.

**ಬರಿಗಾಲಲ್ಲಿ 3,550 ಮೆಟ್ಟಿಲು ಹತ್ತಿದ ನಟಿ**

# ತಪ್ಪು ತಿದ್ದಿಕೊಂಡ ‘ಧುರಂಧರ್’

2025 ರಲ್ಲಿ ಬಿಡುಗಡೆ ಆಗಿದ್ದ ‘ಧುರಂಧರ್’ ಸಿನಿಮಾ ಭಾರಿ ದೊಡ್ಡ ಹಿಟ್ ಆಗಿತ್ತು. ಹಲವು ಬಾಕ್ಸ್ ಆಫೀಸ್ ದಾಖಲೆಗಳನ್ನು ಮುರಿದು ಹೊಸ ದಾಖಲೆಗಳನ್ನು ನಿರ್ಮಿಸಿತ್ತು. ಇದೀಗ ಮಾರ್ಚ್ 19ರಂದು ‘ಧುರಂಧರ್ 2’ ಸಿನಿಮಾ ಬಿಡುಗಡೆ ಆಗುತ್ತಿದ್ದು, ಕಳೆದ ಬಾರಿ ಮಾಡಿದ್ದ ಒಂದು ತಪ್ಪನ್ನು ಈ ಬಾರಿ ತಿದ್ದುಕೊಂಡಿದೆ ಚಿತ್ರತಂಡ. ರಣ್ವೀರ್ ಸಿಂಗ್ ನಟನೆಯ ‘ಧುರಂಧರ್’ ಸಿನಿಮಾ ಕಳೆದ ವರ್ಷ ಡಿಸೆಂಬರ್ ತಿಂಗಳಲ್ಲಿ ಬಿಡುಗಡೆ ಆಗಿತ್ತು. ಬಾಕ್ಸ್ ಆಫೀಸ್‌ನಲ್ಲಿ ಹಲವು ಹಳೆಯ ದಾಖಲೆಗಳನ್ನು ಪುಡಿಗಟ್ಟಿದ ‘ಧುರಂಧರ್’ ಹಲವು ಹೊಸ ದಾಖಲೆಗಳನ್ನು ಬರೆಯಿತು. ಕೇವಲ ಹಿಂದಿ ಭಾಷೆಯಲ್ಲಿ ಮಾತ್ರವೇ ಬಿಡುಗಡೆ ಆಗಿದ್ದರೂ ಸಹ ಭಾಷೆಯ ಹಂಗಿಲ್ಲದೆ ದಕ್ಷಿಣದ ರಾಜ್ಯಗಳ ಜನರೂ ಸಹ ನೋಡಿ ಸಂಭ್ರಮಿಸಿದ್ದರು. ಆದರೆ ಸಿನಿಮಾವನ್ನು ತಮ್ಮ ಸ್ಥಳೀಯ ಭಾಷೆಯಲ್ಲಿ ಬಿಡುಗಡೆ ಮಾಡುವ ಬಗ್ಗೆ ಆಗಲೂ ಸಹ ಕೆಲ ಪ್ರೇಕ್ಷಕರು ಮನವಿ ಮಾಡಿದ್ದರು.



ಸಿನಿಮಾವನ್ನು ಆಂಧ್ರ-ತೆಲಂಗಾಣದಲ್ಲಿ ಬಿಡುಗಡೆ ಮಾಡಿದ್ದ ಮೈತ್ರಿ ಮೂವಿ ಮೇಕರ್ಸ್ ಸಹ ಸಿನಿಮಾವನ್ನು ತೆಲುಗಿಗೆ ಡಬ್ ಮಾಡಿ ಬಿಡುಗಡೆ ಮಾಡುವಂತೆ ಒತ್ತಾಯಿಸಿತ್ತು. ಇದೀಗ ‘ಧುರಂಧರ್ 2’ ಸಿನಿಮಾ ಬಿಡುಗಡೆ ಆಗುತ್ತಿದ್ದು, ಈ ಬಾರಿ ಮುಂಚಿತವಾಗಿ ಸಜ್ಜಾಗಿರುವ ಚಿತ್ರತಂಡ, ಹಿಂದಿ ಸೇರಿದಂತೆ ಒಟ್ಟಿಗೆ ಐದು ಭಾಷೆಗಳಲ್ಲಿ ಸಿನಿಮಾವನ್ನು ತೆರೆಗೆ ತರುತ್ತಿದೆ.

‘ಧುರಂಧರ್’ ಸಿನಿಮಾಕ್ಕೆ ದಕ್ಷಿಣದ ರಾಜ್ಯಗಳಲ್ಲಿ ಅದರಲ್ಲೂ ಕರ್ನಾಟಕ ಮತ್ತು ತೆಲುಗು ರಾಜ್ಯಗಳಿಂದ ಒಳ್ಳೆಯ ಕಲೆಕ್ಷನ್ ಹರಿದು ಬಂದಿತ್ತು. ಹಾಗಾಗಿ ಸಿನಿಮಾವನ್ನು ಹಿಂದಿಯ ಜೊತೆಗೆ ಕನ್ನಡ, ತೆಲುಗು, ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿ ಒಟ್ಟಿಗೆ ಬಿಡುಗಡೆ ಮಾಡುತ್ತಿದೆ. ನಾಳೆ ಬಿಡುಗಡೆ ಆಗುತ್ತಿರುವ ಸಿನಿಮಾದ ಟ್ರೈಲರ್ ಸಹ ಹಿಂದಿ ಸೇರಿದಂತೆ ಇತರೆ ದಕ್ಷಿಣ ಭಾಷೆಗಳಲ್ಲಿ ಯೂಟ್ಯೂಬ್‌ನಲ್ಲಿ ಬಿಡುಗಡೆ ಆಗಲಿದೆ.

ಸಿನಿಮಾವನ್ನು ಕೇವಲ ಹಿಂದಿಯಲ್ಲಿ ಮಾತ್ರವೇ ಬಿಡುಗಡೆ ಮಾಡದೆ ಇತರೆ ಭಾಷಿಕ ಸಿನಿಮಾ ಪ್ರೇಮಿಗಳಿಗೂ ಗೌರವ ಕೊಡುವ ಕಾರ್ಯವನ್ನು ‘ಧುರಂಧರ್’ ಚಿತ್ರತಂಡ ಮಾಡಿದೆ.

2025 ರಲ್ಲಿ ಬಿಡುಗಡೆ ಆಗಿದ್ದ ‘ಧುರಂಧರ್’ ಸಿನಿಮಾ ದಕ್ಷಿಣದ ರಾಜ್ಯಗಳಲ್ಲಿ ಒಳ್ಳೆಯ ಗಳಿಕೆ ಮಾಡಿತ್ತು. ಭಾರತದಲ್ಲಿ ‘ಧುರಂಧರ್’ ಸಿನಿಮಾ ಸುಮಾರು 900 ಕೋಟಿ ರೂಪಾಯಿ ಗಳಿಕೆ ಮಾಡಿತ್ತು. ಇದರಲ್ಲಿ ಸುಮಾರು 250 ರಿಂದ 300 ಕೋಟಿ ಹಣ ದಕ್ಷಿಣ ಭಾರತದ ರಾಜ್ಯಗಳಿಂದಲೇ ಬಂದಿತ್ತು ಎನ್ನಲಾಗಿದೆ. ಕರ್ನಾಟಕ ಒಂದರಲ್ಲೇ ಈ ಸಿನಿಮಾಕ್ಕೆ 70 ರಿಂದ 90 ಕೋಟಿ ಗಳಿಕೆ ಆಗಿತ್ತು. ಅದೂ ಕೇವಲ ಹಿಂದಿ ವರ್ಷನ್‌ಗೆ. ಈ ಬಾರಿ ‘ಧುರಂಧರ್ 2’ ಸಿನಿಮಾಕ್ಕೂ ಇನ್ನೂ ಹೆಚ್ಚಿನ ಗಳಿಕೆ ಆಗಬಹುದು ಎನ್ನಲಾಗುತ್ತಿದೆ. ‘ಧುರಂಧರ್ 2’ ಸಿನಿಮಾವು ‘ಧುರಂಧರ್’ ಸಿನಿಮಾದ ಮುಂದಿನ ಭಾಗವಾಗಿದ್ದು, ‘ಧುರಂಧರ್’ ಸಿನಿಮಾನಲ್ಲಿದ್ದ ರಣ್ವೀರ್ ಸಿಂಗ್, ಅಕ್ಷಯ್ ಖನ್ನಾ, ಸಂಜಯ್ ದತ್ ಜೊತೆಗೆ ಇನ್ನೂ ಕೆಲವು ಪಾತ್ರಗಳು ಈ ಸಿನಿಮಾಕ್ಕೆ ಸೇರಿಕೊಂಡಿವೆ.

# ಗ್ಲಾಮ್ ಲುಕ್‌ನಲ್ಲಿ ಆಶಿಕಾ



ಆಶಿಕಾ ರಂಗನಾಥ್ ಅವರು ಸಿನಿಮಾಮಾಡುವುದರ ಜೊತೆಗೆ ಫೋಟೋ ಶೂಟ್‌ಮಾಡಲು ಸಮಯ ಮೀಸಲಿಡುತ್ತಾರೆ. ಸೋಶಿಯಲ್ ಮೀಡಿಯಾ ಅಭಿಮಾನಿಗಳಿಗಾಗಿ ಅವರು ಫೋಟೋ ಹಂಚಿಕೊಳ್ಳುತ್ತಾ ಇರುತ್ತಾರೆ. ಈಗ ಅವರ ಹೊಸ ಫೋಟೋ ವೈರಲ್ ಆಗಿ ಗಮನ ಸೆಳೆದಿದೆ. ಇದರಲ್ಲಿ ಅವರು ಯುವರಾಣಿಯಂತೆ ಕಾಣಿಸಿದ್ದಾರೆ. ಆಶಿಕಾ ರಂಗನಾಥ್ ಅವರು ಯುವ ರಾಣಿಯಂತೆ ಕಂಗೊಳಿಸಿದ್ದಾರೆ. ಅವರ ಹೊಸ ಫೋಟೋಗಳು ಗಮನ ಸೆಳೆದಿವೆ. ಅವರ ಕ್ಲಾಸಿಕ್ ಗ್ಲಾಮ್ ಲುಕ್ ಅನ್ನು ಅಭಿಮಾನಿಗಳು ಬಹುವಾಗಿ ಇಷ್ಟಪಟ್ಟಿದ್ದಾರೆ. ಆಶಿಕಾ ರಂಗನಾಥ್ ಅವರು ಸಿನಿಮಾದಲ್ಲಿ ನಟಿಸುವುದರ ಜೊತೆಗೆ ಸಮಯ ಸಿಕ್ಕಾಗ ಫೋಟೋಶೂಟ್ ಕೂಡ ಮಾಡಿಸುತ್ತಾ ಇರುತ್ತಾರೆ. ಈಗ ಅವರ ಹೊಸ ಫೋಟೋದ ಥೀಮ್ ಗಮನ ಸೆಳೆದಿದೆ. ಆಶಿಕಾ ಫೋಟೋಗಳು ರೆಟ್ರೋ ಥೀಮ್‌ನಲ್ಲಿ ಇವೆ. ಕೈಯಲ್ಲಿ ಹಿಡಿದ ಗುಲಾಬಿ ಹೂವು ಗಮನ ಸೆಳೆದಿದೆ. ಆಶಿಕಾ ಫೋಟೋ ಹಂಚಿಕೊಂಡ ಕೆಲವೇ ಸಮಯದಲ್ಲಿ ಲಕ್ಷಾಂತರ ವೀವ್ಸ್ ಪಡೆದುಕೊಂಡಿದೆ. ಆಶಿಕಾ ಅವರು ಇತ್ತೀಚೆಗೆ ಬ್ಯಾಕ್ ಟು ಬ್ಯಾಕ್ ಮದುವೆಗೆ ಹಾಜರಿ ಹಾಕಿದ್ದರು. ರಶ್ಮಿಕಾ ಅವರ ಅರಿಶಿಣ ಶಾಸ್ತ್ರಕ್ಕೆ, ಆರತಕ್ಷತೆಗೆ ವಿಸಿಟ್ ಕೊಟ್ಟಿದ್ದರು. ದುಶ್ಯಂತ್ ವಿವಾಹಕ್ಕೆ ಅವರು ತೆರಳಿದ್ದರು. ಆಶಿಕಾ ರಂಗನಾಥ್ ಅವರು ಹೊಸ ಹೊಸ ಸಿನಿಮಾಗಳನ್ನು ಒಪ್ಪಿ ನಟಿಸುತ್ತಿದ್ದಾರೆ. ಅವರಿಗೆ ಕನ್ನಡದ ಜೊತೆಗೆ ಪರಭಾಷೆಯಲ್ಲೂ ಬೇಡಿಕೆ ಇದೆ. ಅವರು ಅಲ್ಲಿಯೂ ಸಿನಿಮಾ ಮಾಡುತ್ತಿದ್ದಾರೆ.

# ಫೈನಲ್ ಪಂದ್ಯ ರದ್ದಾದರೆ ಯಾವ ತಂಡಕ್ಕೆ ಚಾಂಪಿಯನ್ ಪಟ್ಟ

2026ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಮುಖಾಮುಖಿಯಾಗಲಿವೆ. ಮಳೆ ಅಥವಾ ಇನ್ನಿತರ ಕಾರಣಗಳಿಂದ ಪಂದ್ಯ ರದ್ದಾದರೆ, ವಿಜೇತರು ಯಾರು ಎಂಬ ಪ್ರಶ್ನೆ ಮೂಡಿದೆ. ಐಸಿಸಿ ನಿಯಮಗಳ ಪ್ರಕಾರ ಮೀಸಲು ದಿನ ಮತ್ತು ಕನಿಷ್ಠ 10 ಓವರ್‌ಗಳ ಆಟ ಕಡ್ಡಾಯ. ಆದರೂ ಪಂದ್ಯ ಪೂರ್ಣಗೊಳ್ಳದಿದ್ದರೆ, ಐಸಿಸಿ ಎರಡೂ ತಂಡಗಳನ್ನು ಜಂಟಿ ಚಾಂಪಿಯನ್ ಎಂದು ಘೋಷಿಸುತ್ತದೆ. ಈ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲಿದೆ.

2026 ರ ಟಿ20 ವಿಶ್ವಕಪ್‌ನ ಫೈನಲ್ ಪಂದ್ಯ ಮಾರ್ಚ್ 8 ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ನಡುವೆ ನಡೆಯಲಿದೆ. ಒಂದೆಡೆ ಕಿವೀಸ್, ದಕ್ಷಿಣ ಆಫ್ರಿಕಾ ತಂಡವನ್ನು ಏಕಪಕ್ಷೀಯವಾಗಿ ಮಣಿಸಿ ಫೈನಲ್‌ಗೇರಿದ್ದರೆ, ಮತ್ತೊಂದೆಡೆ ಆತಿಥೇಯ ಭಾರತ, ಇಂಗ್ಲೆಂಡ್ ತಂಡವನ್ನು ರೋಚಕ ಪಂದ್ಯದಲ್ಲಿ ಸೋಲಿಸಿ ಫೈನಲ್ ಟಿಕೆಟ್ ಪಡೆದುಕೊಂಡಿದೆ. ಟಿ20 ವಿಶ್ವಕಪ್ ಫೈನಲ್‌ನಲ್ಲಿ ಎರಡೂ ತಂಡಗಳು ಮುಖಾಮುಖಿಯಾಗುತ್ತಿರುವುದು ಇದೇ ಮೊದಲು. ಹೀಗಾಗಿ ಈ ಎರಡು ಬಲಿಷ್ಠ ತಂಡಗಳು ಪ್ರಶಸ್ತಿ ಸುತ್ತಿನಲ್ಲಿ ಯಾವ ರೀತಿಯ ಪ್ರದರ್ಶನ ನೀಡುತ್ತವೆ ಎಂಬುದನ್ನು ನೋಡಲು ಅಭಿಮಾನಿಗಳು ಕಾದುಕುಳಿತಿದ್ದಾರೆ.




**ಐಸಿಸಿ ನಿಯಮ ಏನು ಹೇಳುತ್ತದೆ**

ಆದರೆ ಒಂದು ದೊಡ್ಡ ಪ್ರಶ್ನೆಯೆಂದರೆ ಮಳೆಯಿಂದಾಗಿ ಅಥವಾ ಇನ್ನಿತರೆ ಕಾರಣದಿಂದಾಗಿ ಪಂದ್ಯ ರದ್ದಾದರೆ, ಯಾರಿಗೆ ಚಾಂಪಿಯನ್ ಪಟ್ಟ ಸಿಗಲಿದೆ ಭಾರತ ಚಾಂಪಿಯನ್ ಆಗುತ್ತದೆಯೇ ಅಥವಾ ನ್ಯೂಜಿಲೆಂಡ್ ಆಗುತ್ತದೆಯೇ ಎಂಬುದಾಗಿದೆ. ಹಾಗಿದ್ದರೆ, ಈ ಬಗ್ಗೆ ಐಸಿಸಿ ನಿಯಮ ಏನು ಹೇಳುತ್ತದೆ ಎಂಬುದನ್ನು ನೋಡುವುದಾದರೆ ಪಂದ್ಯ ರದ್ದಾದರೆ, ಯಾರು ಚಾಂಪಿಯನ್ ಇದು ಪ್ರಶಸ್ತಿ ಸುತ್ತಿನ ಪಂದ್ಯ ಆಗಿರುವುದರಿಂದ ಐಸಿಸಿ ಫಲಿತಾಂಶವನ್ನು ಎದುರು ನೋಡುತ್ತಿದೆ. ಪರಿಣಾಮವಾಗಿ, ಐಸಿಸಿ ಈ ಪಂದ್ಯಕ್ಕಾಗಿ ಮೀಸಲು ದಿನವನ್ನು ಕಾಯ್ದಿರಿಸಿದೆ. ಪಂದ್ಯದ ದಿನದಂದು ಪಂದ್ಯ ಪ್ರಾರಂಭವಾಗಲು ಸಾಧ್ಯವಾಗದಿದ್ದರೆ ಅಥವಾ ಮಳೆಯಿಂದಾಗಿ ಅಪೂರ್ಣವಾಗಿ ಉಳಿದರೆ, ಪಂದ್ಯವನ್ನು ಮರುದಿನ ಅಂದರೆ ಮೀಸಲು ದಿನದಂದು ಆಡಲಾಗುತ್ತದೆ. ಪಂದ್ಯವು ಈಗಾಗಲೇ ಮಾರ್ಚ್ 8 ರಂದು ಪ್ರಾರಂಭ ಆದರೂ ಮಳೆಯಿಂದಾಗಿ ನಿಲ್ಲಿಸಲ್ಪಟ್ಟರೆ, ಮಾರ್ಚ್ 9 ರಂದು ಅದೇ ಹಂತದಿಂದ ಅದು ಮುಂದುವರಿಯುತ್ತದೆ. ಇದರ ಜೊತೆಗೆ ಫೈನಲ್‌ಗಾಗಿ, ಎರಡೂ ದಿನಗಳಲ್ಲಿ 120 ನಿಮಿಷಗಳ ಹೆಚ್ಚುವರಿ ಸಮಯವನ್ನು ಸಹ ಮೀಸಲಿಡಲಾಗಿದೆ.

ಓವರ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಿಯಾದರೂ ಪಂದ್ಯವನ್ನು ಪೂರ್ಣಗೊಳಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತದೆ. ಆದಾಗ್ಯೂ, ಫಲಿತಾಂಶವನ್ನು ನಿರ್ಧರಿಸಬೇಕೆಂದರೆ ಎರಡೂ ತಂಡಗಳು ಕನಿಷ್ಠ 10 ಓವರ್‌ಗಳನ್ನು ಆಡಬೇಕು.

ಜಂಟಿ ವಿಜೇತರು ಎಂದು ಘೋಷಣೆ ಆದಾಗ್ಯೂ ಮಾರ್ಚ್ 8 ಮತ್ತು 9 ರಂದು ಪಂದ್ಯವನ್ನು ನಡೆಸಲು ಸಾಧ್ಯವಾಗದಿದ್ದರೆ, ಅಥವಾ ಪಂದ್ಯವನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ, ಐಸಿಸಿ ನಿಯಮಗಳ ಪ್ರಕಾರ, ಎರಡೂ ತಂಡಗಳನ್ನು ಜಂಟಿ ವಿಜೇತರು ಎಂದು ಘೋಷಿಸಲಾಗುತ್ತದೆ. ಇದರರ್ಥ ಭಾರತ ಮತ್ತು ನ್ಯೂಜಿಲೆಂಡ್ ಪಂದ್ಯಾವಳಿಯ ಜಂಟಿ ಚಾಂಪಿಯನ್ ಆಗಿರುತ್ತವೆ. ಕ್ರಿಕೆಟ್ ಇತಿಹಾಸದಲ್ಲಿ ಈ ರೀತಿಯಾಗಿ ಜಂಟಿ ವಿಜೇತರನ್ನು ಘೋಷಿಸಿರುವುದು ತೀರ ವಿರಳ.

ಆದರೆ ಈ ವಿರಳ ಘಟನೆಗೆ ಟೀಂ ಇಂಡಿಯಾ ಸಾಕ್ಷಿಯಾಗಿದೆ. 2003 ರಲ್ಲಿ ನಡೆದಿದ್ದ ಚಾಂಪಿಯನ್ಸ್ ಟ್ರೋಫಿಯ ಫೈನಲ್ ಪಂದ್ಯವನ್ನು ಮಳೆಯಿಂದ ರದ್ದುಗೊಳಿಸಬೇಕಾಯಿತು. ಹೀಗಾಗಿ ಭಾರತ ಮತ್ತು ಶ್ರೀಲಂಕಾ ಎರಡು ತಂಡಗಳು ಚಾಂಪಿಯನ್ಸ್ ಟ್ರೋಫಿಯನ್ನು ಹಂಚಿಕೊಂಡಿದ್ದವು.

# ಪ್ಲೇಯರ್ ಆಫ್ ದಿ ಟೂರ್ನಮೆಂಟ್ ಪ್ರಶಸ್ತಿ

ಟಿ20 ವಿಶ್ವಕಪ್‌ನ ಪ್ಲೇಯರ್ ಆಫ್ ದಿ ಟೂರ್ನಮೆಂಟ್ ಪ್ರಶಸ್ತಿಗೆ 8 ಆಟಗಾರರು ನಾಮನಿರ್ದೇಶಿತರಾಗಿದ್ದಾರೆ. ಈ ಎಂಟು ಆಟಗಾರರಲ್ಲಿ ಏಕೈಕ ಭಾರತೀಯ ಕಾಣಿಸಿಕೊಂಡಿದ್ದಾರೆ. ಇನ್ನು ಪಾಕಿಸ್ತಾನ್ ತಂಡದ ಓರ್ವ, ನ್ಯೂಝಿಲೆಂಡ್ ತಂಡದ ಇಬ್ಬರು ಈ ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದಾರೆ.


ಟಿ20 ವಿಶ್ವಕಪ್ ಮುಕ್ತಾಯಕ್ಕೆ ಇನ್ನು ಉಳಿದಿರುವುದು ಕೇವಲ ಒಂದು ಮ್ಯಾಚ್ ಮಾತ್ರ. ಮಾರ್ಚ್ 8 ರಂದು ನಡೆಯಲಿರುವ ಭಾರತ ಮತ್ತು ನ್ಯೂಝಿಲೆಂಡ್ ನಡುವಣ ಫೈನಲ್ ಪಂದ್ಯದೊಂದಿಗೆ ವಿಶ್ವಕಪ್‌ಗೆ ತೆರೆ ಬೀಳಲಿದೆ. ಅದಕ್ಕೂ ಮುನ್ನ ಈ ಬಾರಿಯ ಟೂರ್ನಿಯ ಶ್ರೇಷ್ಠ ಆಟಗಾರನ ಪ್ರಶಸ್ತಿಗೆ ನಾಮನಿರ್ದೇಶನವಾಗಿರುವ ಆಟಗಾರರ ಪಟ್ಟಿ ಬಿಡುಗಡೆಯಾಗಿದೆ. ಈ ಪಟ್ಟಿಯಲ್ಲಿ 8 ಆಟಗಾರರಲ್ಲಿ ಒಬ್ಬರು ಪ್ಲೇಯರ್ ಆಫ್ ದಿ ಟೂರ್ನಮೆಂಟ್ ಪ್ರಶಸ್ತಿ ಪಡೆಯಲಿದ್ದಾರೆ. ಈ ಪಟ್ಟಿಯಲ್ಲಿರುವ ಆಟಗಾರರು ಈ ಕೆಳಗಿನಂತಿದೆ..

**ವಿಲ್ ಜ್ಯಾಕ್ಸ್:** ಇಂಗ್ಲೆಂಡ್ ತಂಡದ ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಜ್ಯಾಕ್ಸ್ ಈ ಬಾರಿಯ ವಿಶ್ವಕಪ್‌ನಲ್ಲಿ 8 ಪಂದ್ಯಗಳನ್ನಾಡಿದ್ದು, ಈ ವೇಳೆ 9 ವಿಕೆಟ್ ಕಬಳಿಸಿದ್ದಾರೆ. ಅಷ್ಟೇ ಅಲ್ಲದೆ 226 ರನ್‌ಗಳನ್ನು ಕಲೆಹಾಕಿದ್ದಾರೆ.

**ಸಾಹಿಬ್‌ಝಾದ ಫರ್ಹಾನ್:** ಪಾಕಿಸ್ತಾನ್ ತಂಡದ ಆರಂಭಿಕ ದಾಂಡಿಗ ಸಾಹಿಬ್‌ಝಾದ ಫರ್ಹಾನ್ ಕೂಡ ಪ್ಲೇಯರ್ ಆಫ್ ದಿ ಟೂರ್ನಮೆಂಟ್ ಪ್ರಶಸ್ತಿ ಸುತ್ತಿನಲ್ಲಿದ್ದಾರೆ. ಪಾಕ್ ಪರ 7 ಪಂದ್ಯಗಳನ್ನಾಡಿದ್ದ ಸಾಹಿಬ್ 160ರ ಸ್ಟ್ರೈಕ್ ರೇಟ್‌ನಲ್ಲಿ ಒಟ್ಟು 383 ರನ್ ಕಲೆಹಾಕಿದ್ದಾರೆ.

**ಲುಂಗಿ ಎನ್‌ಗಿಡಿ:** ಸೌತ್ ಆಫ್ರಿಕಾ ವೇಗಿ ಲುಂಗಿ ಎನ್‌ಗಿಡಿ ಈ ಬಾರಿಯ ವಿಶ್ವಕಪ್‌ನಲ್ಲಿ 7 ಪಂದ್ಯಗಳಲ್ಲಿ ಬೌಲಿಂಗ್ ಮಾಡಿದ್ದು ಈ ವೇಳೆ 7.19 ಎಕಾನಮಿಯಲ್ಲಿ ರನ್ ನೀಡಿ ಒಟ್ಟು 12 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಈ ಮೂಲಕ ಪ್ಲೇಯರ್ ಆಫ್ ದಿ ಟೂರ್ನಮೆಂಟ್ ಪ್ರಶಸ್ತಿಗೆ ನಾಮನಿರ್ದೇಶಿತರಾಗಿದ್ದಾರೆ.

**ಟಿಮ್ ಸೈಫರ್ಟ್:** ನ್ಯೂಝಿಲೆಂಡ್ ತಂಡದ ಆರಂಭಿಕ ದಾಂಡಿಗ ಟಿಮ್ ಸೈಫರ್ಟ್ 8 ಪಂದ್ಯಗಳಲ್ಲಿ ಬ್ಯಾಟ್ ಬೀಸಿದ್ದಾರೆ. ಈ ವೇಳೆ 161.17ರ ಸ್ಟ್ರೈಕ್ ರೇಟ್‌ನಲ್ಲಿ 274 ರನ್‌ಗಳನ್ನು ಕಲೆಹಾಕಿದ್ದಾರೆ.



**ಶ್ಯಾಡ್ಲಿ ವ್ಯಾನ್ ಶಾಲ್ಕ್‌ವಿಕ್:** ಯುಎಸ್‌ಎ ತಂಡದ ವೇಗಿ ಶ್ಯಾಡ್ಲಿ ವ್ಯಾನ್ ಶಾಲ್ಕ್‌ವಿಕ್ ಈ ಬಾರಿಯ ವಿಶ್ವಕಪ್‌ನಲ್ಲಿ ಆಡಿರುವುದು ಕೇವಲ 4 ಪಂದ್ಯಗಳನ್ನು ಮಾತ್ರ. ಈ ವೇಳೆ 6.80 ಎಕಾನಮಿಯಲ್ಲಿ ರನ್ ನೀಡಿ ಒಟ್ಟು 13 ವಿಕೆಟ್‌ಗಳನ್ನು ಕಬಳಿಸಿದ್ದಾರೆ ಎಂಬುದೇ ವಿಶೇಷ.

**ರಚಿನ್ ರವೀಂದ್ರ:** ನ್ಯೂಝಿಲೆಂಡ್ ತಂಡದ ಯುವ ಆಲ್‌ರೌಂಡರ್ ರಚಿನ್ ರವೀಂದ್ರ ಈವರೆಗೆ ಆಡಿದ 8 ಪಂದ್ಯಗಳಿಂದ ಒಟ್ಟು 11 ವಿಕೆಟ್ ಕಬಳಿಸಿದ್ದಾರೆ. ಹಾಗೆಯೇ 128 ರನ್‌ಗಳನ್ನು ಕಲೆಹಾಕಿ ಪ್ಲೇಯರ್ ಆಫ್ ದಿ ಟೂರ್ನಮೆಂಟ್ ಪ್ರಶಸ್ತಿಗೆ ನಾಮನಿರ್ದೇಶಿತರಾಗಿದ್ದಾರೆ.

**ಐಡೆನ್ ಮಾರ್ಕ್ರಾಮ್:** ಸೌತ್ ಆಫ್ರಿಕಾ ತಂಡದ ನಾಯಕ ಐಡೆನ್ ಮಾರ್ಕ್ರಾಮ್ ಈ ಬಾರಿಯ ವಿಶ್ವಕಪ್‌ನಲ್ಲಿ 8 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ ಬ್ಯಾಟಿಂಗ್ ಮೂಲಕ 286 ರನ್ ಕಲೆಹಾಕಿದರೆ, ಬೌಲಿಂಗ್ ಮೂಲಕ ಒಂದು ವಿಕೆಟ್ ಪಡೆದಿದ್ದಾರೆ.

**ಸಂಜು ಸ್ಯಾಮ್ಸನ್:** ಸಂಜು ಸ್ಯಾಮ್ಸನ್ ಈ ಬಾರಿಯ ವಿಶ್ವಕಪ್‌ನಲ್ಲಿ ಆಡಿರುವುದು ಕೇವಲ 4 ಮ್ಯಾಚ್‌ಗಳನ್ನು ಮಾತ್ರ. ಈ ವೇಳೆ 201ರ ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟ್ ಬೀಸಿರುವ ಅವರು ಒಟ್ಟು 232 ರನ್ ಕಲೆಹಾಕಿದ್ದಾರೆ.

# ಗೆದ್ದ ತಂಡದ ಮೇಲೆ ಹಣದ ಮಳೆ; ಸೋತ ತಂಡಕ್ಕೂ ಸಿಗಲಿದೆ ಕೋಟಿ




2026ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಮಾರ್ಚ್ 8ರಂದು ಅಹಮದಾಬಾದ್‌ನಲ್ಲಿ ಸೆಣಸಲಿವೆ. ಸತತ ಎರಡನೇ ವಿಶ್ವಕಪ್ ಗೆದ್ದು ಇತಿಹಾಸ ನಿರ್ಮಿಸಲು ಭಾರತ ಸಜ್ಜಾಗಿದ್ದರೆ, ನ್ಯೂಜಿಲೆಂಡ್ ಚೊಚ್ಚಲ ಪ್ರಶಸ್ತಿಗಾಗಿ ಹೋರಾಡಲಿದೆ. ಐಸಿಸಿ ಕಡೆಯಿಂದ ಚಾಂಪಿಯನ್ ಮತ್ತು ರನ್ನರ್ ಅಪ್ ತಂಡಗಳಿಗೆ ಭಾರಿ ಬಹುಮಾನವೂ ಸಿಗಲಿದೆ. ಈ ಹಣದ ಕುರಿತು ಸಂಪೂರ್ಣ ಮಾಹಿತಿ ಇಲ್ಲಿದೆ. ಭಾರತ ತಂಡ ಗೆದ್ದರೆ, ಪ್ರಶಸ್ತಿ ಹಾಗೂ ಕೋಟಿಗಳ ಮಳೆ ಎರಡೂ ಸಿಗಲಿದೆ.

ಫೆಬ್ರವರಿ 7 ರಿಂದ ಆರಂಭವಾಗಿದ್ದ 2026 ರ ಟಿ20 ವಿಶ್ವಕಪ್ ಈಗ ಅಂತಿಮ ಹಂತವನ್ನು ತಲುಪಿದೆ. ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಫೈನಲ್ ಪಂದ್ಯ ಮಾರ್ಚ್ 8 ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ಒಂದೆಡೆ ಭಾರತ ಸತತ ಎರಡನೇ ಟ್ರೋಫಿ ಮೇಲೆ ಕಣ್ಣಿಟ್ಟಿದ್ದರೆ, ನ್ಯೂಜಿಲೆಂಡ್ ಚೊಚ್ಚಲ ಟಿ20 ವಿಶ್ವಕಪ್ ಗೆಲುವಿಗಾಗಿ ಎದುರು ನೋಡುತ್ತಿದೆ. ಇದರ ಜೊತೆಗೆ ಚಾಂಪಿಯನ್ ತಂಡದ ಮೇಲೆ ಕೋಟಿಗಳ ಮಳೆ ಸುರಿಸಲು ಐಸಿಸಿ ತಯಾರಿ ಮಾಡಿಕೊಂಡಿದೆ. ಹಿಂದಿನ ಒಂಬತ್ತು ಟಿ20 ವಿಶ್ವಕಪ್ ಆವೃತ್ತಿಗಳಲ್ಲಿ, ಅತಿ ಹೆಚ್ಚು ಬಹುಮಾನದ ಹಣವನ್ನು 2024 ರ ಪಂದ್ಯಾವಳಿಯಲ್ಲಿ ವಿತರಿಸಲಾಯಿತು. 2024 ರ ಟಿ20 ವಿಶ್ವಕಪ್‌ನ ಬಹುಮಾನದ ಗಾತ್ರವನ್ನು ಐಸಿಸಿ 103 ಕೋಟಿ ರೂಗಳಿಗೆ ಏರಿಸಿತ್ತು. ಅದರಂತೆ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾವನ್ನು ಸೋಲಿಸಿ ಚಾಂಪಿಯನ್ ಆಗಿದ್ದ ಟೀಂ ಇಂಡಿಯಾಕ್ಕೆ 20.42 ಕೋಟಿ ರೂಗಳ ಬಹುಮಾನ ಸಿಕ್ಕಿತ್ತು. ಹಾಗೆಯೇ ರನ್ನರ್ ಅಪ್ ಆಗಿದ್ದ ಆಫ್ರಿಕಾ ತಂಡಕ್ಕೆ 10.67 ಕೋಟಿ ರೂ. ಬಹುಮಾನ ನೀಡಲಾಗಿತ್ತು. 2026 ರ ಟಿ20 ವಿಶ್ವಕಪ್‌ನ ಬಹುಮಾನದ ಹಣವನ್ನು ಐಸಿಸಿ ಇನ್ನೂ ಘೋಷಿಸಿಲ್ಲ. ಹಿಂದಿನ ಆವೃತ್ತಿಗಳನ್ನು ಪರಿಗಣಿಸಿದರೆ, ಫೈನಲ್‌ನ ಫಲಿತಾಂಶ ಏನೇ ಇರಲಿ, ಎರಡೂ ತಂಡಗಳು ಶ್ರೀಮಂತರಾಗುವುದು ಖಚಿತ. ಫೈನಲ್‌ನಲ್ಲಿ ಸೋತರೂ ಟೀಂ ಇಂಡಿಯಾ 1.28 ಮಿಲಿಯನ್ ಡಾಲರ್ (ಸುಮಾರು 12 ಕೋಟಿ ರೂ.) ಪಡೆಯುತ್ತದೆ.

2024 ರಲ್ಲಿ ಚಾಂಪಿಯನ್ ಆಗಿದ್ದ ಭಾರತ ತಂಡಕ್ಕೆ ಐಸಿಸಿ ಮಾತ್ರವಲ್ಲದೆ ಬಿಸಿಸಿಐ ಕೂಡ ಭರ್ಜರಿ ಬಹುಮಾನ ಘೋಷಿಸಿತ್ತು. ಅದರಂತೆ ರೋಹಿತ್ ಪಡೆಗೆ ಬಿಸಿಸಿಐ 125 ಕೋಟಿ ರೂಪಾಯಿಯನ್ನು ಪ್ರತ್ಯೇಕ ಬಹುಮಾನವಾಗಿ ನೀಡಿತ್ತು. ಆದ್ದರಿಂದ, 2026 ರಲ್ಲಿ ತಂಡವು ಮತ್ತೆ ಗೆದ್ದರೆ, ಈ ಬಾರಿಯೂ ದೊಡ್ಡ ಮೊತ್ತದ ಬಹುಮಾನ ಸಿಗಬಹುದು.

**ಸ್ಟ್ರಾಂಗ್ ಕಮ್‌ಬ್ಯಾಕ್ ಮಾಡಲು ಇದೇ ಕಾರಣ!**

ಭಾರತ ತಂಡವು ಫೈನಲ್‌ನಲ್ಲಿ ಇತಿಹಾಸ ನಿರ್ಮಿಸುವ ಗುರಿಯನ್ನು ಹೊಂದಿದೆ. ನಾಲ್ಕನೇ ಬಾರಿಗೆ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಆಡುತ್ತಿರುವ ಮೊದಲ ತಂಡ ಎನಿಸಿಕೊಂಡಿರುವ ಟೀಂ ಇಂಡಿಯಾ ಸತತ ಎರಡನೇ ಬಾರಿಗೆ ಟೂರ್ನಮೆಂಟ್ ಗೆಲ್ಲುವ ಅವಕಾಶವನ್ನು ಹೊಂದಿದೆ.

ಇದುವರೆಗೆ ಯಾವುದೇ ತಂಡ ಸತತ ಎರಡನೇ ಬಾರಿಗೆ ಟ್ರೋಫಿ ಗೆದ್ದಿಲ್ಲ. ಇದಲ್ಲದೆ, ಯಾವುದೇ ತಂಡ ಕೂಡ ತವರಿನಲ್ಲಿ ಟಿ20 ವಿಶ್ವಕಪ್ ಗೆದ್ದಿಲ್ಲ. ಹೀಗಾಗಿ ಟೀಂ ಇಂಡಿಯಾ ಚಾಂಪಿಯನ್ ಪಟ್ಟಕ್ಕೇರಿ ಇತಿಹಾಸ ಬದಲಿಸುವ ಇರಾದೆಯಲ್ಲಿದೆ.

# ಸೈಲೆಂಟ್ ಮಾಡಲು ಬಂದು, ಸೈಲೆಂಟ್ ಆಗಿ ಸೋಲಿಸಿದ ಸ್ಯಾಮ್

ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ 20 ಓವರ್‌ಗಳಲ್ಲಿ 253 ರನ್ ಕಲೆಹಾಕಿದ್ದರು. ಈ ಗುರಿಯನ್ನು ಬೆನ್ನತ್ತಿದ ಇಂಗ್ಲೆಂಡ್ 246 ರನ್‌ಗಳಿಸಲಷ್ಟೇ ಶಕ್ತರಾಗಿದ್ದಾರೆ. ಈ ಮೂಲಕ ಭಾರತ ತಂಡವು 7 ರನ್‌ಗಳ ಜಯ ಸಾಧಿಸಿದೆ.

ಟಿ20 ವಿಶ್ವಕಪ್‌ನ ಸೆಮಿಫೈನಲ್ ಪಂದ್ಯಕ್ಕೂ ಮುನ್ನ ನಡೆದ ಸುದ್ದಿಗೋಷ್ಠಿಯಲ್ಲಿ ಕಾಣಿಸಿಕೊಂಡಿದ್ದ ಇಂಗ್ಲೆಂಡ್ ಆಲ್‌ರೌಂಡರ್, ಸ್ಯಾಮ್ ಕರನ್ ವಾಂಖೆಡೆ ಸ್ಟೇಡಿಯಂನಲ್ಲಿ ಭಾರತೀಯ ಪ್ರೇಕ್ಷಕರನ್ನು ಸೈಲೆಂಟ್ ಮಾಡುತ್ತೇವೆ ಎಂದು ಸವಾಲು ಹಾಕಿದ್ದರು. ಈ ಸವಾಲಿನ ಮುಕ್ತಾಯದಲ್ಲಿ ಸೈಲೆಂಟ್ ಆಗಿದ್ದ ಸ್ಯಾಮ್ ಕರನ್. ಅದು ಸಹ ಸೈಲೆಂಟ್ ಆಗಿ ತನ್ನದೇ ತಂಡವನ್ನು ಸೋಲಿಸುವ ಮೂಲಕ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ 20 ಓವರ್‌ಗಳಲ್ಲಿ ಬರೋಬ್ಬರಿ 253 ರನ್ ಕಲೆಹಾಕಿದ್ದರು. ಈ ಗುರಿ ಬೆನ್ನತ್ತಿದ ಇಂಗ್ಲೆಂಡ್ ಪರ ಜೇಕಬ್ ಬೆಥೆಲ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದ್ದರು. ಇನ್ನು ಟಾಮ್ ಬ್ಯಾಂಟನ್, ವಿಲ್ ಜ್ಯಾಕ್ಸ್ ಕೂಡ ಅಲ್ಪ ಮೊತ್ತದ ಕಾಣಿಕೆ ನೀಡಿದ್ದರು. ಈ ಮೂಲಕ ಇಂಗ್ಲೆಂಡ್ ತಂಡವು 14 ಓವರ್‌ಗಳ ಮುಕ್ತಾಯದ ವೇಳೆ ಬರೋಬ್ಬರಿ 172 ರನ್ ಕಲೆಹಾಕಿದ್ದರು. ಆದರೆ ಈ ರನ್ ಗತಿ ಕುಂಠಿತವಾಗಿದ್ದೇ ಸ್ಯಾಮ್ ಕರನ್ ಎಂಟ್ರಿಯೊಂದಿಗೆ. ನಿರ್ಣಾಯಕವಾಗಿದ್ದ ಕೊನೆಯ 6 ಓವರ್‌ಗಳ ವೇಳೆ ಬ್ಯಾಟಿಂಗ್‌ಗೆ ಆಗಮಿಸಿದ ಸ್ಯಾಮ್ ಕರನ್ 14 ಎಸೆತಗಳನ್ನು ಎದುರಿಸಿ ಕಲೆಹಾಕಿದ್ದು ಕೇವಲ 18 ರನ್‌ಗಳು ಮಾತ್ರ. ಅಂದರೆ ನಿರ್ಣಾಯಕ ಹಂತದಲ್ಲಿ ಸ್ಯಾಮ್ ಕರನ್ ಕೇವಲ 128ರ ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟ್ ಬೀಸಿದ್ದರು.

ಅಂದರೆ ಅರ್ಷದೀಪ್ ಸಿಂಗ್ ಹಾಗೂ ವರುಣ್ ಚಕ್ರವರ್ತಿಯ ಓವರ್‌ಗಳಲ್ಲಿ ಹೆಚ್ಚಿನ ಬಾಲ್ ಎದುರಿಸಿದ್ದ ಕರನ್ ಸಿಂಗಲ್ ಹಾಗೂ ಡಬಲ್ ರನ್‌ಗಳಿಸಲಷ್ಟೇ ಶಕ್ತರಾಗಿದ್ದರು.

ಈ ನಿಧಾನಗತಿಯ ಬ್ಯಾಟಿಂಗ್ ಇಂಗ್ಲೆಂಡ್‌ನ ಚೇಸಿಂಗ್ ಮೇಲೆ ಪರಿಣಾಮ ಬೀರಿತು ಎಂದರೆ ತಪ್ಪಾಗಲಾರದು. ಇದಕ್ಕೂ ಮುನ್ನ ಬೌಲಿಂಗ್‌ನಲ್ಲಿ 4 ಓವರ್‌ಗಳಲ್ಲಿ ಬರೋಬ್ಬರಿ 53 ರನ್ ಚಚ್ಚಿಸಿಕೊಂಡಿದ್ದರು. ಇದಾಗ್ಯೂ ಒಂದೇ ಒಂದು ವಿಕೆಟ್ ಪಡೆದಿರಲಿಲ್ಲ. ಅಂದರೆ ಬೌಲಿಂಗ್‌ನಲ್ಲಿ 13.20ರ ಸರಾಸರಿಯಲ್ಲಿ ರನ್ ಬಿಟ್ಟು ಕೊಟ್ಟ ಸ್ಯಾಮ್ ಕರನ್ ಬ್ಯಾಟಿಂಗ್‌ನಲ್ಲಿ ಕಲೆಹಾಕಿದ್ದು ಕೇವಲ 18 ರನ್‌ಗಳು ಮಾತ್ರ. ಸ್ಯಾಮ್ ಕರನ್‌ನ ಈ ಕಳಪೆ ಪ್ರದರ್ಶನವು ಇಂಗ್ಲೆಂಡ್ ತಂಡದ ಸೋಲಿಗೆ ಕಾರಣವಾಗಿದ್ದು ಮಾತ್ರ ವಿಪರ್ಯಾಸ.




Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966